Pages : 34 / 20₹

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# Swabhimani Sahakari

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ರಜತ ಮಹೋತ್ಸವ 2025

Volume - 22
Issue - 11
November - 2025







ತಾಯೆ ಬಾರ ಮೊಗವ ತೋರ
ಕನ್ನಡಿಗರ ಮಾತೆಯೆ ಹರಸು ತಾಯೆ
ಸುತರ ಕಾಯೆ ನಮ್ಮ ಜನ್ಮದಾತೆಯೆ
- ಮಂಜೇಶ್ವರ ಗೋವಿಂದ ಪೈ



## 72ನೇ ಅಖಿಲ ಭಾರತ ಸಹಕಾರ ಸಪ್ತಾಹ 2025



ಸ್ಥಳ: ರಾಯಚೂರು
ದಿನಾಂಕ:
15.11.2025
ಶನಿವಾರ

ಧ್ಯೇಯ:
ಆತ್ಮನಿರ್ಭರ ಭಾರತ
ಸಾಧನೆಗೆ ವಾಹಕಗಳಾಗಿ
ಸಹಕಾರ ಸಂಸ್ಥೆಗಳು

ನವೆಂಬರ್ ೦೫
ಗುರುನಾನಕ್ ಜಯಂತಿ



ನವೆಂಬರ್ ೦೮
ಕನಕದಾಸ ಜಯಂತಿ



## ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ:
## ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ

ಸೌಹಾರ್ದ ಸಹಕಾರಿಗಳ ಸಂಖ್ಯೆ: 6594

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1740

# 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಅಭಿವೃದ್ಧಿಯ ಮುನ್ನುಡಿಯಾಗಲಿ



**ಜಿ. ನಂಜನಗೌಡ**

> ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ 70ನೇ ಕನ್ನಡ ರಾಜ್ಯೋತ್ಸವದ, ಗುರುನಾನಕ್ ಹಾಗೂ ಕನಕದಾಸ ಜಯಂತಿಯ ಮತ್ತು 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು. ನಮ್ಮ ನಾಡು ಕನ್ನಡ, ನಮ್ಮ ನಡೆ ಕನ್ನಡ, ನಮ್ಮ ನುಡಿ ಕನ್ನಡವಾಗಿ ಸದಾ ಕನ್ನಡಮ್ಮನ ಅಭಿವೃದ್ಧಿಗಾಗಿ ನಾವೆಲ್ಲ ಮತ್ತೊಮ್ಮೆ ಸಮರ್ಪಿಸಿಕೊಳ್ಳೋಣ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ 70ನೇ ಕನ್ನಡ ರಾಜ್ಯೋತ್ಸವದ, ಗುರುನಾನಕ್ ಹಾಗೂ ಕನಕದಾಸ ಜಯಂತಿಯ ಮತ್ತು 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು. ನಮ್ಮ ನಾಡು ಕನ್ನಡ, ನಮ್ಮ ನಡೆ ಕನ್ನಡ, ನಮ್ಮ ನುಡಿ ಕನ್ನಡವಾಗಿ ಸದಾ ಕನ್ನಡಮ್ಮನ ಅಭಿವೃದ್ಧಿಗಾಗಿ ನಾವೆಲ್ಲ ಮತ್ತೊಮ್ಮೆ ಸಮರ್ಪಿಸಿಕೊಳ್ಳೋಣ.

ಪ್ರತಿ ವರ್ಷದಂತೆ ಈ ವರ್ಷವೂ ನವೆಂಬರ್ 14 ರಿಂದ ನವೆಂಬರ್ 20 ವರೆಗೆ ರಾಜ್ಯದಾದ್ಯಂತ ಸಹಕಾರ ಸಪ್ತಾಹವನ್ನು ಆಚರಿಸಲಾಗುತ್ತದೆ. 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಧ್ಯೇಯ **"ಆತ್ಮ ನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು"** ಎಂಬುದಾಗಿದೆ. ರಾಷ್ಟ್ರೀಯ ಸಹಕಾರಿ ಯೂನಿಯನ್‌ನವರು ಕಳುಹಿಸಿರುವ ಸುತ್ತೋಲೆಯನ್ವಯ 7 ದಿನಗಳಲ್ಲಿ 7 ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿ ಹಾಗೂ ಸಭೆ ಸಮಾರಂಭಗಳು ಜರುಗುತ್ತವೆ. ಸೌಹಾರ್ದ ಸಹಕಾರಿಗಳು ಪ್ರತಿ ಜಿಲ್ಲೆಯಲ್ಲಿ ಜರುಗುವ ಸಪ್ತಾಹದ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆ ಹಾಗೂ ಪ್ರಗತಿಯ ವಿವರಗಳನ್ನು ಹಂಚಿಕೊಳ್ಳುವುದರ ಜೊತೆಗೆ ನಿಮ್ಮ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಚಾರ ಮಾಡುವಂತಾಗಬೇಕು. ಸರಕಾರದ ಸಾರ್ವಜನಿಕರ ಹಾಗೂ ಸಹಕಾರಿಗಳ ಗಮನ ಸೆಳೆಯುವಂತಿರಬೇಕು.

ಕೇಂದ್ರದಲ್ಲಿ ಸಹಕಾರ ಸಚಿವಾಲಯ ಪ್ರಾರಂಭವಾದ ನಂತರ ಸಹಕಾರ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳು ಪ್ರಗತಿಪರ ಕಾರ್ಯಕ್ರಮಗಳು ಜರುಗುತ್ತಲಿವೆ. ಅದರಲ್ಲಿ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವೂ ಒಂದಾಗಿದೆ. ದೇಶದಲ್ಲಿ ಪ್ರಪ್ರಥಮವಾಗಿ ಪ್ರಾರಂಭವಾಗಿರುವ ಸಹಕಾರಿ ವಿಶ್ವವಿದ್ಯಾಲಯ ಇದಾಗಿದೆ. ಈ ಬಾರಿಯ ಸಹಕಾರ ಸಪ್ತಾಹದ 7 ದಿನಗಳಲ್ಲಿ 2ನೇ ದಿನದ ಆಚರಣೆಯಲ್ಲಿ ತ್ರಿಭುವನ್ ವಿಶ್ವವಿದ್ಯಾಲಯ ಮೂಲಕ ಸಹಕಾರ ಶಿಕ್ಷಣ ಹಾಗೂ ತರಬೇತಿ ಕ್ಷೇತ್ರದಲ್ಲಿ ಪರಿವರ್ತನೆಯಲ್ಲಿ ನಿರೀಕ್ಷಿಸಲಾಗುತ್ತಿದೆ. ಸಹಕಾರಿಗಳು ಸಹಕಾರಿ ಶಿಕ್ಷಣ ಹಾಗೂ ತರಬೇತಿಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವುದು ಅಗತ್ಯ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭವಾಗಿ 25 ವರ್ಷಗಳಾಗಿವೆ. ರಜತ ಮಹೋತ್ಸವ ಆಚರಣೆಯಲ್ಲಿದ್ದೇವೆ. ಈ 25 ವರ್ಷಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಅನೇಕ ಸವಾಲುಗಳನ್ನು ಎದುರಿಸಿದೆ. ಈಗಲು ಸಹ ಅನೇಕ ಸಮಸ್ಯೆಗಳಿವೆ. ಸೌಹಾರ್ದ ಸಹಕಾರಿ ಕಾಯ್ದೆ 8 ಬಾರಿ ತಿದ್ದುಪಡಿಯಾಗಿದೆ. ಆದರೆ ನಾವು ಹೆಮ್ಮೆ ಪಡಬೇಕಾದುದು ಏನೆಂದರೆ ಇಷ್ಟೆಲ್ಲ ಸಮಸ್ಯೆ ಹಾಗೂ ಸವಾಲುಗಳ ಮಧ್ಯೆಯೂ ಈ ಕ್ಷೇತ್ರದ ಪ್ರಗತಿ ಹಾಗೂ ಸಾಧನೆಗಳು ಸರಕಾರದ ಹಾಗೂ ಸಾರ್ವಜನಿಕರ ಗಮನ ಸೆಳೆಯುವಲ್ಲಿ ಸಫಲವಾಗಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಹೆಮ್ಮೆಯ ವಿಷಯ ಇದಾಗಿದೆ. ಈ ಸಪ್ತಾಹದ ಸಮಯದಲ್ಲಿ ತಮ್ಮ ಸೌಹಾರ್ದ ಸಹಕಾರಿಗಳು ತಮ್ಮ ವಿಶೇಷತೆಗಳ ಬಗ್ಗೆ ವಿಭಿನ್ನತೆಗಳ ಬಗ್ಗೆ ಜನರಿಗೆ ತಿಳಿಸಬೇಕು. ಜೊತೆಯಲ್ಲಿ ತಮ್ಮ ಸೌಹಾರ್ದ ಸಹಕಾರಿಗಳಯ ಪ್ರಗತಿ ಹಾಗೂ ಸಾಧನೆಗಳ ವಿವರ ನೀಡಬೇಕು.

ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ನಿಮ್ಮ ಸಂಸ್ಥೆಯಲ್ಲಿ ಸಹಕಾರದ ಸಪ್ತ ವರ್ಣದ ಧ್ವಜಾರೋಹಣವಾಗಬೇಕು. ಸಹಕಾರಿಯ ಹಿರಿಯ ಸದಸ್ಯರನ್ನು ಗುರುತಿಸುವುದು ಗೌರವಿಸುವುದು, ವಿಶೇಷ ಸಾಧನೆಗಳನ್ನು ಮಾಡಿದ ಸದಸ್ಯರನ್ನು ಅಥವಾ ಕುಟುಂಬದವರನ್ನು ಗುರುತಿಸಿ ಗೌರವಿಸುವುದು, ಸಭೆ ಸಮಾರಂಭಗಳನ್ನು ಏರ್ಪಡಿಸುವುದು, ಶಾಲಾ ಕಾಲೇಜುಗಳಲ್ಲಿ ಪ್ರಬಂಧ ಸ್ಪರ್ಧೆಗಳನ್ನು ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು ಹಾಗೂ ಸಹಕಾರ ಕ್ಷೇತ್ರದ ವಿವಿಧ ವಲಯಗಳ ಬಗ್ಗೆ ಮಾಹಿತಿ ನೀಡುವ ಆಯ್ದ ವಿಷಯಗಳ ಬಗ್ಗೆ ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಸಪ್ತಾಹವನ್ನು ವೇದಿಕೆಯನ್ನಾಗಿ ಉಪಯೋಗಿಸಿಕೊಳ್ಳಬಹುದೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅಪೇಕ್ಷೆಯಾಗಿದೆ. ಅದರಂತೆ ತಾವು ಕ್ರಮವಿಡುವಿರಾಗಿ ಆಶಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜಿ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.............................................. 2
ಸಂಪಾದಕೀಯ.............................................. 3
ಜ್ಞಾನ ಜ್ಯೋತಿ.............................................. 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .................................................. 05–19
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .................................................. 20–24
**ಲೇಖನಗಳು :**
ಸಹಕಾರ ಸಂಘ/ಸಹಕಾರಿಯ ಲೆಕ್ಕ ಪರಿಶೋದನೆಯಲ್ಲಿ ಮೂರು ವರ್ಷದಲ್ಲಿ ಒಮ್ಮೆ ಲೆಕ್ಕ ಪರಿಶೋಧನಾ ಇಲಾಖೆ ನಿರ್ದೇಶಕರಿಂದ\ ಲೆಕ್ಕ ಪರಿಶೋಧನೆ ಮಾಡಿಸಲು 2025ರಲ್ಲಿ ತಂದ ತಿದ್ದುಪಡಿ. ...................................... 25–26
ಸಹಕಾರಿ ಸಂಸ್ಥೆಯಲ್ಲಿ ನಿರ್ವಹಣೆ ಸಂದರ್ಭ ಇರಲೇ ಬೇಕಾದ ಪ್ರಮುಖ ಅಂಶಗಳು. ..... 29
ಪಟ್ಟಣ ಸಹಕಾರ ಬ್ಯಾಂಕುಗಳು– ಆಡಳಿತ ಮಂಡಳಿಯ ಜವಾಬ್ದಾರಿಗಳು .............. 32–34

# ಸಂಪಾದಕೀಯ

## ಭಾರತದ ಆರ್ಥಿಕತೆ 5 ಟ್ರಿಲಿಯನ್ ಡಾಲರ್ ಗುರಿ ಸಾಧನೆಯಲ್ಲಿ ಸಹಕಾರಿಗಳ ಪಾತ್ರ

ಭಾರತ ಆರ್ಥಿಕವಾಗಿ ಮುಂದುವರಿಯುತ್ತಿರುವ ದೇಶ. ಮುಂದಿನ ದಶಕಗಳಲ್ಲಿ ಅಮೆರಿಕ ಹಾಗೂ ಚೈನಾ ನಂತರ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮುವ ಎಲ್ಲ ಲಕ್ಷಣಗಳು ಗೋಚರವಾಗುತ್ತಿವೆ ಎಂದು ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ಭಾರತ ಸರಕಾರ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನು ಘೋಷಿಸಿದೆ. ಅದರಂತೆ ಕಾರ್ಯಪ್ರವೃತ್ತವಾಗಿದೆ. ಈ ಗುರಿ ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಸಂಬಂಧಿಸಿದೆ. ಬಡತನ ನಿವಾರಿಸುವುದು, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ತಂತ್ರಜ್ಞಾನವನ್ನು ಪ್ರತಿಯೊಬ್ಬರಿಗೂ ತಲುಪಿಸುವುದು, ಗ್ರಾಮೀಣ ಹಾಗೂ ನಗರಗಳ ಅಂತರವನ್ನು ಕಡಿಮೆಮಾಡುವುದು ಸುಸ್ಥಿರ ಬೆಳವಣಿಗೆ ಸಾಧಿಸುವುದು.

ಈ ಪ್ರಕ್ರಿಯೆಯಲ್ಲಿ ಸಹಕಾರಿಗಳ ಪಾತ್ರ ಮಹತ್ವದ್ದಾಗಿದೆ ಎಂಬುದಕ್ಕೆ ಎರಡು ಮಾತಿಲ್ಲ. ಕಳೆದ 121 ವರ್ಷಗಳ ಸಹಕಾರಿ ಕ್ಷೇತ್ರದ ಇತಿಹಾಸದಲ್ಲಿ ಸಹಕಾರ ಕ್ಷೇತ್ರ ಇದನ್ನೇ ಮಾಡುತ್ತ ಬಂದಿದೆ. ವಿಶೇಷವಾಗಿ ಬಡತನ ನಿವಾರಣೆ, ಉದ್ಯೋಗ ಕಲ್ಪಿಸುವುದು, ರೈತರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವುದು ಮುಖ್ಯ ಗುರಿಯಾಗಿರಿಸಿಕೊಂಡು ನಂತರದ ದಿನಗಳಲ್ಲಿ ಸಹಕಾರಿ ಕ್ಷೇತ್ರದ ಮೂಲಕ ಗ್ರಾಮೀಣ ಅಭಿವೃದ್ಧಿಯ ಜೊತೆಗೆ ಸಮಗ್ರ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಹಲವಾರು ವಿಧವಾದ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸಿ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಹಾಗೂ ಸಮಾಜದ ಎಲ್ಲ ವಿಧವಾದ ಜನರಿಗಾಗಿ ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸುತ್ತ ಬಂದಿದೆ. ಪರಿಣಾಮವಾಗಿ ದೇಶದಲ್ಲಿ 29 ವಿಧವಾದ 8.1 ಲಕ್ಷ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಶೇಕಡಾ 98% ಗ್ರಾಮಗಳನ್ನು ಈ ಕ್ಷೇತ್ರ ವ್ಯಾಪಿಸಿದೆ. ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ವಿತರಣೆಯ ವ್ಯವಸ್ಥೆ, ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಹೈನುಗಾರಿಕೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕ ವ್ಯವಸ್ಥೆ, ಗ್ರಾಹಕ, ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘಗಳ ಮೂಲಕ ವಸ್ತುಗಳಿಗೆ ಉತ್ತಮ ಗುಣಮಟ್ಟ ಹಾಗೂ ಉತ್ತಮ ಬೆಲೆ ಬರುವ ಹಾಗೆ ಮಾಡುವುದು, ಕೈಗಾರಿಕಾ ಸಹಕಾರ ಸಂಘಗಳು, ಗೃಹ ನಿರ್ಮಾಣ ಸಹಕಾರ ಸಂಘಗಳ ಮೂಲಕ ವಸತಿ ವ್ಯವಸ್ಥೆ, ಮಹಿಳೆಯರನ್ನು ಹಾಗೂ ಯುವಕರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಂಡು ಅವರಿಗೆ ಈ ಕ್ಷೇತ್ರದ ಮೂಲಕ ಆರ್ಥಿಕ ವ್ಯವಸ್ಥೆಗಳನ್ನು ಕಲ್ಪಿಸುವುದು ಅವರಲ್ಲಿ ಸಾಮಾಜಿಕ ಬದ್ಧತೆಯನ್ನು ಬೆಳೆಸುವುದು ಅವರಲ್ಲಿ ನಾಯಕತ್ವವನ್ನು ಬೆಳೆಸುವುದು ಮುಂತಾದ ಕಾರ್ಯಗಳನ್ನು ಸಹಕಾರ ಕ್ಷೇತ್ರ ನಿರ್ವಹಿಸುತ್ತ ಬಂದಿದೆ.

ಪ್ರಸ್ತುತ ಭಾರತ 5 ಟ್ರಿಲಿಯನ್ ಡಾಲರ ಆರ್ಥಿತೆ ಸಾಧಿಸಲು ಹೊರಟಿದೆ. ಈ ಕಾರ್ಯದಲ್ಲಿ ಸಹಕಾರ ಕ್ಷೇತ್ರ ಸಕ್ರೀಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಕೇಂದ್ರ ಸರಕಾರ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭಿಸುವುದರ ಮೂಲಕ ಸಹಕಾರ ಕ್ಷೇತ್ರವನ್ನು ದೇಶದ ಆರ್ಥಿಕತೆಯ ಮುಖ್ಯವಾಹಿನಿಯಲ್ಲಿ ಗುರುತಿಸಿದೆ. ಸಹಕಾರ ಕ್ಷೇತ್ರದ ಮೂಲಕ 54 ಕ್ಕೂ ಹೆಚ್ಚು ವಿಶೇಷ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಿದೆ. ಮುಖ್ಯವಾಗಿ ದೇಶದಲ್ಲಿ ರಾಷ್ಟ್ರೀಯ ಸಹಕಾರ ನೀತಿ, ದೇಶದ ಮೊದಲ ಸಹಕಾರ ವಿಶ್ವ ವಿದ್ಯಾಲಯ ಸ್ಥಾಪನೆ, ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಗಣಕ ಯಂತ್ರಗಳನ್ನು ಅಳವಡಿಸುವುದು, ಏಕರೂಪ ಲೆಕ್ಕಪತ್ರಗಳ ನಿರ್ವಹಣೆ ಹೀಗೆ ಹಲವಾರು ಕ್ರಮಗಳನ್ನು ಜಾರಿ ಮಾಡುತ್ತಲಿರುವುದು ಈ ದೇಶದ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿದೆ.

ಈ ಹಂತದಲ್ಲಿ ಸಹಕಾರಿಗಳಾದ ನಾವು ನಮ್ಮ ಸದಸ್ಯರಿಗೆ ಸಹಕಾರ ಕ್ಷೇತ್ರದ ಬಗ್ಗೆ ಪೂರ್ಣ ಪರಿಚಯವನ್ನು ನೀಡುವುದರ ಜೊತೆಗೆ ಸದಸ್ಯಮುಖಿಯಾಗಿ ಸಮಾಜಮುಖಿಯಾಗಿ ಸಮಗ್ರ ಸುಸ್ಥಿರ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅವಶ್ಯಕ. ಸುಸ್ಥಿರ ಅಭಿವೃದ್ಧಿಯಲ್ಲಿಯ ಹಲವು ಕಾರ್ಯಕ್ರಮಗಳನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿವೆ. ಅವುಗಳನ್ನು ಚುರುಕುಗೊಳಿಸುವುದು ಇಂದಿನ ಅವಶ್ಯಕತೆ. ಸೌಹಾರ್ದ ಸಹಕಾರಿಗಳು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತಿಯಿಂದ ಕ್ರೀಯಾಶೀಲತೆಯಿಂದ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಅರಿತು ಕಾರ್ಯನಿರ್ವಹಿಸಿ ದೇಶ ಹಾಕಿಕೊಂಡಿರುವ ಬೃಹತ್ ಗುರಿ 5 ಟ್ರಿಲಿಯನ್ ಆರ್ಥಿಕತೆ ಸಾಧನೆಗೆ ಕೈಜೊಡಿಸಿದಂತಾಗುತ್ತದೆ.

# "ಸತ್ಸಂಗದಿಂದ ಶಾಂತಿ"



## ಜ್ಞಾನ ಜ್ಯೋತಿ

– ಶ್ರೀ ಸಿದ್ಧೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ಈ ದೇಶವು ಸಂತರ–ಶರಣರ ನಾಡು, ಅನುಭಾವಿಗಳ ಬೀಡು. ಬುದ್ಧ–ಬಸವ–ಮಹಾವೀರ, ತುಕಾರಾಮರು, ಜ್ಞಾನೇಶ್ವರರು, ಮೀರಾ ಚೈತನ್ಯಮಹಾಪ್ರಭು, ಹರಿದಾಸರು, ಪುರಂದರ ದಾಸರು ಮೊದಲಾದ ಮಹಾತ್ಮರು ಈ ದೇಶದಲ್ಲಿ ಅವತರಿಸಿದರು. ಅವರು ನುಡಿದ ಆಧ್ಯಾತ್ಮಿಕ ನುಡಿಗಳನ್ನು ಪ್ರಪಂಚದ ದಾರ್ಶನಿಕರೆಲ್ಲರೂ ಮನಸಾರೆ ಮೆಚ್ಚಿಕೊಂಡು ಸಂತಸಪಟ್ಟಿದ್ದಾರೆ! ಅಂಥ ಮಹಾತ್ಮರ ನುಡಿಗಳನ್ನು ಕೇಳುವುದರಿಂದ ನಮ್ಮ ಜೀವನಕ್ಕೆ ಕಳೆ ಬರುತ್ತದೆ; ಬದುಕಿಗೆ ಬಣ್ಣ ಕಟ್ಟುತ್ತದೆ. ನೆಲ ಕಚ್ಚಿದ ಮನಸ್ಸು ಸುವಿಶಾಲವಾದ ಆಕಾಶದೆತ್ತರಕ್ಕೆ ಏರುತ್ತದೆ! ಜೀವನೇ ದೇವನಾಗುತ್ತಾನೆ!! ಅಂತೆಯೇ ನಮ್ಮ ಋಷಿ–ಮುನಿಗಳು 'ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಂ' ಸ್ವಾಧ್ಯಾಯ ಪ್ರವಚನಗಳನ್ನು ಬಿಡಬೇಡ ಎಂದು ಹೇಳಿದರು.

ಮಹಾತ್ಮರ ಉಪದೇಶಪರ ನುಡಿಗಳು, ವಚನಗಳು ತೀರಾ ಸಣ್ಣವು; ಆದರೆ ಅರ್ಥಪೂರ್ಣವಾದವುಗಳು, ನದಿಯಲ್ಲಿ ತೇಲುವುದಕ್ಕೆ ಬೆಂಡಿನ ಒಂದು ಸಣ್ಣ ಪಿಂಡೆಯಾದರೂ ಸಾಕು. ಅದಕ್ಕೆ ಬೆಂಡಿನ ಹೊರೆ ಅಥವಾ ಬ್ಯಾರಲ್ ಬೇಕೆಂದೇನಿಲ್ಲ. ಹಾಗೆಯೇ ಈ ಸಂಸಾರಸಾಗರದಲ್ಲಿ ತೇಲುವುದುಕ್ಕೆ ಬೃಹದ್ ಗ್ರಂಥಗಳೇ ಬೇಕೆಂದೇನಿಲ್ಲ. ಅರ್ಥಗರ್ಭಿತವಾದ ಮಹಾತ್ಮರ ಒಂದು ನುಡಿಯೂ ಸಾಕು.

ಮಹಾತ್ಮರ ನುಡಿಗಳು ದೀಪದಂತೆ ಬೆಳಕನ್ನು ಚೆಲ್ಲುತ್ತದೆ ವಿನಾ ಬೆಂಕಿಯಂತೆ ಉರಿಯುವುದಿಲ್ಲ. ದೀಪ ಯಾರು ಬೆಳಗಿಸಿದರೇನು ಅದು ಬೆಳಕು ಕೊಟ್ಟರೆ ಸಾಕು. ಹೇಗೆ ಜ್ಞಾನದ ಜ್ಯೋತಿಯನ್ನು ಬೆಳಗಿಸುವ ಮಹಾತ್ಮರು ಯಾರಾದರೇನು ನಮ್ಮ ಬದುಕಿನಲ್ಲಿ ಸಂತಸದ ಬೆಳಕು ಬಿದ್ದರೆ ಸಾಕಷ್ಟೇ! ಅಂತೆಯೇ ಚನ್ನಬಸವಣ್ಣನವರು "ಗೀತ ಮಾತೆಂಬ ಜ್ಯೋತಿಯ ಬೆಳಗಿಸಿಕೊಟ್ಟರು ನಮ್ಮ ಶರಣರು ದೇವಲೋಕಕ್ಕೆ ಬಟ್ಟೆ ಕಾಣಿರೋ!" ಎಂದು ಹೇಳಿದರು. ಅಲ್ಲಮ ಪ್ರಭುದೇವರು ಕೂಡಾ "ಮಾತೆಂಬುದು ಜ್ಯೋತಿರ್ಲಿಂಗ!" ಎಂದು ಹೇಳಿದರು. ಅಕ್ಕಮಹಾದೇವಿಯವರು ಅಂಥ–'ದೊಂದು ಬೆಳಕಿನ ಮಾತು ಇಲ್ಲಿದೆ.

ಸಂಗದಿಂದಲ್ಲದೆ ಅಗ್ನಿ ಹುಟ್ಟದು,
ಸಂಗದಿಂದಲ್ಲದೆ ಬೀಜ ಮೊಳೆದೋರದು,
ಸಂಗದಿಂದಲ್ಲದೆ ದೇಹವಾಗದು,
ಸಂಗದಿಂದಲ್ಲದೆ ಹೂವಾಗದು.
ಸಂಗದಿಂದಲ್ಲದೆ ಸರ್ವಸುಖದೋರದು.
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಮಹಾನುಭಾವಿಗಳ ಸಂಗದಿಂದಲಾನು
ಪರಮಸುಖಿಯಾದೆನಯ್ಯಾ.

ಸಂಗವಿಲ್ಲದೆ ಅಗ್ನಿಯು ಉತ್ಪನ್ನವಾಗುವುದಿಲ್ಲ. ಬೀಜವು ಮೊಳೆಯುವುದಿಲ್ಲ. ಹೂವು ಅರಳುವುದಿಲ್ಲ ಅಂತೆಯೆ ಅಕ್ಕಮಹಾದೇವಿಯು "ಶರಣರ ಅಲೌಕಿಕ ಅನುಭಾವದ ಸಂಗದಿಂದ ನಾನು ಪರಮಸುಖಿಯಾದೆ!" ಎಂದು ಹೇಳುತ್ತಾರೆ.

ಸದಾ ಶಾಂತವಾಗಿರುವವರೇ ಸಂತರು–ಶರಣರು, ಮಹಾತ್ಮರು–ಪರಮಾತ್ಮ ಸ್ವರೂಪರು, ಸದಾ ಅಶಾಂತವಾಗಿರುವವರೇ, ದುರ್ಜನರು ಅಲ್ಪಾತ್ಮರು. ಶಾಂತಿಯು ದೇವನಿರ್ಮಿತವಾದರೆ ಅಶಾಂತಿಯು ಮಾನವ ನಿರ್ಮಿತ! ಕೋಟಿ ಕೋಟಿ ವರುಷಗಳಿಂದ ಪಶು–ಪಕ್ಷಿಗಳು ಈ ಜಗತ್ತಿನಲ್ಲಿ ಪ್ರಶಾಂತವಾಗಿ ಬದುಕಿವೆ. ಆದರೆ ಕೆಲವು ಲಕ್ಷ ವರುಷಗಳ ಹಿಂದೆಯಷ್ಟೇ ಬಂದಿರುವ ಮಾನವನು ಮಹಾಯುದ್ಧಗಳನ್ನು ಮಾಡಿ ಭೂಮಂಡಲವೇ ಅಶಾಂತಿಯಿಂದ ಉರಿಯುವಂತೆ ಮಾಡಿದ್ದಾನೆ! ದೇವರು ನಮ್ಮನ್ನು ಈ ಲೋಕಕ್ಕೆ ನಕ್ಕು ನಲಿಯಲು ಕಳುಹಿಸಿದನೇ ವಿನಾ ಹೋರಾಟ–ಹೊಡೆದಾಟ ಮಾಡಲು ಅಲ್ಲ! ಆದ್ದರಿಂದ ನಾವು ಸದಾ ಶಾಂತಮೂರ್ತಿಗಳಾದ ಅನುಭಾವಿಗಳ ಸಂಗದಲ್ಲಿ ಇರಬೇಕು. ನನ್ನನ್ನು ಬಿಟ್ಟು ಉಳಿದವರೆಲ್ಲರೂ ಶರಣರೇ ಎಂದು ಪ್ರತಿಯೊಬ್ಬರೂ ಭಾವಿಸಬೇಕು. ಆಗ ನಾವು ನಿರಂತರ ಶರಣರ ಸಂಗದಲ್ಲಿರುತ್ತೇವೆ. ಪರಮ ಶಾಂತಿ ಪಡೆಯುತ್ತೇವೆ. ಇದುವೇ ಸತ್ಸಂಗದಿಂದ ದೊರೆಯುವ ಶಾಂತಿ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಅಕ್ಟೋಬರ್–25ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 857 | 382 | 413 | 163 | 1815 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 78 | 76 | 82 | 45 | 281 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 55 | 41 | 51 | 30 | 177 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 880 | 417 | 444 | 178 | 1919 |
| ಅಕ್ಟೋಬರ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 281 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 177 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7258 | 1293 | 2171 | 770 | 11492 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1084 | 245 | 537 | 191 | 2057 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6174 | 1048 | 1634 | 579 | 9435 |
| ಅಕ್ಟೋಬರ್ 2025ರ ತಿಂಗಳಿನಲ್ಲಿ ಒಟ್ಟು 147 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಇವರ ಅಧ್ಯಕ್ಷತೆಯಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ – 1



**ಬೆಂಗಳೂರು :** ದಿನಾಂಕ 23.10.2025ರಂದು ವಿಧಾನ ಸೌಧದಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆಯನ್ನು ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಮಾನ್ಯ ಮಾಜಿ ಸಹಕಾರ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ, ಶ್ರೀ ಹೆಚ್.ಕೆ. ಪಾಟೀಲ್ ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು, ಮಾನ್ಯ ಮಾಜಿ ಸಹಕಾರ ಸಚಿವರು ಹಾಗೂ ಹಾಲಿ ಶಾಸಕರಾದ ಶ್ರೀ ಎಸ್. ಟಿ. ಸೋಮಶೇಖರ್, ಮಾನ್ಯ ಶಾಸಕರಾದ ಶ್ರೀ ವೆಂಕಟೇಶ್, ಶ್ರೀ ರಾಘವೇಂದ್ರ ಹಿಟ್ನಾಳ್, ಸಹಕಾರ ಮಹಾಮಂಡಳದ ಮಾನ್ಯ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ, ಸಹಕಾರ ಸಂಘಗಳ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಬಿ ಶೆಟ್ಟಣ್ಣವರ್, ಮಾನ್ಯ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಹೆಚ್.ಎಂ ಕುಮಾರ್, ಮಾನ್ಯ ಶಾಸಕರಾದ ಶ್ರೀ ಷಡಾಕ್ಷರಿ, ವಿಧಾನ ಸಭಾ ಸದಸ್ಯರಾದ ಶ್ರೀಮತಿ ಬಲ್ಕಿಸ್ ಬಾನುರವರು ಭಾಗವಹಿಸಿದ್ದರು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾದ್ಯಮ ಸಹಕಾರ ಮಹಾಮಂಡಳದ ಮಾನ್ಯ ಉಪಾಧ್ಯಕ್ಷರಾದ ಶ್ರೀ ಸತೀಶ ಕೆ ಹಾಗೂ ಅನೇಕ ಸಹಕಾರ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರುಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಸಪ್ತಾಹದ ಎರಡನೇ ದಿನವಾದ ದಿನಾಂಕ 15.11.2025ರಂದು ರಾಯಚೂರಿನಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲು ತಿಳಿಸಿರುತ್ತಾರೆ. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಮಾನ್ಯ ಮುಖ್ಯಮಂತ್ರಿಗಳನ್ನು ಸನ್ಮಾನಿಸಿದರು. ಈ ಸಭೆಯಲ್ಲಿ ಸಂಯುಕ್ತ ಹಾಗೂ ತರಬೇತಿ ವಿಭಾಗದ ಸಲಹೆಗಾರರಾದ ಶ್ರೀ ವಿ.ಜೆ.ಕಾರಕೂನ್, ತರಬೇತಿ ವಿಭಾಗದ ಅಧಿಕಾರಿಯವರಾದ ಶ್ರೀ ಬಾಬು ಪಠಾಣ್ ರವರು ಭಾಗವಹಿಸಿದ್ದರು.

# ನಿಬಂಧಕರ ಕಛೇರಿ ಬೆಂಗಳೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ – 2



**ಬೆಂಗಳೂರು :** ದಿನಾಂಕ 28.10.2025 ರಂದು 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಪೂರ್ವಭಾವಿ ಸಿದ್ಧತಾ ಸಭೆಯನ್ನು ಮಾನ್ಯ ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ, ಶಾಸಕರಾದ ಹಾಗೂ ಮಾಜಿ ಸಚಿವರಾದ ಜಿ.ಟಿ ದೇವೇಗೌಡ ವಹಿಸಿದರು. ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಹೆಚ್. ಎಂ ಕುಮಾರ್, ಐ.ಎ.ಎಸ್, ಸಹಕಾರ ಇಲಾಖೆಯ ಅಪರ ನಿಬಂಧಕರು, ಜಂಟಿ ನಿಬಂಧರು, ಉಪ ನಿಬಂಧಕರು, ರಾಜ್ಯದ ವಿವಿಧ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು. ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಚರ್ಚಿಸಲಾಯಿತು. ಸ್ವಾಗತವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎಸ್ ನವೀನ್ ಇವರು ನೆರವೇರಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಿ.ಟಿ ದೇವೇಗೌಡ ಇವರು ಮಾತನಾಡಿ ಪ್ರಪ್ರಥಮ ಬಾರಿಗೆ ಮುಖ್ಯಮಂತ್ರಿಗಳು ಸಹಕಾರ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಎಲ್ಲಾ ಏಳು ದಿನಗಳ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ, ಅತ್ಯಂತ ಪಾರದರ್ಶಕದಿಂದ ನಿರ್ವಹಿಸಬೇಕು. ಸಹಕಾರ ಸಪ್ತಾಹದ ಏಳು ದಿನಗಳ ಕಾರ್ಯಕ್ರಮಕ್ಕೆ ಸಹಕಾರ ಇಲಾಖೆ ಹಾಗೂ ಸಹಕಾರ ಮಹಾಮಂಡಳದಿಂದ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಯಿತು.

## ರಾಯಚೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ – 3




**ರಾಯಚೂರು :** 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ರಾಯಚೂರು ಜಿಲ್ಲೆಯಲ್ಲಿ ಆಯೋಜಿಸುವ ಕುರಿತು ಪೂರ್ವಭಾವಿ ಸಭೆಯನ್ನು ದಿನಾಂಕ 30.10.2025ರ ಗುರುವಾರ ಬೆಳಗ್ಗೆ 11 ಗಂಟೆಗೆ ರಾಯಚೂರು ಹಾಗೂ ಕೊಪ್ಪಳ ಜಿಲ್ಲಾ ಸಹಕಾರಿ ಬ್ಯಾಂಕ್ ಕೇಂದ್ರ ಕಚೇರಿ ಸಭಾಂಗಣ, ರಾಯಚೂರಿನಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವಾನಾಥ್ ಪಾಟೀಲ್ ತೋರಣದಿನ್ನಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ವಿಜಯ್ ಕುಮಾರ್ ಪಾಟೀಲ್ ಶಾವಂತಗೇರಿ ಯವರು, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ಶೆಟ್ಟಿಯವರು, ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ದೊಡ್ಡ ಬಸವರಾಜ್ ರವರು, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಬಿ. ರಾಜಶೇಖರ್ ಯವರು, ರಾಯಚೂರು ಹಾಗೂ ಕೊಪ್ಪಳ ಜಿಲ್ಲಾ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಂ. ಬಿ. ಪೂಜಾರಿ ಯವರು, ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಎಂ. ಆರ್. ಮನೋಹರ್, ಸಹಕಾರ ಸಂಘಗಳ ಲೆಕ್ಕ ಪರಿಶೋಧನ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಬಸವರಾಜ್ ಕೊಂಕಲ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು, ಪಿ.ಎಲ್.ಡಿ ಬ್ಯಾಂಕಿನ ಅಧ್ಯಕ್ಷರುಗಳು, ಟಿ.ಎ.ಪಿ.ಸಿ.ಎಂ.ಎಸ್ ಸೊಸೈಟಿಯ ಅಧ್ಯಕ್ಷರುಗಳು, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಶೇಖ್ ಹುಸೇನ್ ರವರು, ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಗಳಾದ ಶ್ರೀ ವಿ. ಜೆ. ಕಾರಕೂನ್ ರವರು, ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸೂರ್ಯ ಕಾಂತ ರ್‍ಯಾಕಲೆ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಟರಾಜ ರವರು, ಆಂಜನೇಯ ರವರು, ತರಬೇತಿ ಅಧಿಕಾರಿಯಾದ ಬಾಬು ಪಠಾಣ್ ರವರು, ಜಿಲ್ಲಾ ಸಹಕಾರ ಯೂನಿಯನ್ ನ ಮುಖ್ಯ ಕಾರ್ಯ ನಿರ್ವಾಹಕರು, ಸಿಬ್ಬಂದಿಗಳು, ಕೆ.ಎಂ.ಎಫ್ ನ ಅಧಿಕಾರಿಗಳು, ಕೆ.ಓ.ಎಫ್ ನ ಅಧಿಕಾರಿಗಳು, ಸಹಕಾರ ಇಲಾಖೆಯ ಅಧಿಕಾರಿಗಳು, ರಾಯಚೂರು ಹಾಗೂ ಕೊಪ್ಪಳ ಜಿಲ್ಲಾ ಸಹಕಾರಿ ಬ್ಯಾಂಕಿನ ಅಧಿಕಾರಿಗಳು, ಕೆಲವು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಇತರೆ ಸಹಕಾರಿ ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು. ದಿನಾಂಕ 15.11.2025 ರಂದು ರಾಯಚೂರಿನ ಕೃಷಿ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಸಹಕಾರ ಸಪ್ತಾಹ ಆಚರಣೆ.

## ಸಿಂಧನೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ – 4



**ಸಿಂಧನೂರು :** 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ರಾಯಚೂರು ಜಿಲ್ಲೆಯಲ್ಲಿ ಆಯೋಜಿಸುವ ಕುರಿತು ಸಿಂಧನೂರು ತಾಲ್ಲೂಕಿನ ಪೂರ್ವಭಾವಿ ಸಭೆಯನ್ನು ದಿನಾಂಕ 30.10.2025ರ ಗುರುವಾರ ಮಧ್ಯಾಹ್ನ 4.30ಕ್ಕೆ ತುಂಗಭದ್ರಾ ಸೌಹಾರ್ದ ಸಹಕಾರಿ ಸಂಘ ನಿ., ಕೇಂದ್ರ ಕಚೇರಿ ಸಭಾಂಗಣ, ಗಂಗಾವತಿ ರೋಡ್ ಸಿಂಧನೂರು ಇಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಭೆಯಲ್ಲಿ ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ. ದೊಡ್ಡ ಬಸವರಾಜ್ ರವರು, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ರಾಜಶೇಖರ್ ಬಿ ರವರು, ಒಕ್ಕೂಟದ ನಿರ್ದೇಶಕರಾದ ವೆಂಕಟೇಶ್‌ರವರು, ಗುಂಡಪ್ಪ ಬಳಿಗಾರ್ ರವರು, ತುಂಗಭದ್ರಾ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಭೀಮಣ್ಣ ವಕೀಲರು, ಸಿಂಧನೂರು ತಾಲ್ಲೂಕು ಒಕ್ಕೂಟದ ಅಧ್ಯಕ್ಷರಾದ ಶ್ರೀ ಲೋಕನ ಗೌಡ ರವರು, ಸಿಂಧನೂರು ತಾಲ್ಲೂಕಿನ ಹಲವು ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರುಗಳು, ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

**ದಿನಾಂಕ 07.11.2025 ರಂದು 5ನೇ ಪೂರ್ವಭಾವಿ ಸಿದ್ಧತಾ ಸಭೆ ಹಾಗೂ ದಿನಾಂಕ 11.11.2025 ರಂದು 6ನೇ ಪೂರ್ವಭಾವಿ ಸಿದ್ಧತಾ ಸಭೆ ರಾಯಚೂರಿನಲ್ಲಿ ನಡೆಯಲಿದೆ.**

# 72ನೇ ಅಖಿಲ ಭಾರತ ಸಹಕಾರ ಸಪ್ತಾಹ ರಾಜ್ಯ ಮಟ್ಟದ ಆಚರಣೆ ವಿವರ

| ದಿನಾಂಕ | ಸಹಕಾರ ಸಪ್ತಾಹದ ದಿನ | ಆಚರಿಸುವ ಸಂಸ್ಥೆಗಳು | ಸ್ಥಳ | ಸಹಕಾರ ಇಲಾಖೆಯ ಸಮನ್ವಯಾಧಿಕಾರಿಗಳು | ಸಹಕಾರ ಮಹಾಮಂಡಳದ ಸಮನ್ವಯಾಧಿಕಾರಿಗಳು |
|---|---|---|---|---|---|
| 14.11.2025 ಶುಕ್ರವಾರ | ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು. Promoting Digitalisation to enhance operation efficiency, Accountability and Transparency. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ವಸತಿ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಬೆಂಗಳೂರು | ಶ್ರೀ ಜಿ. ಉಮೇಶ್ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ | ಶ್ರೀ ಅಶ್ವತ್ಥ ನಾರಾಯಣ, ಕಾರ್ಯದರ್ಶಿ ಇವರ ಮೇಲ್ವಿಚಾರಣೆಯಲ್ಲಿ ಶ್ರೀ ಜೆ.ಜಿ. ಸೀನಪ್ಪ, ಅಧಿಕ್ಷಕರು |
| 15.11.2025 ಶನಿವಾರ | ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ Tribhuvan Sahakar University Research, and Training Transforming Cooperative Education | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಮತ್ತು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ರಾಯಚೂರು | ಡಾ॥ ಸುರೇಶ ಗೌಡ ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಾನೂನು ವಿಭಾಗ) | ಶ್ರೀ ಅರುಣ್ ಕುಮಾರ್ ಹರಸೂರು, ಪ್ರಾಂಶುಪಾಲರು ಕೆ.ಐ.ಸಿ.ಎಂ ಕಲಬುರಗಿ |
| 16.11.2025 ಭಾನುವಾರ | ಸಹಕಾರಿ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯ ಬಲವರ್ಧನೆ. Strengthening Rural Development Through Cooperatives. | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ದಕ್ಷಿಣ ಕನ್ನಡ | ಶ್ರೀ ಪ್ರಸಾದ್ ರೆಡ್ಡಿ ಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ | ಶ್ರೀ ಲಕ್ಷ್ಮೀಕಾಂತ ಕಟ್ಟೀಮನಿ, ಎಸ್ಟೇಟ್ ಅಧಿಕಾರಿ |
| 17.11.2025 ಸೋಮವಾರ | ರಾಷ್ಟ್ರೀಯ ಸಹಕಾರಿ ನೀತಿಯ ಪರಿಸರ ವ್ಯವಸ್ಥೆ, ಭಾರತದ ಸಹಕಾರ ಸಂಸ್ಥೆಗಳಿಗೆ ರಚನಾತ್ಮಕ ಮಾರ್ಗಸೂಚಿ. National Cooperative Policy Ecosystem, Structured Roadmap for india's Cooperative. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಹೊಸಪೇಟೆ | ಶ್ರೀ ವಿಶ್ವನಾಥ ಮಲ್ಕೋಡ್ ಸಹಕಾರ ಸಂಘಗಳ ಜಂಟಿ ನಿಬಂಧಕರು ಕಲಬುರಗಿ ಪ್ರಾಂತ | ಶ್ರೀ ಶರಣಬಸಪ್ಪ ಕಾತ್ರಳ್ಳಿ, ಪ್ರಭಾರ ಸಹಕಾರ ಶಿಕ್ಷಣಾಧಿಕಾರಿ |

| | | | | | |
|---|---|---|---|---|---|
| 18.11.2025 ಮಂಗಳವಾರ | ಸಹಕಾರಿ ಉದ್ಯಮ ಶೀಲತೆಯಿಂದ ಯುವಕರು, ಮಹಿಳೆಯರು ಮತ್ತು ಅಬಲ ವರ್ಗದ ಸಬಲೀಕರಣ (ಕರಕುಶಲ, ಕೈಮಗ್ಗ, ಕಾರ್ಮಿಕ, ಮೀನುಗಾರಿಕೆ ಇತ್ಯಾದಿ) Empowering youth, women and weaker sectors (Handicrafts, handloom, labour, fisher-ier etc.) throuth Cooper-ative Entrepreneurship. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾಮಂಡಳ ನಿ., ಮತ್ತು ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗ ನೇಕಾರರ ಮಹಾಮಂಡಳ ನಿ., ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಹಾವೇರಿ | ಶ್ರೀ ಕಲ್ಲಪ್ಪ ಓಬಣ್ಣಗೋಳ್ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ | ಶ್ರೀ ಡಿ.ಆರ್ ವೆಂಕಟರಾಮು ಪ್ರಾಂಶುಪಾಲರು ಕೆ.ಐ.ಸಿ.ಎಂ ಧಾರವಾಡ |
| 19.11.2025 ಬುಧವಾರ | ಪ್ರವಾಸೋದ್ಯಮ, ಆರೋಗ್ಯ, ಹಸಿರು ಇಂಧನ, ಪ್ಲಾಟ್‌ಫಾರಂ ಸಹಕಾರಿ ಸಂಸ್ಥೆಗಳು, ಕಿಚನ್ ಸಹಕಾರ ಸಂಘಗಳು ಮತ್ತಿತರ ಉದಯೋನ್ಮುಖ ಸಹಕಾರ ಸಂಘಗಳನ್ನು ಅನುಕೂಲಕರ ಪ್ರದೇಶಗಳಿಗೆ ವಿಸ್ತರಣೆ. Expanding cooperative in emerging areas such as Tourism, Health, Green Energy, Platform coops, Kitchen coops and any other conceivable area. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಮತ್ತು ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಹಾಮಂಡಳ ನಿ., ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಕೊಪ್ಪಳ | ಶ್ರೀ ಲಕ್ಷ್ಮೀಪತಯ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ & ಇತರೆ) | ಶ್ರೀ ಮಲ್ಲಯಶೆಟ್ಟಿ ಸಹಾಯಕ ಅಭಿಯಂತಕರು |
| 20.11.2025 ಗುರುವಾರ | ಜಾಗತಿಕ ಸ್ಪರ್ಧಾತ್ಮಕತೆಗಾಗಿ ನವನಾವೀನ್ಯತೆಯ ಸಹಕಾರಿ ವ್ಯವಹಾರದ ಮಾದರಿಗಳು. Innvotive Cooperative Business models for global competitiveness. | ಕರ್ನಾಟಕ ರಾಜ್ಯ ಸಹಕಾರ ಲ್ಯಾಂಪ್ಸ್ ಮಹಾಮಂಡಳ ನಿ., ಮೈಸೂರು ಕೆ.ಎಂ.ಫ್ ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳನಿ., ಬೆಂಗಳೂರು ಮತ್ತು ಕರ್ನಾಟಕರ ರಾಜ್ಯ ಸಹಕಾರ ಮೀನುಗಾರರ ಮಹಾಮಂಡಳ ನಿ., ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಹಾಲು ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸ್ಥಳೀಯ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು | ಚಾಮರಾಜ ನಗರ | ಶ್ರೀ ಬಾಲಶೇಖರ್ ಹೆಚ್ ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಮತ್ತು ಸಿ. ಪ್ರಸಾದ್ ರೆಡ್ಡಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ | ಶ್ರೀ ಮಲ್ಲರಾಜು ಪ್ರಭಾರ ಸಂಪಾದಕರು |

# ಸಮಾಲೋಚನಾ ಸಭೆ



**ರಾಯಚೂರು :** ದಿನಾಂಕ 10.10.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ವಿಧೇಯಕ 2025ರ ಕುರಿತಂತೆ ಕಲಬುರಗಿ ಪ್ರಾಂತದ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳೊಂದಿಗೆ ಸಮಾಲೋಚನಾ ಸಭೆಯನ್ನು ಟೌನ್ ಹಾಲ್ ಸಭಾಂಗಣ, ಸುಕಾಲಪೇಟೆ ಸಿಂಧನೂರುನಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ಹಾಗೂ ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯಮಾನ್ಯರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ಶೆಟ್ಟಿ ಇವರು ವಹಿಸಿದ್ದರು. ಸಭೆಯಲ್ಲಿ ಮಾನ್ಯ ಮಾಜಿ ಸಂಸದರಾದ ಶ್ರೀ ಕೆ ವಿರುಪಾಕ್ಷಪ್ಪರವರು, ಮಾಜಿ ಶಾಸಕರುಗಳಾದ ಶ್ರೀ ಪ್ರತಾಪಗೌಡ ಪಾಟೀಲರವರು, ಶ್ರೀ ಪರಣ್ಣ ಮುನವಳ್ಳಿಯವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ. ಶ್ರೀಧರ ರವರು, ಶ್ರೀ ಹೆಚ್ ಹನುಮಂತಯ್ಯಶೆಟ್ಟಿಯವರು, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರುಗಳಾದ ಶ್ರೀಮತಿ ಮಂಜುಳಾ ಪಾಟೀಲ, ಶ್ರೀ ಬಿ. ರಾಜಶೇಖರರವರು, ಶ್ರೀ ಸಂಜೀವ ಮಹಾಜನರವರು, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ಆರ್.ಕೆ.ಡಿಸಿಸಿ ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಸೋಮನಗೌಡ ಬಾದರ್ಲಿಯವರು, ಶ್ರೀ ಶರಣಪ್ಪ ಹ್ಯಾಟಿ, ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಎಸ್ ಪಾಟೀಲರವರು, ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿಯವರು, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿಯವರು, ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪಸ್ಥಿತರಿದ್ದರು. ಸಭೆಯಲ್ಲಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಹಲವಾರು ಸಹಕಾರಿಗಳಿಂದ ಪ್ರಶ್ನೆಗಳು, ಸಲಹೆ, ಹಾಗೂ ಅಭಿಪ್ರಾಯವನ್ನು ಸ್ವೀಕರಿಸಲಾಯಿತು. ಸಹಕಾರಿಗಳು ಕೇಳಿರುವ ಪ್ರಶ್ನೆಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉತ್ತರಿಸಿದರು. ಕಲಬುರಗಿ ಪ್ರಾಂತದ 800 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಲಬುರಗಿ ಪ್ರಾಂತದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಮತ್ತು ಪ್ರಾಂತದ ಸಿಬ್ಬಂದಿಗಳು ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ 15.10.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ತಿದ್ದುಪಡಿ ಅಧಿನಿಯಮ 2025 ಕುರಿತು ಸಹಕಾರಿಗಳೊಂದಿಗೆ ಸಮಾಲೋಚನಾ ಸಭೆಯನ್ನು ಕೊಪ್ಪಳ ಜಿಲ್ಲಾ ಗಾಣಿಗೇರ ಸಭಾಂಗಣದಲ್ಲಿ ಜರುಗಿತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಚನ್ನಬಸಪ್ಪ ಕಡ್ಡಿಪುಡಿಯವರು ವಹಿಸಿದ್ದರು. ಸಭೆಯಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಹಾಗೂ ಆರ್.ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿಯವರು ಶ್ರೀ ಕುಮಾರೆಪ್ಪ ಸಿಂಗನಾಳ, ಶ್ರೀ ಬಸವರಾಜ ಪಡಿ, ಶ್ರೀ ಮುದ್ದಪ್ಪ ಬೇವಿನಹಳ್ಳಿ, ಶ್ರೀ ಗವಿಸಿದ್ದಯ್ಯ ಲಿಂಗಬಸಯ್ಯನಮಠ, ಶ್ರೀ ಫಕ್ರುದ್ದಿನಸಾಬ್ ಸಬರದ ಶ್ರೀ ಶಂಕರಗೌಡ ಹಿರೇಗೌಡ್ರ ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ಸಹಕಾರಿಗಳ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು. ಕೊಪ್ಪಳ ಜಿಲ್ಲೆಯ 168 ಸೌಹಾರ್ದ ಸಹಕಾರಿಗಳಿಂದ 232 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೀದರ :** ದಿನಾಂಕ 16.10.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ತಿದ್ದುಪಡಿ ಅಧಿನಿಯಮ 2025 ಕುರಿತು ಸಹಕಾರಿಗಳೊಂದಿಗೆ ಸಮಾಲೋಚನಾ ಸಭೆಯನ್ನು ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ವಹಿಸಿದ್ದರು. ಸಭೆಯಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ ಹಾಗೂ ನಿರ್ದೇಶಕರಾದ ಶ್ರೀ ಜಗನ್ನಾಥ ಕರಂಜೆ, ಶ್ರೀ ಬಸವರಾಜ ಹುಡಗೆ, ಶ್ರೀಕಾಂತ ಸ್ವಾಮಿ, ಶ್ರೀ ಕ್ರಾಂತಿಕುಮಾರ ಕುಲಾಲ್, ಶ್ರೀ ಸಂಜೀವ ಕುಮಾರ ಸಜ್ಜನ ಹಾಗೂ ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ರಾಜೇಶ ಕೆ.ಎಂ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಸಹಕಾರಿಗಳಿಂದ ಅಭಿಪ್ರಾಯಗಳನ್ನು ಸ್ವೀಕರಿಸಲಾಯಿತು. ಸಹಕಾರಿಗಳು ಕೇಳಿದ ಪ್ರಶ್ನೆಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರರವರು ಉತ್ತರಿಸಿದರು. 18 ಸಹಕಾರಿಗಳ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



**ಕಲಬುರಗಿ :** ದಿನಾಂಕ 23.10.2025 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ನಿರ್ದೇಶಕರು ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಕಲಬುರಗಿ ಪ್ರಾಂತೀಯ ಕಛೇರಿಯ ತರಬೇತಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ಮತ್ತು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯಮಾನ್ಯರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು, ಶ್ರೀ ಶರಣಪ್ಪ ರೋಜಾ ಮಾನ್ಯ ನಿವೃತ್ತ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ನಿರೂಪಣೆಯನ್ನು ಶ್ರೀ ಶಿವಕಾಂತ ಎನ್ ರವರು ನಿರೂಪಿಸಿದರು. ಕಾಯ್ದೆಯ ತಿದ್ದುಪಡಿಯ ಕುರಿತು ಗುರುನಾಥ್ ಜ್ಯಾಂತಿಕರವರು ಸಹಕಾರಿಗಳೊಂದಿಗೆ ಸಮಾಲೋಚಿಸಿಸಹಕಾರಿಗಳ ಪ್ರತಿನಿಧಿಗಳು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿದರು. ನಂತರ ಸಹಕಾರಿಗಳ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಶರಣಪ್ಪ ರೋಜಾ ಕಾಯ್ದೆಯ ತಿದ್ದುಪಡಿಯ ಅಂಶಗಳ ಕುರಿತು ವಿವರಣೆ ನೀಡಿದರು. ಸಭೆಯಲ್ಲಿ 62 ಸಹಕಾರಿಗಲಿಂದ 82 ಸಹಕಾ–ರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 04.10.2025 ರಂದು ಸೌಹಾರ್ದ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ, ಸಮಾಲೋಚನಾ ಸಭೆಯನ್ನು ಕೆ.ಪಿ.ಟಿ.ಸಿ. ಎಲ್ ಹಾಲ್, ಶಿವಬಸವ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ್ ಕವಟಗಿಮಠ ಇವರು ವಹಿಸಿದ್ದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆ, ಶ್ರೀ ಮಲ್ಲಿಕಾರ್ಜುನ ಹೊರಕೇರಿ, ಶ್ರೀ ಕೆ. ಶಿವಲಿಂಗಪ್ಪ, ಮಾಜಿ ನಿರ್ದೇಶಕರಾದ ಶ್ರೀಮತಿ ಸರಸ್ವತಿ ರವಿ, ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ್ ಇಂಡಿ, ಪ್ರಭುದೇವ ಸೌಹಾರ್ದ ಸಹಕಾರಿ ನಿ, ಅಧ್ಯಕ್ಷರಾದ ಶ್ರೀ ಸುಭಾಷ್ ಕವಲಾಪುರ, ಹನುಮಾನ್ ಸೌಹಾರ್ದ ಸಹಕಾರಿ ನಿ, ಚಿಕ್ಕೋಡಿ ಇದರ ಅಧ್ಯಕ್ಷರಾದ ಶ್ರೀ ಬಾಬುರಾವ ಯಾದವ್ ಹಾಗೂ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಭೆಯಲ್ಲಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಸಹಕಾರಿಗಳಿಂದ ಪ್ರಶ್ನೆಗಳು, ಸಲಹೆ, ಅಭಿಪ್ರಾಯವನು ಸ್ವೀಕರಿಸಲಾಯಿತು. ಸಹಕಾರಿಗಳು ಕೇಳಿದ ಪ್ರಶ್ನೆಗಳಿಗೆ, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉತ್ತರಿಸಿದರು. ಬೆಳಗಾವಿ ಪ್ರಾಂತದಿಂದ ಒಟ್ಟು 1283 ಪ್ರತಿನಿಧಿಗಳು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಸಭೆಯಲ್ಲಿ ಬೆಳಗಾವಿ ಪ್ರಾಂತ್ಯದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಹಾಗೂ ಪ್ರಾಂತೀಯ ಕಚೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಆಯ್ಕೆ



ಶ್ರೀ ಸಂಜೀವ್ ಮಹಾಜನ್
ಕಲಬುರಗಿ



ಶ್ರೀ ಮಹದೇವಸ್ವಾಮಿ
ಮೈಸೂರು

## ಬೆಳಗಾವಿ ವಿಭಾಗದ ಬಾಗಲಕೋಟೆ ಜಿಲ್ಲೆಯ ಪ್ರತಿನಿಧಿಯಾಗಿ ಶ್ರೀ ಗುರುನಗೌಡ ಪಾಟೀಲ



## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

**ತುಮಕೂರು:** ದಿನಾಂಕ 23.10.2025ರಂದು ತುಮಕೂರು ತಾಲೂಕಿನ 20 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ನೆರವೇರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸೌಹಾರ್ದ ಸಹಕಾರಿ ಸಂಘಗಳು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು ವರದಿಯನ್ನು ಪಡೆದುಕೊಂಡು, ಸೌಹಾರ್ದ ಕಾಯ್ದೆಯ ತಿದ್ದುಪಡಿ ಅಂಶಗಳು, ಸೌಹಾರ್ದ ಸಹಕಾರಿಗಳ ಚುನಾವಣೆ, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿ ಕುರಿತು ಮಾಹಿತಿ ನೀಡಿದರು. 16 ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 24.10.2025ರಂದು** ತುಮಕೂರು ತಾಲೂಕಿನ 20 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ನೆರವೇರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸೌಹಾರ್ದ ಸಹಕಾರಿ ಸಂಘಗಳು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು ವರದಿಯನ್ನು ಪಡೆದುಕೊಂಡು, ಸೌಹಾರ್ದ ಕಾಯ್ದೆಯ ತಿದ್ದುಪಡಿ ಅಂಶಗಳು, ಸೌಹಾರ್ದ ಸಹಕಾರಿಗಳ ಚುನಾವಣೆ, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿ ಕುರಿತು ಮಾಹಿತಿ ನೀಡಿದರು. 11 ಸಹಕಾರಿಗಳಿಂದ 13 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 17–10–2025 ರಂದು** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಿಪಟೂರು ಇಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಎಂ ರಾಜಣ್ಣ ರವರು ನೆರವೇರಿಸಿದರು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಸಂಘಗಳು ಕಾಲಕಾಲಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಬಗ್ಗೆ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿಯ ಅಂಶಗಳ ಕುರಿತು, ಸೌಹಾರ್ದ ಸಹಕಾರಿ ಸಂಘಗಳ ಚುನಾವಣೆ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿಸುವ ಕುರಿತು ಮಾಹಿತಿಗಳನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ನೀಡಿದರು. ಈ ತರಬೇತಿಯಲ್ಲಿ ತಿಪಟೂರು ತಾಲ್ಲೂಕಿನ 17 ಸೌಹಾರ್ದ ಸಹಕಾರಿಗಳಿಂದ 19 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

**ದಿನಾಂಕ 18.10.2025 ರಂದು** ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಮಾತಾ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಪಾವಗಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಜಿಲ್ಲಾ ಒಕ್ಕೂಟದ ನಿರ್ದೇಶಕರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಎಸ್. ರಾಮಮೂರ್ತಿ ರವರು ನೆರವೇರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸೌಹಾರ್ದ ಸಹಕಾರಿ ಸಂಘಗಳು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು ವರದಿಯನ್ನು ಪಡೆದುಕೊಂಡು, ಸೌಹಾರ್ದ ಕಾಯ್ದೆಯ ತಿದ್ದುಪಡಿ ಅಂಶಗಳು, ಸೌಹಾರ್ದ ಸಹಕಾರಿಗಳ ಚುನಾವಣೆ, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿ ಕುರಿತು ಮಾಹಿತಿ ನೀಡಿದರು. 14 ಸಹಕಾ–ರಿಗಳಿಂದ 16 ಪ್ರತನಿಧಿಗಳು ಭಾಗವಹಿಸಿದ್ದರು.

**ದಿನಾಂಕ 24.10.2025ರಂದು** ತುಮಕೂರು ತಾಲೂಕಿನ 20 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ

ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ನೆರವೇರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸೌಹಾರ್ದ ಸಹಕಾರಿ ಸಂಘಗಳು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸುವ ಕುರಿತು ವರದಿಯನ್ನು ಪಡೆದುಕೊಂಡು, ಸೌಹಾರ್ದ ಕಾಯ್ದೆಯ ತಿದ್ದುಪಡಿ ಅಂಶಗಳು, ಸೌಹಾರ್ದ ಸಹಕಾರಿಗಳ ಚುನಾವಣೆ, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿ ಕುರಿತು ಮಾಹಿತಿ ನೀಡಿದರು. 13 ಸಹಕಾರಿಗಳಿಂದ 14 ಪ್ರತಿನಿಧಿಗಳು ಭಾಗವಹಿಸಿದ್ದರು.

**ಉಡುಪಿ :** ದಿನಾಂಕ 14.10.2025 ಮಂಗಳವಾರ ದಂದು ಐಡಿ ಕ್ರಿಯೇಷನ್ ಆಗಿರುವಂತ ಸಹಕಾರಿಗಳಿಗೆ ಸಿ.ಎಸ್.ಸಿ. ಐಡಿಗೆ ಸಂಬಂಧಿಸಿದಂತೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಯುತ ವಿಜಯ್ ಬಿ.ಎಸ್. ರವರು ಸ್ವಾಗತವನ್ನು ಕೋರಿದರು. ಸದರಿ ಸಭೆಯಲ್ಲಿ ಉಡುಪಿ ಜಿಲ್ಲೆಯ ಸಿ.ಎಸ್.ಸಿ. ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಮಹೇಶ್ ರವರು ಭಾಗವಹಿಸಿ ಸಿ.ಎಸ್.ಸಿ. ಐ.ಡಿ.ಯ ರಚನೆ, ಪ್ರಸ್ತುತ ಸಿ.ಎಸ್.ಸಿ. ಅಡಿಯಲ್ಲಿ ನಾಗರಿಕರಿಗೆ ನೀಡಲಾಗುತ್ತಿರುವ ಸೇವೆಗಳ ಬಗ್ಗೆ ಮತ್ತು ಸಿ.ಎಸ್.ಸಿ. ವ್ಯವಹಾರದ ಬಗ್ಗೆ ಕುರಿತು ತರಬೇತಿ ನೀಡಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಸಿ. ಎಸ್. ಸಿ. ಸೆಂಟರ್‌ಗಾಗಿ ಅರ್ಜಿ ಸಲ್ಲಿಸಿದ ಉಡುಪಿ ಜಿಲ್ಲೆಯ ಸೌಹಾರ್ದ ಸಂಸ್ಥೆಯ ಮುಖ್ಯಕಾರ್ಯನಿರ್ವಾಕರು ಮತ್ತು ಸಿಬ್ಬಂದಿಗಳು ಹಾಜರಾಗಿ ತರಬೇತಿಯ ಉಪಯೋಗ ಪಡೆದುಕೊಂಡರು. ಈ ತರಬೇತಿ ಕಾರ್ಯಕ್ರಮಕ್ಕೆ 11 ಸೌಹಾರ್ದ ಸಹಕಾರಿ ಸಂಘಗಳಿಂದ 13 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ಕೋಲಾರ :** ದಿನಾಂಕ 14.10.2025ರಂದು ಮಾಲೂರು ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ರವರು ಭಾಗವಹಿಸಿ ಆಡಳಿತ ಮಂಡಳಿ ಸಭೆ, ಸಾಮಾನ್ಯ ಸಭೆ, ಚುನಾವಣಾ ಕ್ರಮಗಳು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿಯ ಕುರಿತು ಮಾಹಿತಿ ನೀಡಿದರು. ಮಾಲೂರು ತಾಲೂಕಿನ 03 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು..

**ಬಾಗಲಕೋಟೆ :** ದಿನಾಂಕ 14.10.2025 ರಂದು ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ಮತ್ತು ತೇರದಾಳ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು ಮತ್ತು ಚುನಾವಣೆಗೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ನೀಡಿದರು. ಈ ತರಬೇತಿಯಲ್ಲಿ 64 ಸಹಕಾರಿಗಳಿಂದ 77 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 15.10.2025 ರಂದು** ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮುಧೋಳ ಕಬ್ಬು ಬೆಳೆಗಾರರ ಸೌಹಾರ್ದ ಸಹಕಾರಿ ಸಂಘ ನಿ, ಮುಧೋಳ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿ ಪಡೆದು, ಚುನಾವಣೆ ಪ್ರಸ್ತಾವನೆ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ 31 ಸಹಕಾರಿಗಳಿಂದ 31 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

**ದಿನಾಂಕ 16.10.2025 ರಂದು** ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶರಣ ಚೇತನ ಸೌಹಾರ್ದ ಸಹಕಾರಿ ನಿ, ಜಮಖಂಡಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿ ಪಡೆದು, ಚುನಾವಣೆ ಪ್ರಸ್ತಾವನೆ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ 31 ಸಹಕಾರಿಗಳಿಂದ 33 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ

**ಬೆಳಗಾವಿ :** ದಿನಾಂಕ 15.10.2025 ರಂದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಸ್ಥಳೀಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಹರಿಪ್ರಿಯಾ ಸೇವಾ ಪತ್ತಿನ ಸೌಹಾರ್ದ ಸಹಕಾರಿ ನಿ, ಸ್ಟೇಷನ್ ರೋಡ, ಖಾನಾಪೂರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠ ಇವರು ನೀಡಿದರು.ಈ ಸಭೆಯಲ್ಲಿ 18 ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 15.10.2025 ರಂದು** ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ, ಹೆಬ್ಬಾಳ, ಕೋಚರಿ, ಗೋಟುರ, ಚಿಕ್ಕಾಲಗುಡ್ಡ ಹಾಗೂ ಉಳ್ಳಾಗಡ್ಡಿ ಖಾನಾಪುರ ಗ್ರಾಮಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಸಂಕೇಶ್ವರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸಿರುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮತ್ತು ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿಸುವ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುಜಯ ಬೆಳವಿ ಇವರು ನೀಡಿದರು. ಈ ಸಭೆಯಲ್ಲಿ 34 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

**ದಿನಾಂಕ 16.10.2025 ರಂದು** ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಗಂದಿಗವಾಡ, ಇಟಗಿ, ಪಾರಿಶ್ವಾಡ, ಬೀಡಿ ಗ್ರಾಮಗಳಲ್ಲಿರುವ

ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಭಾಗ್ಯಜ್ಯೋತಿ ಅರ್ಬನ್ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ, ಗಂದಿಗವಾಡ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಿದ ಮಾಹಿತಿಯ ಬಗ್ಗೆ ವರದಿ ಪಡೆದು, ಚುನಾವಣೆ ಪ್ರಸ್ತಾವನೆ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠಾ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ 14 ಸಹಕಾರಿಗಳಿಂದ 17 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

**ದಿನಾಂಕ 17.10.2025 ರಂದು** ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮುನವಳ್ಳಿ ಪಟ್ಟಣದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಾಯಕಯೋಗಿ ಸೌಹಾರ್ದ ಸಹಕಾರಿ ನಿ., ಮುನವಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಲ್ಲಿಸಿರುವ ಕುರಿತು ಸಹಕಾರಿಗಳಿಂದ ವರದಿಯನ್ನು ಪಡೆಯಲಾಯಿತು ಮತ್ತು ಚುನಾವಣೆ ಕುರಿತು, ವರ್ಚುವಲ್ ಅಕೌಂಟ್ ಮೂಲಕ ಶುಲ್ಕ ಪಾವತಿಸುವ ಕುರಿತು, ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಗಳ ಸಾಲದ ಅರ್ಜಿಗಳನ್ನು ಮತ್ತು ಠರಾವು ಪುಸ್ತಕವನ್ನು ಪರಿಶೀಲಿಸಲಾಯಿತು. ಈ ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

**ಗದಗ :** ದಿನಾಂಕ 15.10.2025 ರಂದು ಗದಗ ಜಿಲ್ಲೆಯ ರೋಣ ಮತ್ತು ಗಜೇಂದ್ರಗಡ ತಾಲೂಕಿನ ಸ್ಥಳೀಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ, ರೋಣ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳು ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಯ ಬಗ್ಗೆ ವರದಿಯನ್ನು ಪಡೆಯಲಾಯಿತು ಮತ್ತು ಚುನಾವಣೆ ಕುರಿತು ಮಾಹಿತಿಯನ್ನು ನಿಕಟಪೂರ್ವ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರಭಯ್ಯ ಹಿರೇಮಠ್ ರವರು ಮಾಹಿತಿ ನೀಡಿದರು.ಈ ತರಬೇತಿಯಲ್ಲಿ 11 ಸಹಕಾರಿಗಳಿಂದ 19 ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯಪುರ :** ದಿನಾಂಕ 17.10.2025 ರಂದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ದಿ ಬಸವನ ಬಾಗೇವಾಡಿ ಸೌಹಾರ್ದ ಸಹಕಾರಿ ನಿ., ಬಸವನ ಬಾಗೇವಾಡಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಶಾಸನಾತ್ಮಕ ಕರ್ತವ್ಯಗಳಾದ ವಾರ್ಷಿಕ ಸಾಮಾನ್ಯ ಸಭೆ, ಲೆಕ್ಕಪರಿಶೋಧನೆ, ಚುನಾವಣೆ, ಕಲಂ 34 ಕುರಿತಾದ ಮಾಹಿತಿಗಳು, ಆಡಳಿತ ಮಂಡಳಿ ಸಭೆ, ಅನುಪಾಲನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಹಾಗೂ ಸಾಮಾನ್ಯ ಸೇವಾ ಕೇಂದ್ರದ ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್ ಹಾಗೂ ಶ್ರೀಮತಿ ಪ್ರತಿಭಾ ಮಠ ಇವರು ನೀಡಿದರು. ತರಬೇತಿಯಲ್ಲಿ 22 ಸಹಕಾರಿಗಳಿಂದ 24 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 17.10.2025 ರಂದು** ವಿಜಯಪುರ ಜಿಲ್ಲೆಯ ಕೋಲ್ಹಾರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಬಸವೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ, ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಶಾಸನಾತ್ಮಕ ಕರ್ತವ್ಯಗಳಾದ ವಾರ್ಷಿಕ ಸಾಮಾನ್ಯ ಸಭೆ, ಲೆಕ್ಕಪರಿಶೋಧನೆ, ಚುನಾವಣೆ ಪ್ರಸ್ತಾವನೆ ಸಲ್ಲಿಕೆ, ಕಲಂ 34 ಕುರಿತಾದ ಮಾಹಿತಿಗಳು, ಆಡಳಿತ ಮಂಡಳಿ ಸಭೆ, ಅನುಪಾಲನಾ ವರದಿ ಸಲ್ಲಿಕೆ , ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಹಾಗೂ ಸಾಮಾನ್ಯ ಸೇವಾ ಕೇಂದ್ರದ ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್ ಹಾಗೂ ಶ್ರೀಮತಿ ಪ್ರತಿಭಾ ಮಠ ಇವರು ನೀಡಿದರು. ತರಬೇತಿಯಲ್ಲಿ 10 ಸಹಕಾರಿಗಳಿಂದ 12 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಾಮರಾಜನಗರ :** ದಿನಾಂಕ 25.10.2025 ರಂದು ಶ್ರೀ ಮುರುಘ ರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ಸಂಘ ನಿ., ಮರಿಯಾಲ, ಚಾಮರಾಜನಗರ ಈ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಇವರು ಭಾಗವಹಿಸಿ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ಆಡಳಿತ ಮಂಡಲಿ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು, ಹಾಗೂ ಸೌಹಾರ್ದ ಕಾಯ್ದೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು ಈ ಸಂದರ್ಭದಲ್ಲಿ ಸಹಕಾರಿಯ 12 ಜನ ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.

**ದಿನಾಂಕ 25.10.2025ರಂದು** ಸಂಗಮ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಈ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಇವರು ಭಾಗವಹಿಸಿ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ಆಡಳಿತ ಮಂಡಲಿ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು, ಹಾಗೂ ಸೌಹಾರ್ದ ಕಾಯ್ದೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು ಈ ಸಂದರ್ಭದಲ್ಲಿ ಸಹಕಾರಿಯ 11 ಜನ ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.

**ಚಿಕ್ಕಬಳ್ಳಾಪುರ:** ದಿನಾಂಕ 27.10.2025ರಂದು ಜೈ ಮಾರುತಿ ಸೌಹಾರ್ದ ಸಹಕಾರಿ ನಿ, ಚಿಂತಾಮಣಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಭಾಗವಹಿಸಿದ್ದರು. ಸಭೆಯಲ್ಲಿ ಸಹಕಾರಿಯ ನ್ಯೂನ್ಯತೆಗಳ ಕುರಿತು ಚರ್ಚಿಸಿ ಸೂಕ್ತ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ರವರು ಉಪಸ್ಥಿತರಿದ್ದರು.

**ಶಿವಮೊಗ್ಗ:** ದಿನಾಂಕ 28.10.2025 ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್ ರವರು ಶಿವಮೊಗ್ಗ ನಾಗರೀಕ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ, ಸಹಕಾರಿಯ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವಂತೆ ಸೂಕ್ತ ಸಲಹೆ ಮಾರ್ಗದರ್ಶನ ನೀಡಿದರು.

# ಹೊಸ ಸೌಹಾರ್ದ ಸಹಕಾರಿ ಸಂಘಗಳ ಪ್ರಾರಂಭಕ್ಕಾಗಿ ಪ್ರವರ್ತಕರಗಳ ಸಭೆ

**ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲ್ಲೂಕು** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 09 ಅಕ್ಟೋಬರ್ 2025ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಮೈರಾಡ ಕಛೇರಿ, ನಾಯಕರ ಬೀದಿ, ಹನುಮಂತನಗರ, ಹೆಚ್.ಡಿ.ಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದರ ಅಧ್ಯಕ್ಷರಾದ ಶ್ರೀ ದಶರಥ ರವರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಶಾದೀಪ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀಮತಿ ಕಲ್ಪನಾರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭವಿಷ್ಯ ನಿಧಿ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಮಹೇಶ್‌ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್.ಎಸ್ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರರವರು ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕಿನ ಮುಖಂಡರು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 22 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಾಮರಾಜನಗರ ಯಳಂದೂರು ತಾಲ್ಲೂಕು** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಯಳಂದೂರು ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 11 ಅಕ್ಟೋಬರ್ 2025ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಭರತ್ ಕಾಂಪ್ಲೆಕ್ಸ್, ಚಾಮರಾಜನಗರ ರಸ್ತೆ, ಯಳಂದೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಬಸವೇಶ್ವರ ಸಹಕಾರ ಸಂಘ ಇದರ ಅಧ್ಯಕ್ಷರಾದ ಶ್ರೀ ಸಂಜೀವ್ ಕುಮಾರ್ ರವರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮುಪ್ಪಿನ ಷಡಕ್ಷರಿ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮಾನ್ಯ ನಿರ್ದೇಶಕರಾದ ಶ್ರೀ ಸುರೇಶ್ ರವರು ವಹಿಸಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಮಂಟೇಲಿಂಗಯ್ಯ ಮುಖ್ಯ ಪ್ರವರ್ಥಕರು, ಉದ್ದೇಶಿತ ಮಹಾಮೈತ್ರಿ ಸೌಹಾರ್ದ ಸಹಕಾರಿ ಸಂಘ ನಿ ಇವರು ಮಾಡಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಶ್ರೀ ಬಲರಾಮ್ ಎನ್ ರವರು ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಯಳಂದೂರು ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರುಗಳು, ತಾಲ್ಲೂಕಿನ ಮುಖಂಡರು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 16 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಹುಣಸೂರು** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಹುಣಸೂರು ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 15 ಅಕ್ಟೋಬರ್ 2025ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಡೀಡ್ ಕ್ಯಾಂಪಸ್, ಹೆಚ್.ಡಿ ಕೋಟೆ ರಸ್ತೆ, ಚಿಕ್ಕಹುಣಸೂರು, ಹುಣಸೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವಿಜಯವಾಣಿ ಪತ್ರಿಕೆಯ ವರದಿಗಾರರಾದ ಶ್ರೀ ಶಿವಕುಮಾರ ರವರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡೀಡ್ ಸಂಸ್ಥೆಯ ಮಾನ್ಯ ಅಧ್ಯಕ್ಷರಾದ ಶ್ರೀ ಹರ್ಷ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀಮತಿ ಅನುಸೂಯರವರು, ನಿವೃತ್ತ ಉಪನ್ಯಾಸಕರಾದ ಶ್ರೀ ಸಿದ್ದೇಗೌಡ ರವರು ಮತ್ತು ಡೀಡ್ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಶ್ರೀಕಾಂತ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್. ಎಸ್ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರರವರು ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಹುಣಸೂರು ತಾಲ್ಲೂಕಿನ ಮುಖಂಡರು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 48 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಹನೂರು** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಹನೂರು ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 16 ಅಕ್ಟೋಬರ್ 2025ರ ಗುರುವಾರ ಬೆಳಿಗ್ಗೆ 11 ಗಂಟೆಗೆ ನೇಸರ ವಿದ್ಯಾ ಕೇಂದ್ರ, ಎಲ್ಲೇಮಾಲಾ, ಮಲೆ ಮಾದೇಶ್ವರ ಬೆಟ್ಟದ ರಸ್ತ, ಹನೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶಿವರಾತ್ರೇಶ್ವರ ಸೇವಾ ಟ್ರಸ್ಟ್ ಇದರ ಮುಖ್ಯಸ್ಥರಾದ ಶ್ರೀ ಮಾದೇಶ್ ರವರು ವಹಿಸಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ನಂಜುಂಡಸ್ವಾಮಿ, ಅಧ್ಯಕ್ಷರು, ಬಸವ ಪತ್ತಿನ ಸಹಕಾರ ಸಂಘ ಇವರು ಮಾಡಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಶ್ರೀ ಬಲರಾಮ್ ಎನ್ ರವರು ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಹನೂರು ತಾಲೂಕಿನ ಕೌದಳ್ಳಿ ಗ್ರಾಮದ ಬ್ರಹ್ಮರಂಬ ಸ್ವಸಹಾಯ ಗುಂಪಿನ ಕೆಲವು ಸದಸ್ಯರು, ಎಲ್ಲೇ ಮಾಳ ಗ್ರಾಮದ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ

ಜಯಲಕ್ಷ್ಮಿ, ಶ್ರೀ ಮುದ್ದು ರಾಮ ನಿವೃತ್ತ ಅಧ್ಯಾಪಕರು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 17 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ನಾಗಮಂಗಲ :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ನಾಗಮಂಗಲ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 18 ಅಕ್ಟೋಬರ್ 2025ರ ಶನಿವಾರ ಮದ್ಯಾಹ್ನ 03 ಗಂಟೆಗೆ ಶ್ರೀ ರಾಘವೇಂದ್ರ ಹೋಟೆಲ್, ಮೈಸೂರು ರಸ್ತೆ ನಾಗಮಂಗಲ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶಿವಣ್ಣ ವೈ.ಡಿ ಮಾನ್ಯ ನಿರ್ದೇಶಕರು ನಾಗಮಂಗಲ ತಾಲೂಕು ಪದವಿ ಶಿಕ್ಷಕರ ಸೌಹಾರ್ದ ಸಹಕಾರಿ ಸಂಘ ಹಾಗೂ ನಿರ್ದೇಶಕರು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಹಾದೇವ ಮಾನ್ಯ ಅಧ್ಯಕ್ಷರು ಸಮರ್ಥಕ ಸೌಹಾರ್ದ ಸಹಕಾರಿ ಸಂಘ ನಿ.,ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಲಯನ್ಸ್ ಕ್ಲಬ್ ನ ಅಧ್ಯಕ್ಷರಾದ ಶ್ರೀ ಉಗ್ರೇಗೌಡ, ಶ್ರೀ ಶಿವಸ್ವಾಮಿ, ಅಧ್ಯಕ್ಷರು ನಾಗಮಂಗಲ ತಾಲೂಕು ಪದವಿ ಶಿಕ್ಷಕರ ಸೌಹಾರ್ದ ಸಹಕಾರಿ ಸಂಘ ನಿ, ಶ್ರೀ ವಿಜಯಕುಮಾರ್ ರವರುಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರರವರು ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ನಾಗಮಂಗಲ ತಾಲ್ಲೂಕಿನ ಮುಖಂಡರು, ಇತರೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮಹಿಳಾ ಸಹಕಾರಿಗಳು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 33 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಕ್ಷಿಣ ಕನ್ನಡ :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಮುಲ್ಕಿ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 28 ಅಕ್ಟೋಬರ್ 2025ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಸೈಂಟ್ ಮೇರಿಸ್ ದಿ ಸೌಹಾರ್ದ ಸಹಕಾರಿ ಸಂಘ, ರೇಷ್ಮಾ ಕಾಂಪ್ಲೆಕ್ಸ್ ಕಿನ್ನಿಗೋಳಿ ಇಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಸೈಂಟ್ ಮೇರಿಸ್ ದಿ ಸೌಹಾರ್ದ ಸಹಕಾರಿ ಸಂಘ ನಿ, ಇದರ ಮುಖ್ಯ ಪ್ರವರ್ತಕರಾದ ಶ್ರೀ ರಾಯಲ್ ಕಿರಣ್ ಡಿಸೋಜ, ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ ಎನ್ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಉಡುಪಿ ಜಿಲ್ಲೆಯ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ ಎಸ್ ಮಾಹಿತಿಯನ್ನು ನೀಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮಹಿಳಾ ಸಹಕಾರಿಗಳು, ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 23 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಹೊಳೆನರಸೀಪುರ :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 29 ಅಕ್ಟೋಬರ್ 2025ರ ಮಂಗಳವಾರ ಬೆಳಿಗ್ಗೆ 10:30 ಗಂಟೆಗೆ ಆರ್.ಡಿ.ಆರ್ ಅಸೋಸಿಯೇಷನ್, ಕೋಟೆ ಹೊಳೆನರಸೀಪುರ ಇಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಶ್ರೀ ರವೀಶ್ ಆರ್.ಡಿ, ವಕೀಲರು ಆರ್.ಡಿ.ಆರ್ ಅಸೋಸಿಯೇಷನ್ ಇವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮಹಿಳಾ ಸಹಕಾರಿಗಳು ಹಾಗೂ ತಾಲೂಕಿನ ಪತ್ರಿಕಾ ಮಾಧ್ಯಮದವರು ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 30 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಅರಕಲಗೂಡು :** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಅಂಗವಾಗಿ ಅರಕಲಗೂಡು ತಾಲ್ಲೂಕಿನಲ್ಲಿ ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಕುರಿತು ತಾಲ್ಲೂಕು ಮಟ್ಟದ ಪ್ರವರ್ತಕರ ಸಭೆಯನ್ನು ದಿನಾಂಕ 29 ಅಕ್ಟೋಬರ್ 2025ರ ಮಂಗಳವಾರ ಸಂಜೆ 3:00 ಗಂಟೆಗೆ ಕೊದಂಡರಾಮ ದೇವಾಸ್ಥಾನದ ಆವಾರಣ, ಅರಕಲಗೂಡು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೀರಶೈವ ಲಿಂಗಾಯತ ಜನೋಪಯೋಗಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರವಿಕುಮಾರ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಗಣೇಶ್ ಮೂರ್ತಿ, ಹಿರಿಯ ಸಹಕಾರ ಕ್ಷೇತ್ರದ ನಾಯಕರು, ಇವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ರವರು ನೆರವೇರಿಸಿದರು. ನಂತರ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮಹಿಳಾ ಸಹಕಾರಿಗಳು ಹಾಗೂ ತಾಲೂಕಿನ ಪತ್ರಿಕಾ ಮಾಧ್ಯಮದವರು ಹೊಸ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸಲು ಅಸಕ್ತರು ಸೇರಿದಂತೆ ಒಟ್ಟು 25 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

# 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮದ ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055, Ph : 080-23378375-80, website : www.souharda.coop

Email : souharda@souharda.coop

ಸಂಖ್ಯೆ : ಸಂಸ/ಶಿವಿ/ವ್ಯ.ವಿ.ತ/02/2025-26/942          ದಿನಾಂಕ : 25.10.2025

**ಸುತ್ತೋಲೆ**

ಇವರಿಗೆ,

ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು.

ಮಾನ್ಯರೇ,

ವಿಷಯ : **ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಗೆ ಅಭ್ಯರ್ಥಿಗಳನ್ನು ಕಳುಹಿಸುವ ಕುರಿತು.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕ್ಷೇತ್ರದ ಶಾಸನಬದ್ಧ ಕಾರ್ಯನಿರ್ವಹಣೆಯ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ 10 ದಿನಗಳ ದೀರ್ಘಾವಧಿ ತರಬೇತಿಯನ್ನು ಆಯೋಜಿಸುತ್ತ ಬರಲಾಗಿದೆ. ಈಗಾಗಲೇ **ಹುಲಕೋಟಿ, ಕುಪ್ಪಳ್ಳಿ, ಕೆಮ್ಮಣ್ಣುಗುಂಡಿ, ಮೈಸೂರು, ಧಾರವಾಡ, ಹಂಪಿ, ಹೆಗ್ಗೋಡು, ಗುರುವಾಯನಕೆರೆ, ಯಲ್ಲಾಪುರ, ಕಮಲಾಪುರ, ಬೆಂಗಳೂರು, ಕೂಡಲಸಂಗಮ, ಶ್ರೀರಂಗಪಟ್ಟಣ, ಕೃಷಿವಿಶ್ವವಿದ್ಯಾಲಯ ರಾಯಚೂರು, ಒಡಿಯೂರು** ಈ ಸ್ಥಳಗಳಲ್ಲಿ ನಡೆಸಿದ್ದು, ತರಬೇತಿ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿತ್ತೆಂದು, ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶವಾಗಿತ್ತೆಂದು ಶಿಬಿರಾರ್ಥಿಗಳು ಹಾಗೂ ಅತಿಥಿ ಗಣ್ಯರು ಅಭಿಪ್ರಾಯ ನೀಡಿದ್ದಾರೆ.

**ಪ್ರಸ್ತುತ 24ನೇ ತಂಡದ ತರಬೇತಿ ಕಾರ್ಯಕ್ರಮವನ್ನು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಮೈಸೂರು ಇಲ್ಲಿ ದಿನಾಂಕ 09 ರಿಂದ 18 ಡಿಸೆಂಬರ್ 2025ರ ವರೆಗೆ ನಡೆಸಲು ತೀರ್ಮಾನಿಸಲಾಗಿದೆ. ತರಬೇತಿ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ.**

**ತರಬೇತಿ ವಿಷಯಗಳು**

- ಸಹಕಾರ – ಸಹಕಾರ ಸಂಘ – ಸಹಕಾರ ತತ್ವಗಳು – ಸಹಕಾರ ಕಾಯ್ದೆ – ಸಹಕಾರ ಚಳುವಳಿಯ ಹುಟ್ಟು ಬೆಳವಣಿಗೆ – ಸಾಧನೆಗಳು
- ಸೌಹಾರ್ದ ಸಹಕಾರ ಕಾಯ್ದೆ ಆಶಯ – ಹುಟ್ಟು, ಬೆಳವಣಿಗೆ – ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು – ಕಾಯ್ದೆಯ ಮುಖ್ಯಾಂಶಗಳು – ಸೌಹಾರ್ದ ಸಹಕಾರಿಗಳ ಉಪವಿಧಿಗಳು ತಿದ್ದುಪಡಿ ವಿಧಾನ – ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು – ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು
- ಕಚೇರಿ ಆಡಳಿತ ನಿರ್ವಹಣೆ – ಕಡತಗಳ ನಿರ್ವಹಣೆ – ಸಮಯ ಪಾಲನೆ – ಸೌಹಾರ್ದ ಸಹಕಾರಿಗಳ ಆಡಳಿತ ನಿರ್ವಹಣೆ
- ಸಭೆಗಳು – ಆಡಳಿತ ಮಂಡಲಿ ಸಭೆ – ವಾರ್ಷಿಕ ಸಾಮಾನ್ಯ ಸಭೆ – ವಿಶೇಷ ಸಭೆ – ಪ್ರಾಯೋಗಿಕ–1
- ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ – ಜಮಾಖರ್ಚು – ಲಾಭ ನಷ್ಟಖಾತೆ – ಆಸ್ತಿ ಜವಾಬ್ದಾರಿ ತಃಖ್ತೆ –ಬ್ಯಾಂಕ್ ಸಮನ್ವಯ ಪಟ್ಟಿ ಸಿದ್ಧಪಡಿಸುವುದು ಹಾಗೂ ವಿಶ್ಲೇಷಿಸುವುದು.–ಪ್ರಾಯೋಗಿಕ–2
- ಹಣಕಾಸಿನ ನಿರ್ವಹಣೆ – ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಲಾಭದಾಯಕ ಹೂಡಿಕೆ – ಬಡ್ಡಿಯೇತರ ಆದಾಯಗಳು – ಸಾಲಗಳ ನಿರ್ವಹಣೆ – ಗುಣಮಟ್ಟಗಳ ಸಾಲ ನೀಡಿಕೆ
- ಸಾಲ ವಸೂಲಾತಿ ಕ್ರಮಗಳು – ಮಾರಾಟಗಾರನ ಕರ್ತವ್ಯಗಳು
- ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು

- ಗ್ರಾಹಕ ಸೇವೆಗಳ ನಿರ್ವಹಣೆ ವ್ಯವಹಾರ ಅಭಿವೃದ್ಧಿ ಯೋಜನೆ
- ಒತ್ತಡ ನಿರ್ವಹಣೆ – ವ್ಯಕ್ತಿತ್ವ ವಿಕಸನ – ಮಾನವೀಯ ಮೌಲ್ಯಗಳ ನಿರ್ವಹಣೆ
- ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಇತರೆ ಮಹತ್ವದ ಅಗತ್ಯ ವಿಷಯಗಳು.

ತರಬೇತಿ ಅವಧಿಯಲ್ಲಿ ಪಠ್ಯಕ್ರಮದಂತೆ ಪ್ರತಿ ದಿನ ಯೋಗ, ಒಂದು ಬಾರಿ ಆರೋಗ್ಯ ತಪಾಸಣೆ, ಸಾಮೂಹಿಕ ಕಾರ್ಯಕ್ರಮಗಳು, ಪ್ರಾಯೋಗಿಕಗಳು, ಉತ್ತಮ ಸಹಕಾರಿ ಸಂಸ್ಥೆಗಳಿಗೆ ಭೇಟಿ ವ್ಯವಸ್ಥೆ ಇರುತ್ತದೆ.

ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ದೃಷ್ಟಿಯಿಂದ ಇಂತಹ ವಿಶೇಷ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಭ್ಯರ್ಥಿಗಳನ್ನು ಕಳುಹಿಸುವುದು ಅಗತ್ಯವೆನಿಸುತ್ತದೆ. ಕಾರ್ಯಕ್ರಮದಲ್ಲಿ 60 ಜನರಿಗೆ ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಅರ್ಜಿಯನ್ನು ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ಭಾಗವಹಿಸುವವರ ಸಂಖ್ಯೆ ನಿಗದಿತ ಸಂಖ್ಯೆಗಿಂತ ಹೆಚ್ಚಾದಲ್ಲಿ ಮುಂದಿನ ತಂಡದಲ್ಲಿ ತರಬೇತಿಗೆ ಅವಕಾಶ ಮಾಡಿಕೊಡಲಾಗುವುದು. ತರಬೇತಿ ಪಡೆದಿರುವುದಕ್ಕೆ ಪ್ರಮಾಣ ಪತ್ರ ನೀಡಲಾಗುವುದು.

ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಿಂದ ಭಾಗವಹಿಸುವ ಅಭ್ಯರ್ಥಿಗಳ ತರಬೇತಿ ಶುಲ್ಕ ಹಾಗೂ ಪ್ರಯಾಣ ವೆಚ್ಚವನ್ನು ಭರಿಸಬೇಕು. ಸಂಯುಕ್ತ ಸಹಕಾರಿಯು ಲಗತ್ತಿಸಿದ ನೋಂದಾವಣೆ ಅರ್ಜಿ ನಮೂನೆಯಲ್ಲಿ, ತಾವು ಕಳುಹಿಸುವ ಅಭ್ಯರ್ಥಿಗಳ ಹೆಸರು, ವಿಳಾಸ, ನಿರ್ವಹಿಸುತ್ತಿರುವ ಹುದ್ದೆ, ಇತ್ಯಾದಿ ವಿವರಗಳನ್ನು ಪ್ರತ್ಯೇಕವಾಗಿ ಭರ್ತಿ ಮಾಡಿ ಕಳುಹಿಸಿ ನಿಮ್ಮ ಸೀಟು ಕಾಯ್ದಿರಿಸಿಕೊಳ್ಳಲು ತಿಳಿಸಿದೆ.

ತರಬೇತಿಗೆ ಹಾಜರಾಗಲು ನೋಂದಾಯಿಸಿದ ಪ್ರತಿನಿಧಿಗಳಿಗೆ ಪ್ರವೇಶ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ತರಬೇತಿ ಅಧಿಕಾರಿಯಾದ **ಶ್ರೀ ಬಾಬು ಎಂ ಪಠಾಣ (9364702063)** ಸಂಪರ್ಕಿಸಲು ಕೋರಿದೆ.

**–: ತರಬೇತಿ ಕಾರ್ಯಕ್ರಮದ ವಿವರಗಳು : –**

- **ಭಾಗವಹಿಸುವ ವರ್ಗ** : ಕಾರ್ಯದರ್ಶಿಗಳು, ಮುಖ್ಯಕಾರ್ಯನಿರ್ವಾಹಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು
- **ತರಬೇತಿಯಅವಧಿ** : 10 ದಿನಗಳು – 8 ದಿನಗಳು ಒಳಾಂಗಣ, 2 ದಿನಗಳ ಪ್ರಾಯೋಗಿಕ ಮತ್ತು ಅಧ್ಯಯನ ಪ್ರವಾಸ.
- **ತರಬೇತಿಯ ಸ್ಥಳ** : ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಮೈಸೂರು
- **ತರಬೇತಿ ಸೌಲಭ್ಯ** : ಊಟ–ಉಪಹಾರ, ವಸತಿ, ಅಧ್ಯಯನ ಸಾಹಿತ್ಯ, ಯೋಗತರಬೇತಿ, ಆರೋಗ್ಯ ತಪಾಸಣೆ ಹಾಗೂ ಉತ್ತಮ ಸಹಕಾರಿ/ಸಂಸ್ಥೆಗಳಿಗೆ ಅಧ್ಯಯನ ಭೇಟಿ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ.
- **ವ್ಯವಸ್ಥೆ ನಿರ್ವಹಣೆ ಶುಲ್ಕ** : ರೂ. **5,000/– + 18% ಜಿಎಸ್‌ಟಿ ಸೇರಿ ಒಟ್ಟು ಮೊತ್ತ ರೂ.5,900/–** (ಊಟ, ವಸತಿ ವ್ಯವಸ್ಥೆಗಳಿಗಾಗಿ) ಭಾಗವಹಿಸುವ ಸಹಕಾರಿಯಿಂದ ಭರಿಸಬೇಕು.
- **ಅಭ್ಯರ್ಥಿಗಳ ಸಂಖ್ಯೆ** : **60** ಮಾತ್ರ
- **ತರಬೇತಿಯ ದಿನಾಂಕ** : **09.12.2025 ರಿಂದ 18.12.2025**
- ತರಬೇತಿಯ ನೋಂದಣಿ ಶುಲ್ಕವನ್ನು **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು** ಇದರ ಹೆಸರಿನಲ್ಲಿ **ಚೆಕ್/ಡಿಡಿ**ಯನ್ನು ಕಳುಹಿಸುವ ಮೂಲಕ ಪಾವತಿಸುವುದು.
- **ನೋಂದಾವಣೆಗೆ ಕೊನೆಯ ದಿನಾಂಕ 25.11.2025**

**ವಂದನೆಗಳೊಂದಿಗೆ,**

Karnataka State Souharda Federal Co-operative Ltd. Reg. No. RSR / SOU / ACTY 136 / Regn. 05 / 2001-02 dated 04-01-2002 ★ Bengaluru ★

ತಮ್ಮ ವಿಶ್ವಾಸಿ,

(ಶರಣಗೌಡ ಜಿ.ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

# ಅಕ್ಟೋಬರ್ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

## ಸಮಾಪನಾಧಿಕಾರಿ ನೇಮಕವಾಗಿರುವ ಸೌಹಾರ್ದ ಸಹಕಾರಿಗಳ ವಿವರ :

| ಕ್ರ. ಸಂ. | ಸಹಕಾರಿಯ ಹೆಸರು | ನೇಮಕಾತಿ ಪ್ರಾಧಿಕಾರ | ಸಮಾಪನಾಧಿಕಾರಿಯ ಹೆಸರು |
|---|---|---|---|
| 1 | ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಟಗುಪ್ಪ, ಹುಮಾನಾಬಾದ ತಾಲೂಕು, ಬೀದರ ಜಿಲ್ಲೆ | ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ | ಸೌಹಾರ್ದ ಜಿಲ್ಲಾ ಸಂಯೋಜಕರು, ಬೀದರ |
| 2 | ಶಾಂಭವಿ ಪತ್ತಿನ ಸೌಹಾರ್ದ ಸಹಕಾರಿ ನಿ., ಕುಂಬಾರವಾಡ ರಸ್ತೆ, ಗಣೇಶ ನಗರ, ಬೀದರ ತಾಲೂಕು, ಬೀದರ ಜಿಲ್ಲೆ | | |
| 3 | ಶ್ರೀ ಸಂತ ಸೇನಾ ಸೌಹಾರ್ದ ಪತ್ತಿನ ಸಹಕಾರಿ ನಿ., ಮೋತಿ ಬಜಾರ್, ಗಾಂಧಿಗಂಜ, ಬೀದರ ತಾಲೂಕು, ಬೀದರ ಜಿಲ್ಲೆ | | |
| 4 | ಭಾರತ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ | | |
| 5 | ಶ್ರೀ ಬಸವೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಅಂಗಡಿ ಸಂಖ್ಯೆ 3–6, ಮೇಂಗಾ ಕಾಂಪ್ಲೆಕ್, ಬೇಮಳಖೇಡ, ಚಿಟಗುಪ್ಪ ತಾಲೂಕು, ಬೀದರ ಜಿಲ್ಲೆ | | |
| 6 | ಶ್ರೀ ಬಸವೇಶ್ವರ ಕುಂಬಾರ ಕೈಗಾರಿಕಾ ಉತ್ಪಾದಕ ಸೌಹಾರ್ದ ಸಹಕಾರಿ ನಿ., ವಾರ್ಡ್ ನಂ. 6, ಕುಂಬಾರ ಓಣಿ, ಇಳಕಲ್, ಹುನಗುಂದ ತಾಲೂಕು, ಬಾಗಲಕೋಟ ಜಿಲ್ಲೆ | ಸಹಕಾರ ಸಂಘಗಳ ಉಪ ನಿಬಂಧಕರು, ಬಾಗಲಕೋಟೆ | ಸಹಾಯಕರು, ಕರಾಸೌಸಂಸನಿ., ಬಾಗಲಕೋಟೆ ಕಚೇರಿ |
| 7 | ಬಾಗಲಕೋಟೆ ತಾಲೂಕ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಸಿರಾಲ್, ಶರಣಬಸವೇಶ್ವರ ಮಠ್, ಬಾಗಲಕೋಟ ತಾಲೂಕು, ಬಾಗಲಕೋಟ ಜಿಲ್ಲೆ | | |
| 8 | ಹುನಗುಂದ ತಾಲೂಕ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಗುರುರಾಜ ಎಜುಕೇಷನ್ ಇನ್ಸ್ಟ್ಯೂಟ್, ವಿಟೋಬಾ ದೇವಸ್ಥಾನದ ಹತ್ತಿರ, ಹುನಗುಂದ ತಾಲೂಕು, ಬಾಗಲಕೋಟ ಜಿಲ್ಲೆ | | |
| 9 | ವಿಜಯಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., ಪಿ.ಕೆ.ಪಾಟೀಲ ಬಿಲ್ಡಿಂಗ್, ವಾರ್ಡ ನಂ.1, ಸೂಳಿಭಾವಿ ಓಣಿ, ಬೀಳಗಿ ತಾಲೂಕು, ಬಾಗಲಕೋಟ ಜಿಲ್ಲೆ | | ಜಿಲ್ಲಾ ಸಂಯೋಜಕರು, ಕರಾಸೌಸಂಸನಿ., ಬಾಗಲಕೋಟೆ ಕಚೇರಿ |
| 10 | ಭಾರ್ಗವ ಪತ್ತಿನ ಸೌಹಾರ್ದ ಸಹಕಾರಿ ನಿ., ರವಿರಾಜು ಕಾಂಪ್ಲೆಕ್ಸ್, ರಾಣಿಚೆನ್ನಮ್ಮ ರಸ್ತೆ, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ | ಸಹಕಾರ ಸಂಘಗಳ ಉಪ ನಿಬಂಧಕರು, ಉ.ಕ. ಜಿಲ್ಲೆ (ಕಾರವಾರ) | ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಉ.ಕ. ಜಿಲ್ಲೆ (ಕಾರವಾರ) |
| 11 | ಯುನೈಟೆಡ್ ಇಂಡಿಯಾ ಲೇಬರ್ ಅ್ಯಂಡ್ ಟ್ರಾನ್ಸ್‌ಪೋರ್ಟ್ ಸೌಹಾರ್ದ ಸಹಕಾರಿ ನಿ., ಬೆಳೆಕೇರಿ, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ | | |
| 12 | ಕರಾವಳಿ ಮತ್ತು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಪಂಚಾಯತ ಕಚೇರಿ ಎದುರು, ಬಬ್ರುವಾಡ, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ | | |
| 13 | ಆದರ್ಶ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗ್ರೆ, ಭಟ್ಕಳ ತಾಲೂಕು, ಉತ್ತರ ಕನ್ನಡ ಜಿಲ್ಲೆ | | |
| 14 | ಶ್ರೀ ಶಾಂತಾದುರ್ಗಾ ಬಂದರು ಹಾಗೂ ಅರಣ್ಯ ಕಾರ್ಮಿಕರ ಸೌಹಾರ್ದ ಸಹಕಾರಿ ನಿ., ಬೆಲೆಕೇರಿ, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ | | |
| 15 | ಅಂಕೋಲಾ ತಾಲೂಕ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ಅಂಕೋಲಾ, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ | | |
| 16 | ಮುಂಡಗೋಡ ತಾಲೂಕಾ ಸಾವಯವ ಕೃಷಿ ಸೌಹಾರ್ದ ಸಹಕಾರಿ ನಿ., ನಂ–208, ಬನವಾಸಿ ರಸ್ತೆ, ಧರ್ಮಜಲಾಶಯ ಮಾರ್ಗ, ಪಾಳ ಹೋಬಳಿ, ಮುಂಡಗೋಡ ತಾಲೂಕು, ಉತ್ತರ ಕನ್ನಡ ಜಿಲ್ಲೆ | | |
| 17 | ಗಂಗಾವಳಿ ಸಮೃದ್ಧಿ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಗಣಪತಿ ನಿಲಯ, ವಾಸರೆ ಗ್ರಾಮ, ಕುದಿಗೆ ಅಂಚೆ, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ | | |

**ಸಮಾಪನಾಧಿಕಾರಿ ಆದೇಶ ಮಾರ್ಪಾಡು ಮಾಡಿರುವ ಸೌಹಾರ್ದ ಸಹಕಾರಿಗಳ ವಿವರ**

| ಕ್ರ. ಸಂ. | ಸದಸ್ಯತ್ವ ಸಂಖ್ಯೆ | ಸಹಕಾರಿಯ ಹೆಸರು | ಮೊದಲು ನೇಮಕಗೊಂಡ ಅಧಿಕಾರಿಯ ಹೆಸರು ಮತ್ತು ಹುದ್ದೆ | ಮಾರ್ಪಾಡು ಆದೇಶ ಮಾಡಿರುವ ಅಧಿಕಾರಿಯ ಹುದ್ದೆ |
|---|---|---|---|---|
| 1 | YDG-0002 | ಅನ್ನದಾತ ಸೌಹಾರ್ದ ಸಹಕಾರಿ ನಿ., ಶಹಾಪೂರ | ಶ್ರೀ ಆನಂದರಾಯ, ಸಹಾಯಕ, ಸಂಯುಕ್ತ ಸಹಕಾರಿ ಕಲಬುರಗಿ | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಯಾದಗಿರಿ ಜಿಲ್ಲೆ |
| 2 | YDG-0006 | ಗ್ರಾಂಪ್ಲೋ ಇಂಟರ್‌ನ್ಯಾಶನಲ್ ಮಹಿಳಾ ಸೌಹಾರ್ದ ಸಹಕಾರಿ ನಿ., ಪರಮಾನಂದ ನಿಲಯ, ವಿದ್ಯಾನಗರ, ಶಹಾಪೂರ, ಜಿ: ಯಾದಗಿರಿ. | ಶ್ರೀ ಆನಂದರಾಯ, ಸಹಾಯಕ, ಸಂಯುಕ್ತ ಸಹಕಾರಿ ಕಲಬುರಗಿ | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಯಾದಗಿರಿ ಜಿಲ್ಲೆ |
| 3 | YDG-0008 | ಕಲ್ಯಾಣ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., ಕೆಂಭಾವ | ಶ್ರೀ ಆನಂದರಾಯ, ಸಹಾಯಕ, ಸಂಯುಕ್ತ ಸಹಕಾರಿ ಕಲಬುರಗಿ | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಯಾದಗಿರಿ ಜಿಲ್ಲೆ |
| 4 | YDG-0023 | ಶ್ರೀ ಅಮೋಘ ಸಿದ್ದೇಶ್ವರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಶಹಾಪೂರ | ಶ್ರೀ ಆನಂದರಾಯ, ಸಹಾಯಕ, ಸಂಯುಕ್ತ ಸಹಕಾರಿ ಕಲಬುರಗಿ | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಯಾದಗಿರಿ ಜಿಲ್ಲೆ |
| 5 | YDG-0024 | ಶ್ರೀ ಗುರು ಕಾಂತೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕೆಂಭಾವಿ | ಶ್ರೀ ಆನಂದರಾಯ, ಸಹಾಯಕ, ಸಂಯುಕ್ತ ಸಹಕಾರಿ ಕಲಬುರಗಿ | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಯಾದಗಿರಿ ಜಿಲ್ಲೆ |

**ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ ಅಕ್ಟೋಬರ್ ಮಾಹೆಯಲ್ಲಿ ಒಟ್ಟು 06 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಯಾದಗಿರಿ :** ದಿನಾಂಕ 28.10.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ–2025 ಮತ್ತು ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳು" ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟಲ್ ಮಾತೋಶ್ರೀ ಫ್ಯಾಮಿಲಿ ರೆಸ್ಟೋರೆಂಟ್, ಬಾಪುಗೌಡ ನಗರ, ಶಹಾಪುರದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಿ ಮುಸ್ಲಿಂ ಮೈನಾರಿಟಿ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರು ಮತ್ತು ತಾಲೂಕು ವಕೀಲರ ಸಂಘದ ಮಾನ್ಯ ಅದ್ಯಕ್ಷರಾದ ಶ್ರೀ ಯೂಸುಫ್ ಸಿದ್ಧಿಕ್ಕಿ ಹಾಗು ಶಹಾಪುರ ಸಮೃದ್ಧಿ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಅರಬೋಳ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆ ರವರು ನಡೆಸಿಕೊಟ್ಟರು. ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪವನ ನಡೆಸಿಕೊಟ್ಟರು. ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 65 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಉದ್ಘಾಟನೆ



**ಬೆಳಗಾವಿ :** ದಿನಾಂಕ 04.10.2025 ರಂದು ಶ್ರೀ ಮಹಾಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕಲ್ಲೋಳಿ ಇದರ ನೂತನ ಕಟ್ಟಡ ಉದ್ಘಾಟನಾ ಸಮಾರಂಭ ಜರುಗಿತು. ಈ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಉದ್ಘಾಟಕರಾಗಿ ಮಾನ್ಯ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ ರವರು, ಅತಿಥಿಗಳಾಗಿ ಮಾನ್ಯ ಮಾಜಿ ಸಂಸದರಾದ ಶ್ರೀ ರಮೇಶ ಕತ್ತಿ, ಮಾನ್ಯ ಮಾಜಿ ಶಾಸಕರಾದ ಶ್ರೀ ಪಿ ರಾಜೀವ್ ರವರು ಹಾಗೂ ಮಾನ್ಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯರಾದ ಶ್ರೀ ಈರಣ್ಣ ಕಡಾಡಿ ರವರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



**ದಕ್ಷಿಣ ಕನ್ನಡ :** ದಿನಾಂಕ : 24.10.2025ರಂದು ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತದ 24ನೇ ಕಲ್ಲಡ್ಕ ಶಾಖೆಯು ಲಲಿತ ಎಸ್.ರಾವ್ ವಾಣಿಜ್ಯ ಸಂಕೀರ್ಣದಲ್ಲಿ ಉದ್ಘಾಟನೆ ಗೊಂಡಿತು. ನೂತನ ಶಾಖೆಯನ್ನು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರು ನೂತನ ಶಾಖೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು. ಒಡಿಯೂರು ಶ್ರೀ ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಮಾರ್ಗದರ್ಶಕಿ ಯವರಾದ ಶ್ರೀ ಶ್ರೀ ಸಾಧ್ವಿ ಮಾತಾನಂದಮಯೀ ಆಶೀರ್ವಚನ ನೀಡಿ ಮಾರ್ಗದರ್ಶನ, ಪ್ರಯತ್ನ, ಉದ್ದೇಶ ಇಟ್ಟು ಸಾಗಿದಾಗ ಸಂಸ್ಥೆ ಯಶಸ್ಸು ಕಾಣುತ್ತದೆ. ವಿಶ್ವಾಸ ಹಾಗೂ ಶ್ರದ್ಧೆಯನ್ನಿಟ್ಟುಕೊಂಡಿದ್ದರಿಂದ ಸಹಕಾರಿ ಉನ್ನತ ಸ್ಥಾನಕ್ಕೇರಿದೆ. ಸಂಸ್ಥೆಯ ಶ್ರೇಯಸ್ಸಿಗೆ ಗ್ರಾಹಕರ ಸಹಕಾರ ಅಗತ್ಯವಿದ್ದು, ಸೇವಾಕಾರ್ಯದಲ್ಲಿ ಸೇವಾ ಮನೋಭಾವದಿಂದ ತೊಡಗಿಸಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಮಾಜಿ ಶಾಸಕರಾದ ಪದ್ಮನಾಭ ಕೊಟ್ಟಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ಹಾಗೂ ದಕ್ಷಿಣಕನ್ನಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ನಂದನ್ ಬಿ.ಎನ್. ರವರು ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ಬರ್ಗದವರು ಉಪಸ್ಥಿತರಿದ್ದರು. ಸಹಕಾರಿ ಸಂಘದ ಅಧ್ಯಕ್ಷ ಎ. ಸುರೇಶ್ ರೈ ಸ್ವಾಗತಿಸಿದರು. ನಿರ್ದೇಶಕರಾದ ಗಣಪತಿ ಭಟ್ ಸೇರಾಜೆ ವಂದಿಸಿದರು. ಲೋಕೇಶ್ ರೈ ಬಾಕ್ರಬೈಲ್ ಕಾರ್ಯಕ್ರಮ ನಿರೂಪಿಸಿದರು.

**ಉಡುಪಿ :** ದಿನಾಂಕ : 13.10.2025ರಂದು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರ ಸಮ್ಮುಖದಲ್ಲಿ ಹಾಗೂ ಪ್ರಾಂತೀಯ ಅಧಿಕಾರಿಯವರ ಉಪಸ್ಥಿತಿಯಲ್ಲಿ ಶ್ರೀ ಗುರು ನಿತ್ಯಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಇದರ ಆಡಳಿತ ಮಂಡಳಿ ಸಭೆಯನ್ನು ಆಯೋಜನೆ ಮಾಡಲಾಗಿತ್ತು ಸದರಿ ಸಭೆಯಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಹಾಗೂ ಸಾಲ ವಸೂಲಾತಿಯ ಕುರಿತು ಚರ್ಚಿಸಿ ಸೂಕ್ತ ಮಾರ್ಗದರ್ಶನ ನೀಡಲಾಯಿತು.



**ತುಮಕೂರು :** ದಿನಾಂಕ 06.10.2025ರಂದು ಶ್ರೀ ಉದಯ ರವಿ ಸೌಹಾರ್ದ ಸಹಕಾರಿ ಸಂಘ ನಿ, ತಿಪಟೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಹಾಗೂ ತುಮಕೂರು ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಿ ಅಗತ್ಯ ಸಲಹೆ/ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.



**ಗದಗ :** ದಿನಾಂಕ 06.10.2025 ರಂದು ಶ್ರೀ ಕೃಷ್ಣ ರೈತ ಸ್ನೇಹಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ, ಹುಲಕೋಟಿ ಇವರು ಸೌಹಾರ್ದ ಸಹಕಾರ ಸಮನ್ವಯ ಸಭೆಯನ್ನು ಶ್ರೀ ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆ ಇವರು ವಹಿಸಿದ್ದರು. ಶ್ರೀ ಪ್ರಶಾಂತ್ ಮುಧೋಳ್ ಹಾಗೂ ಸೌಹಾರ್ದಗಳ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸೌಹಾರ್ದ ಕಾಯ್ದೆ ತಿದ್ದುಪಡಿಯಾಗಿರುವ ಅಂಶಗಳ ಕುರಿತು ಹಾಗೂ ಸೌಹಾರ್ದಗಳ ಪಂಚವಾರ್ಷಿಕ ಯೋಜನೆಗಳ ಕುರಿತು ಸಭೆಯಲ್ಲಿ ಚರ್ಚಿಸಿದರು. ಈ ಕಾರ್ಯಕ್ರಮದಲ್ಲಿ ಗಂಗಮ್ಮ ನಾಯ್ಕರ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಭಾಗವಹಿಸಿದ್ದರು.



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾಗಿ ಜಗನ್ನಾಥ ಶೆಟ್ಟಿ ಪಿ ಅವಿರೋಧ ಆಯ್ಕೆ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತ ಉಡುಪಿ ಇದರ ಮುಂದಿನ 5 ವರ್ಷಗಳ ಅವಧಿಗೆ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ನೂತನ ಅಧ್ಯಕ್ಷರಾಗಿ ಶ್ರೀ ಪಿ ಜಗನ್ನಾಥ ಶೆಟ್ಟಿ ಹಾಗೂ ಉಪಾಧ್ಯಕ್ಷರಾಗಿ ಅಶೋಕ್ ಪ್ರಭು ರವರು ದಿನಾಂಕ 15–10–2025ರಂದು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರಾಗಿ ಆಯ್ಕೆ ಗೊಂಡಿರುವ ಎಲ್ಲಾ ನಿರ್ದೇಶಕರಿಗೂ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಪರವಾಗಿ ಹೃತ್ಪೂರ್ವಕ ಅಭಿನಂದನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ. ರವರು ಸಲ್ಲಿಸಿದರು. ಈ ಸಂಧರ್ಭದಲ್ಲಿ ಒಕ್ಕೂಟದ ಸಿ.ಇ.ಒ ರವರು ಹಾಗೂ ಉಡುಪಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ವಿಜಯ್ ಬಿ.ಎಸ್.ರವರು ಉಪಸ್ಥಿತರಿದ್ದರು.

**ತುಮಕೂರು :** ದಿನಾಂಕ 06.10.2025ರಂದು ಶ್ರೀ ವಿನಾಯಕ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ತಿಪಟೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿರವರು ಹಾಗೂ ತುಮಕೂರು ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಿ ಅಗತ್ಯ ಸಲಹೆ/ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

**ಉತ್ತರ ಕನ್ನಡ :** ದಿನಾಂಕ 14.10.2025 ರಂದು ಕಾರವಾರ ನಗರದಲ್ಲಿ ಶ್ರೀ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ನಿ., ಠೇವಣಿದಾರರ ಸಭೆಯನ್ನು ಮಾನ್ಯ ಸಿಐಡಿ ಅಧಿಕಾರಿಗಳ ಉಪಸ್ಥತಿಯಲ್ಲಿ ಜರುಗಿತು. ಸಭೆಯಲ್ಲಿ ಪ್ರಸ್ತುತದವರೆಗಿನ ಕ್ರಮದ ಬಗ್ಗೆ ಹಾಗೂ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುಬಹುದಾದ ಕ್ರಮದ ಬಗ್ಗೆ ಠೇವಣಿದಾರರಿಗೆ ಮಾಹಿತಿ ನೀಡಿರುತ್ತಾರೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ನವೆಂಬರ್ ಕೊನೆಯವಾರದಿಂದ ಹಾಗೂ ಡಿಸೆಂಬರ್ ಕೊನೆಯವಾರದ ವರೆಗೆ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗುವುದು. ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು.
2. ನವೆಂಬರ್ ಮಾಹೆಯಲ್ಲಿ ಸಹಕಾರ ಕ್ಷೇತ್ರದ ಧುರೀಣರಿಗೆ ಪ್ರಮುಖರ ಸಭೆಯನ್ನು ಹಮ್ಮಿಕೊಳ್ಳಲಾಗುವುದು.
3. ಡಿಸೆಂಬರ್ ಮಾಹೆಯಲ್ಲಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಾಹಕರು/ ಹಿರಿಯ ಅಧಿಕಾರಿಗಳಿಗೆ ಉನ್ನತ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗುವುದು.
4. ಡಿಸೆಂಬರ್ ಮಾಹೆಯಲ್ಲಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
4. ಡಿಸೆಂಬರ್ ಮಾಹೆಯಲ್ಲಿ ಹೆಚ್ಚು ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳಿಗೆ ಹಾಗೂ ಕಡಿಮೆ ಲಾಭವಿರುವ ಸೌಹಾರ್ದ ಸಹಕಾರಿಗಳಿಗೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.
5. ಡಿಸೆಂಬರ್/ ಜನವರಿ ಮಾಹೆಯಲ್ಲಿ ಸೌಹಾರ್ದ ಸಹಕಾರಿಗಳ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗುವುದು.

## ನೂತನ ಕಟ್ಟಡ ಉದ್ಘಾಟನೆ



**ತುಮಕೂರು** : ದಿನಾಂಕ 06.10.2025ರಂದು ಷ॥ಬ್ರ॥ ಗೋಪಾಲ ಚನ್ನಬಸವೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಶ್ರೀ ಚನ್ನಬಸವೇಶ್ವರ ಸ್ವಾಮಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತಿಪಟೂರು ಇದರ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ನೆರವೇರಿತು. ಕಟ್ಟಡದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ಮಾನ್ಯ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ನೆರವೇರಿಸಿದರು. ತುಮಕೂರು ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಸಿ. ಜ್ಯೋತಿ ರವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ 18.10.2025 ರಂದು ಬೆಳಗಾವಿ ಪ್ರಾಂತೀಯ ಕಛೇರಿಗೆ ಡಾ: ಉದಯ ಶಂಕರ ಆವಸ್ತಿ ಇಫ್ಕೋ ಕಂಪನಿ ಮಾಜಿ ಮ್ಯಾನೇಜಿಂಗ್ ಡೈರೆಕ್ಟರ್ ರವರು ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಹೂಗುಚ್ಛ ನೀಡುವುದರ ಮೂಲಕ ಗೌರವಿಸಿದರು. ಈ ಸಂದರ್ಭದಲ್ಲಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವಿಷಯಾಧಾರಿತ ಆನ್‌ಲೈನ್ ತರಬೇತಿ ಕಾರ್ಯಕ್ರಮ

ದಿನಾಂಕ 30.10.2025 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಾಂತದಲ್ಲಿ 2026ನೇ ಸಾಲಿನಲ್ಲಿ ಚುನಾವಣೆ ನಡೆಸಬೇಕಾದ ಸೌಹಾರ್ದಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಆನ್‌ಲೈನ್ ಮೂಲಕ "ಚುನಾವಣೆ ಪೂರ್ವಸಿದ್ಧತೆ ಮತ್ತು ಪ್ರಕ್ರಿಯೆಗಳು" ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ. ಎಸ್. ಕೆ, ಹಾಗೂ ಶ್ರೀಮತಿ ಭಾರತಿ. ಜಿ.ಭಟ್, ಇವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನಂಜುಂಡೇಗೌಡ, ಸಹಕಾ–ರಿಗಳ ಅಪರ ನಿಬಂಧಕರು ಹಾಗೂ ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಗುರುಪ್ರಸಾದ್ ಬಂಗೇರ, ಮಾನ್ಯ ಪ್ರಾಂತೀಯ ಅಧಿಕಾರಿ, ಪ್ರಾಂತೀಯ ಕಛೇರಿ, ಮೈಸೂರು ರವರು ಮತ್ತು ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಶಿವಕುಮಾರ ಎ, ಇವರು ನೆರವೇರಿಸಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಸುರೇಶ್ ಆರ್.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಮತ್ತು ಕೊಡಗು ಜಿಲ್ಲೆ ಇವರು ನೆರವೇರಿಸಿದರು. ಸದರಿ ತರಬೇತಿಯಲ್ಲಿ ಒಟ್ಟು 130 ಸೌಹಾರ್ದ ಸಹಕಾರಿಗಳಿಂದ 145 ಸಹಕಾರಿಗಳು ಭಾಗವಹಿಸಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



**ಹೊನ್ನಾವರ** : ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಸಂಘ ನಿ., ಹೊನ್ನಾವರ ಇದು ಸಹಕಾರಿಯ ಮೃತ ಸದಸ್ಯರ ಕುಟುಂಬಕ್ಕೆ ರೂಪಾಯಿ ಒಂದು ಲಕ್ಷವರೆಗೆ ಪರಿಹಾರ ನೀಡುವ ಮೂಲಕ ಸಾಂತ್ವನ ದೊರಕುವ ಅಮೂಲ್ಯವಾದ ಜೀವನ ಮೌಲ್ಯಯೋಜನೆ ಪರಿಚಯಿಸಿದ್ದು, 2024–25 ವರ್ಷಾಂತ್ಯಕ್ಕೆ 26,807 ಸದಸ್ಯರು ಈ ಯೋಜನೆಗೆ ಒಳಪಟ್ಟಿದ್ದು, 189 ಮೃತ ಸದಸ್ಯರ ರೂ. 95,41,128/– ಮರಣೋತ್ತರ ಪರಿಹಾರ ನೀಡಿದ್ದು ಇದರಲ್ಲಿ ರೂ. 64,80,956/– ಮೃತ ಸದಸ್ಯರ ಸಾಲಬಾಕಿಗೆ ಹಾಗೂ ರೂ30,60,172/– ಮೃತ ವಾರಸುದಾರರಿಗೆ ನೀಡಿದೆ. 10 ಮೃತ ಸದಸ್ಯರ ವಾರಸುದಾರರಿಗೆ ರೂ4,81,601/– ಪರಿಹಾರ ನೀಡಿದೆ. ಇದರಿಂದಾಗಿ ನೊಂದ ಕುಟುಂಬಕ್ಕೆ ಸಾಂತ್ವನ ನೀಡುವ ಮಹತ್ತರವಾದ ಕೆಲಸ ಮಾಡುತ್ತಿದೆ ಎಂದು ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಸಂಘ, ನಿ., ಹೊನ್ನಾವರ ಇದರ ಅಧ್ಯಕ್ಷ ಜಿ. ಜಿ. ಶಂಕರ ತಿಳಿಸಿದರು. ಅವರು ದಿನಾಂಕ 20 ಸಪ್ಟಂಬರ್ 2025ರಂದು ಹೊನ್ನಾವರದ ಪ್ರಭಾತನಗರದಲ್ಲಿ ಜರುಗಿದ ಸಹಕಾರಿಯ 2024–25ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆ ಉದ್ಘಾಟಿಸಿ ಮಾತನಾಡುತ್ತಿದ್ದರು.

ಉತ್ತರಕನ್ನಡ ಜಿಲ್ಲೆಯಲ್ಲಿ 14, ಉಡುಪಿ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ತಲಾ 2 ಶಾಖೆಗಳಂತೆ ಒಟ್ಟೂ 18 ಶಾಖೆಗಳನ್ನು ಹೊಂದಿರುವ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿಯು 2024–25ನೇ ಸಾಲಿನಲ್ಲಿ ರೂ2.74 ಕೋಟಿ ಲಾಭ ಗಳಿಸಿದ್ದು, ವರ್ಷಾಂತ್ಯಕ್ಕೆ ಒಟ್ಟೂ 80,908 ಸದಸ್ಯರು, ರೂ7.04 ಕೋಟಿ ಶೇರು ಬಂಡವಾಳ, ರೂ131.19 ಕೋಟಿಠೇವಣಿ ಹೊಂದಿದ್ದು, ರೂ120.48 ಕೋಟಿ ಸದಸ್ಯರ ಸಾಲ ಇರುತ್ತದೆ. ದುಡಿಯುವ ಬಂಡವಾಳ ರೂ152.04 ಕೋಟಿಯಷ್ಟು ಆಗಿದ್ದು, 2024–25ನೇ ಸಾಲಿನಲ್ಲಿ ರೂ251.68 ಕೋಟಿಯಷ್ಟು ವ್ಯವಹಾರ ಮಾಡಿದೆಯೆಂದು ತಿಳಿಸಿದರು. ಶೇ. 91.53 ರಷ್ಟುಸಾಲ ವಸೂಲಿ ಮಾಡಿದ್ದು ಅತ್ಯುತ್ತಮ ಸಾಧನೆ ಎಂದರು. ಈ ಎಲ್ಲಾ ಅಭಿವೃದ್ಧಿಗೆ ಸದಸ್ಯರು ನೀಡಿದ ಸಹಕಾರ, ಉಪಾಧ್ಯಕ್ಷರು, ನಿರ್ದೇಶಕರು, ಬಿಡಿಸಿ ನಿರ್ದೇಶಕರುಗಳ ಸಲಹೆ–ಸಹಕಾರ, ಪ್ರಧಾನಕಛೇರಿ ಹಿರಿಯ ಅಧಿಕಾರಿಗಳು, ಸಮಸ್ತ ಸಿಬ್ಬಂದಿಗಳು, ಫೀಲ್ಡ್ ಎಕ್ಸಿಕ್ಯೂಟಿವ್‌ಗಳ ಪರಿಶ್ರಮವೇಕಾರಣಎಂದು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಸಮಾಜದಲ್ಲಿ ಅತ್ಯುನ್ನತ ಸೇವೆ ನೀಡುತ್ತ, ಸಹಕಾ–ರಿಗೂ ಸೇವೆ ನೀಡುತ್ತಿರುವ ಶಿವಮೊಗ್ಗ ಜಿಲ್ಲೆಯ ಸೊರಬದ ನಿವೃತ್ತ ಶಿಕ್ಷಕ ಶ್ರೀ ಗಂಗಾಧರಟಿ. ಎಚ್., ಉಡುಪಿ ಜಿಲ್ಲೆಯ ಬೈಂದೂರಿನ ಉದ್ಯಮಿ ಶ್ರೀ ಕೃಷ್ಣಯ್ಯ ಮದ್ದೋಡಿ ದಂಪತಿಗಳು, ಗಂಗೊಳ್ಳಿಯ ಕ್ಯಾಲೆಂಡರ್ ಮತ್ತು ಡೈರಿ ಏಜಂಟರಾದ ಶ್ರೀ ಎಂ. ಜಿಜಗದೀಶ ಭಂಡಾರ್ಕರ್ ಅವರನ್ನು ಪ್ರೀತಿಪೂರ್ವಕವಾಗಿಗೌರವಿಸಲಾಯಿತು.

ಜನರಲ್ ಮೆನೇಜರ್ ಮಹೇಶ ಎಸ್. ಶೆಟ್ಟಿ ಸ್ವಾಗತಿಸಿದರು ಮತ್ತು 2023–24 ಸಾಲಿನ ವರದಿ ವಾಚಿಸಿದರು. ನಿರ್ದೇಶಕ ಜಿ. ಆರ್. ಹೆಗಡೆ ಪ್ರಾಸ್ತಾವಿಕ ನುಡಿದರು. ವರದಿ ಸಾಲಿನಲ್ಲಿ ಸಾಧನೆ ಮಾಡಿದ ಶಾಖೆ, ಸಿಬ್ಬಂದಿ, ಫೀಲ್ಡ್‌ಎಕ್ಸಿಕ್ಯೂಟಿವ್, ನಿರ್ದೇಶಕರು ಹಾಗೂ ಬಿಡಿಸಿ ನಿರ್ದೇಶಕರುಗಳಿಗೆ ನೆನಪಿನ ಕಾಣಿಕೆ ನೀಡಿ ಸತ್ಕರಿಸುವ ಕಾರ್ಯಕ್ರಮವನ್ನು– ಎಜಿಎಂಎಡ್ವಿನ್‌ರೆ ಬೆಲ್ಲೋ ನಡೆಸಿಕೊಟ್ಟರು. ಆಡಳಿತ ಮಂಡಳಿ ನಿರ್ದೇಶಕರಾದ ಸುಬ್ರಾಯಎನ್. ಭಟ್ಟ, ನರಸಿಂಹ ಟಿ ಪಟಗಾರ, ಲಿಫರ್ಡರೋಡ್ರಿಗ್ಸ್, ರಾಜೇಶದೇಸಾಯಿ, ಲಕ್ಷ್ಮಣಜಿ. ಪಟಗಾರ, ಗೋಪಾಲಕೃಷ್ಣ ಭಟ್ಟ, ಪಾತ್ರೋನ್ ಫರ್ನಾಂಡಿಸ್, ಮಾರುತಿಗೌಡ, ನಾಗೇಶ ದೇವಾಡಿಗ, ಬಿಡಿಸಿ ನಿರ್ದೇಶಕರುಗಳು, ಚೀಫ್ ಮೆನೇಜರ್ ವಸಂತ ನಾಯ್ಕ, ಸೀ. ಡೆವಲಪಮೆಂಟ್ ಆಫಿಸರ್ ರವಿಚಂದ್ರ, ಸೀ. ಐಟಿ ಮೆನೇಜರ್ ವಿಘ್ನೇಶ್ವರ ಹೆಗಡೆ, ಇಂಟರ್ನಲ್‌ಆಡಿಟರ್ ನರೇಂದ್ರ ಪ್ರಭು ಅನೇಕ ಸದಸ್ಯರುಗಳು, ಎಲ್ಲಾಸಿಬ್ಬಂದಿಗಳು, ಫೀಲ್ಡ್ ಎಕ್ಸಿಕ್ಯೂಟಿವ್‌ಗಳು ಹಾಜರಿದ್ದರು. ಸೀನಿಯರ್ ಮೆನೇಜರ್ ಕೇಶವ ತಾಂಡೇಲ ವಂದನಾರ್ಪಣೆ ಮಾಡಿದರು. ಮಂಕಿ ಶಾಖೆ ಸೀನಿಯರ್ ಮೆನೇಜರ್‌ಜೀವನ ನಾಯ್ಕ ಮತ್ತು ಪ್ರಧಾನ ಕಛೇರಿ ಅಕೌಂಟಂಟ್ ಜಸಿಕಾ ಫರ್ನಾಂಡಿಸ್ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.



**ದಕ್ಷಿಣಕನ್ನಡ** : ದಿನಾಂಕ : 16.09.2025ರಂದು ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿ ಇದರ ಸಾಮಾನ್ಯ ಸಭೆಯಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆದ ಶ್ರೀ ನಂದನ್ ಬಿ.ಎಸ್ ರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಮೈಸೂರು** : ದಿನಾಂಕ : 20.09.2025 ರಂದು ಗ್ರಾಮೋತ್ಥಾನ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಮಾನ್ಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸದಸ್ಯರು ಭಾಗವಹಿಸಿದರು.



**ಉಡುಪಿ** : ಶಾಂತಿನಿಕೇತನ ಸೌಹಾರ್ದ ಸಹಕಾರಿ ಸಂಘ (ನಿ.) ಕುಡಿಬೈಲು ಕುಚ್ಚೂರು, ಹೆಬ್ರಿ ತಾಲೂಕು ಉಡುಪಿ ಜಿಲ್ಲೆ ನಮ್ಮ ಸಹಕಾರಿ ಸಂಘವು 5 ವರ್ಷ ಪೂರೈಸಿ 6 ನೇ ವರ್ಷ ಪಾದಾರ್ಪಣೆ ಸಂಧರ್ಭದಲ್ಲಿ ಹೊಸಬೆಳಕು ಅನಾಥಶ್ರಮಕ್ಕೆ ಭೇಟಿ ನೀಡಿ ಆರ್ಥಿಕ ಸಹಕಾರ ನೀಡಲಾಯಿತು. ಈ ಸಂಧರ್ಭದಲ್ಲಿ ಸಹಕಾರಿ ನಿರ್ದೇಶಕರಾದ ಮಹೇಶ್ ಶ್ರೀನಿವಾಸ ಚಾರ, ಶ್ರೀನಿವಾಸ ಶೆಟ್ಟಿ, ಸಿ.ಇ.ಓ ನರೇಂದ್ರ ಎಸ್, ವ್ಯವಸ್ಥಾಪಕಿ ರಾಜೇಶ್ರೀ ಮತ್ತಿತರರು ಉಪಸ್ಥಿತರಿದ್ದರು.



**ತುಮಕೂರು** : ದಿನಾಂಕ 31–10–2025 ರಂದು ಶ್ರೀ ಆಚಾರ್ಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಇದರ ಹಗ್ಗೆರೆ ಶಾಖಾ ಕಚೇರಿ ಉದ್ಘಾಟನಾ ಸಮಾರಂಭ ಹಾಗೂ ಪೂಜಾ ಕಾರ್ಯಕ್ರಮ ಜರುಗಿತು. ಶಾಖಾ ಕಚೇರಿ ಉದ್ಘಾಟನೆಯನ್ನು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಲ್ ಸುರೇಶ್ ರಾವ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು. ಈ ಶುಭ ಸಂಧರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಾಲತೇಶ್ ಹೆಚ್. ಎಸ್ ರವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಶುಭ ಕೋರಿದರು. ಇದೇ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಓಬಯ್ಯ .ಟಿ ರವರು ಹಾಗೂ ಇತರೆ ನಿರ್ದೇಶಕರು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ರವೀಂದ್ರ ಡಿ.ಎಸ್ ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ತುಮಕೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಹಾಗೂ ಸಹಕಾರಿಯ ಸದಸ್ಯರು ಹಾಜರಿದ್ದರು.

**ಗದಗ** : ಭಾಗ್ಯಲಕ್ಷ್ಮೀ ವಿವಿಧೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಸಹಕಾರಿ ಸಂಘದ ಸದಸ್ಯರಿಗೆ ಶೇಕಡಾ 10% ರಷ್ಟು ಡಿವಿಡೆಂಡ ಘೋಷಿಸಲಾಗಿದೆ. ಸಹಕಾರಿ ಸಂಘದ ಸದಸ್ಯರಿಗೆ ಈ ಮೂಲಕ ತಿಳಿಸುವುದೆನೆಂದರೆ ದಿನಾಂಕ 15/10/2025 ರಂದು ಸಹಕಾರಿ ಸಂಘದ ಸದಸ್ಯರಿಗೆ ಶೇಕಡಾ 10 % ರಷ್ಟು ಡಿವಿಡೆಂಡ ವಿತರಿಸಲಾಗುತ್ತಿದ್ದು ಕಾರಣ ಸದಸ್ಯರಿಗೆ ತಮ್ಮ ಡಿವಿಡೆಂಡ ಹಣ ತೆಗೆದುಕೊಳಬೇಕು ಅಂತಾ ಮ್ಯಾನೇಜರ್ ವಿನಂತಿಸಿದ್ದಾರೆ.

ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಗದಗ ಸಹಕಾರಿ ಸಂಘದ ಸದಸ್ಯರಿಗೆ ಸನ್ 2024–25ನೇ ಸಾಲಿನ ಡಿವಿಡೆಂಡ್ ಶೇಕಡಾ 8% ರಷ್ಟು ಘೋಷಿಸಲಾಗಿದೆ. ಸಹಕಾರಿಯ ಸಂಘದ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ ದಿನಾಂಕ 13–10–2025 ರಂದು ಸಂಘದ ಸದಸ್ಯರು ತಮ್ಮ ಶೇರಿನ ಮೇಲೆ ಶೇಕಡಾ 8% ಡಿವಿಡೆಂಡ್ ವಿತರಿಸಲಾಗುತ್ತಿದ್ದು ಕಾರಣ ಸದಸ್ಯರು ತಮ್ಮ ಡಿವಿಡೆಂಡ ಹಣ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

**ವಿಜಯಪುರ** : ದಿನಾಂಕ 31.10.2025 ರಂದು ವಿಜಯಪುರ ಜಿಲ್ಲೆಯ, ಸಿಂದಗಿ, ಆಲಮೇಲ್ ಹಾಗೂ ದೇವರ–ಹಿಪ್ಪರಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು, ಸಿಂದಗಿ ನಗರದ ಚೌಡೇಶ್ವರಿ ಕಲ್ಯಾಣ ಮಂಟಪ ಸಿಂದಗಿ, ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಶಾಸನಾತ್ಮಕ ಕರ್ತವ್ಯಗಳಾದ, ಆಡಳಿತ ಮಂಡಳಿ ಸಭೆ, ವಾರ್ಷಿಕ ಸಾಮಾನ್ಯ ಸಭೆ, ಲೆಕ್ಕಪರಿಶೋಧನೆ, ಮಂಡಳಿ ಚುನಾವಣೆ, ಕಲಂ 34 ಕುರಿತಾದ ಮಾಹಿತಿಗಳು ಹಾಗೂ ಅನುಪಾಲನಾ ವರದಿ, ಸಾಮಾನ್ಯ ಸಭೆಯ ನಂತರದಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಹಾಗೂ ಸಾಮಾನ್ಯ ಸೇವಾ ಕೇಂದ್ರದ ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ. ಎಸ್. ಇವರು ಮಾಹಿತಿ ನೀಡಿದರು.ತರಬೇತಿಯಲ್ಲಿ 25 ಸಹಕಾರಿಗಳಿಂದ 33 ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಹಕಾರ ಸಂಘ/ಸಹಕಾರಿಯ ಲೆಕ್ಕ ಪರಿಶೋದನೆಯಲ್ಲಿ ಮೂರು ವರ್ಷದಲ್ಲಿ ಒಮ್ಮೆ ಲೆಕ್ಕ ಪರಿಶೋಧನಾ ಇಲಾಖೆ ನಿರ್ದೇಶಕರಿಂದ\ ಲೆಕ್ಕ ಪರಿಶೋದನೆ ಮಾಡಿಸಲು 2025ರಲ್ಲಿ ತಂದ ತಿದ್ದುಪಡಿ



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ.63(1–ಎ)ಯನ್ನು ಈ ಕೆಳಕಂಡಂತೆ ಸೇರಿಸಿದೆ.**

"ಉಪಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ 1949 (1949ರ ಕೇಂದ್ರ ಅಧಿನಿಯಮ 10)ರ ಮೂಲಕ ಆಡಳಿತ ನಡೆಸಲಾಗುತ್ತಿರುವ ಸಹಕಾರ ಬ್ಯಾಂಕ್‌ಗಳನ್ನು ಹೊರತು ಪಡಿಸಿ, ಪ್ರತಿಯೊಂದು ಸಹಕಾರ ಸಂಘವು ಪ್ರತಿ ಮೂರು ವರ್ಷಗಳಿಗೆ ಒಮ್ಮೆ ಸಹಕಾರ ಸಂಘಗಳ ಲೆಕ್ಕ ಪರಿಶೋದನಾ ನಿರ್ದೇಶಕರ ಮೂಲಕ ತನ್ನ ಲೆಕ್ಕ ಪತ್ರಗಳ ಲೆಕ್ಕ ಸಂಶೋದನೆಯನ್ನು ಮಾಡಿಸತಕ್ಕದ್ದು."

**ಈ ತಿದ್ದುಪಡಿಗೆ ಪೂರ್ವದಲ್ಲಿ ಇದ್ದ ಅವಕಾಶ 63(1)**

"ಪ್ರತಿಯೊಂದು ಸಹಕಾರ ಸಂಘವು ಸಹಕಾರ ವರ್ಷವು ಮುಕ್ತಾಯವಾದ ತರುವಾಯ ಸೆಪ್ಟೆಂಬರ್ ಮೊದಲನೇ ದಿನಾಂಕಕ್ಕೆ ಮೊದಲು, ಕೊನೆ ಪಕ್ಷ ವರ್ಷಕ್ಕೊಮ್ಮೆಯಾದರು ತನ್ನ ಲೆಕ್ಕ ಪತ್ರಗಳನ್ನು, ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರು ಅನುಮೋದಿಸಿದ ಲೆಕ್ಕ ಪರಿಶೋದಕರ ಅಥವಾ ಲೆಕ್ಕ ಪರಿಶೋದನಾ ಸಂಸ್ಥೆಗಳ ಪಟ್ಟಿಯ ಪೈಕಿಯಿಂದ ಸಹಕಾರ ಸಂಘದ ಸಾಮಾನ್ಯ ಸಭೆ ನೇಮಕ ಮಾಡಿದ ಒಬ್ಬ ಲೆಕ್ಕ ಪರಿಶೋಧಕನಿಂದ ಅಥವಾ ಲೆಕ್ಕ ಪರಿಶೋಧನಾ ಸಂಸ್ಥೆಯಿಂದ ಲೆಕ್ಕ ಪರಿಶೋಧನೆಯನ್ನು ಮಾಡಿಸತಕ್ಕದ್ದು."

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 33(1)ರ ನಂತರ ಹೊಸದಾಗಿ (1 ಎ) ಎಂದು ಈ ಕೆಳಕಂಡಂತೆ ಸೇರ್ಪಡೆ ಮಾಡಲಾಗಿದೆ.

"33(1 ಎ) : ಉಪಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ ಪಟ್ಟಣ ಸಹಕಾರಿ ಬ್ಯಾಂಕ್‌ಗಳನ್ನು ಹೊರತು ಪಡಿಸಿ, ಪ್ರತಿಯೊಂದು ಸಹಕಾರಿಯ ಸಹಕಾರಿ ಲೆಕ್ಕ ಪರಿಶೋಧಕರಿಂದ ಮೂರು ವರ್ಷಗಳಲ್ಲಿ ಒಂದು ಬಾರಿ ತನ್ನ ಲೆಕ್ಕ ಪತ್ರಗಳ ಲೆಕ್ಕ ಪರಿಶೋಧನೆಯನ್ನು ಮಾಡಿಸತಕ್ಕದ್ದು."

ಈ ಸೇರ್ಪಡೆಯಿಂದ ಎರಡೂ ಕಾಯಿದೆಯಡಿ ನೋಂದಾಯಿಸಲಾದ ಸಹಕಾರಿ/ಸಂಘ ಮೂರು ವರ್ಷದಲ್ಲಿ ಒಮ್ಮೆ ಸಹಕಾರಿ ಲೆಕ್ಕ ಪರಿಶೋಧನಾ ಇಲಾಖೆ ನೇಮಿಸಿದ ತನ್ನ ಇಲಾಖಾಧಿಕಾರಿಯಿಂದ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು. ಇದಕ್ಕೆ ಪ್ರಮುಖವಾಗಿ ಸೌಹಾರ್ದ ಕಾಯಿದೆಯಡಿ ನೋಂದಾಯಿಸಲ್ಪಟ್ಟ ಸಹಕಾರಿಗಳ ಪ್ರತಿರೋಧ ವ್ಯಕ್ತವಾಗುವ ಸಭ್ಯತೆ ಇದೆ. 1959ರ ಕಾಯಿದೆಯಡಿ ನೋಂದಾವಣೆಯಾದ ಸಂಘಗಳು ದೊಡ್ಡ ಪ್ರಮಾಣದ ಪ್ರತಿರೋದ ವ್ಯಕ್ತವಾಗುವ ಸಂಭವವಿಲ್ಲ. ಏಕೆಂದರೆ, ಆ ಕಾಯಿದೆ ಜಾರಿ ಬಂದಾಗಿನಿಂದ ಸಹಕಾರ ಲೆಕ್ಕ ಪತ್ರ ಇಲಾಖಾಧಿಕಾರಿಯಿಂದಲೇ ಲೆಕ್ಕ ತಪಾಸಣೆ ನಡೆಸಲಾಗುತ್ತಿತ್ತು. 1976ಕ್ಕೆ ಪೂರ್ವದಲ್ಲಿ, ಅಂದರೆ ಸಹಕಾರ ಇಲಾಖೆಯೇ ಲೆಕ್ಕ ಪರಿಶೋಧನೆ ಮಾಡಿಸುತ್ತಿತ್ತು. ಆಡಳಿತ ವಿಭಾಗ ಮತ್ತು ಲೆಕ್ಕ ತಪಾಸಣೆಗೆ ಬೇರೆ ಬೇರೆ ಅಧಿಕಾರಿಗಳು ಇರುತ್ತಿರಲಿಲ್ಲ. ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ವರ್ಗಾವಣೆ ಮಾಡಲಾಗುತ್ತಿತ್ತು. ಅಂದರೆ ಸಹಕಾರಿ ವಿಸ್ತರಣಾಧಿಕಾರಿಯಾಗಿ ಕೆಲಸ ಮಾಡಿದ ವ್ಯಕ್ತಿ ಲೆಕ್ಕ ತಪಾಸಣೆಗೆ ನೇಮಕವಾಗುತ್ತಿದ್ದರು ಅದೇ ರೀತಿ ಲೆಕ್ಕ ತಪಾಸಣಾಧಿಕಾರಿ, ವಿಸ್ತರಣಾಧಿಕಾರಿಯಾಗುತ್ತಿದ್ದು. ಇದರಿಂದ ಸಹಕಾರಿ ಇಲಾಖೆಗೆ ಒಂದು ಶಕ್ತಿ ನೀಡುತ್ತಿತ್ತು. ಅಂದರೆ ಪ್ರತಿಯೊಬ್ಬ ಸಹಕಾರಿ ಇಲಾಖೆ ಅಧಿಕಾರಿ ಆಡಳಿತ ಮತ್ತು ಲೆಕ್ಕ ಪರಿಶೋಧನೆ, ಎರಡರಲ್ಲಿ ಪರಿಣಿತಿ ಹೊಂದಿರುತ್ತವೆ. ಅದರಿಂದ ಒಂದು ಸಹಕಾರ ಸಂಘದ ಪೂರ್ಣ ವ್ಯವಹಾರದ ಪರಿಚಯ ಆಗುತ್ತಿತ್ತು. 1976ರಲ್ಲಿ ವಿಭಜನೆಯಾಗಿ, ಆಡಿಟ್ ಇಲಾಖೆ ಸೃಷ್ಟಿಯಾಯಿತು. ಅದರಿಂದ ಆಡಳಿತಾಂಗದ ಕಾರ್ಯನಿರ್ವಾಹಣೆ ಬಗ್ಗೆ ಹೊಸದಾಗಿ ನೇಮಕ ಮಾಡಿಕೊಂಡ ಅಧಿಕಾರಿಗಳಿಗೆ ಆಡಳಿತಾಂಗದ ಬಗ್ಗೆ ಅನುಭವದ ಕೊರತೆಯಿಂದ, ಆಡಿಟ್ ಮಾಡುವಾಗ, ಸಹಕಾರಿ ಸಂಸ್ಥೆಗಳು ಶೋಷಣೆಗೊಳಪಡುತ್ತಿದ್ದವು. ವಿರುದ್ದ ಷರಾ ಬರೆಯುತ್ತೇನೆಂದು ಬೆದರಿಕೆಯೊಡ್ಡಿ ಅಮಿಷಗಳಿಗೊಳಪಡುತ್ತಿದ್ದರು. ಈ ಕಾರಣದಿಂದರೆ ಸಹಕಾರ ಸಂಘಗಳು, ಆಡಿಟ್ ಮಾಡಿಸುವಾಗ ಲೆಕ್ಕ ಪತ್ರ ಮತ್ತು ದಾಖಲೆಗಳನ್ನು ಸಂಘದ ಕೇಂದ್ರ ಸ್ಥಾನದಿಂದ ಹೊರಗೆ ವರ್ಗಾಯಿಸುವಂತಿಲ್ಲದಿದ್ದರೂ, ಲೆಕ್ಕ ತಪಾಸಣಾಧಿಕಾರಿಗಳು ಸೂಚಿಸುವ ಸ್ಥಳಕ್ಕೆ ದಾಖಲೆಗಳನ್ನು ತೆಗೆದುಕೊಂಡು ಹೋಗಿ, ತಪಾಸಣೆ ಮಾಡಿಸಲಾಗುತ್ತಿದ್ದರು. ಇದರಿಂದ ಲೆಕ್ಕ ತಪಾಸಣಾಧಿಕಾರಿ, ತನಗೆ ಬೇಕಾದ ಸ್ಥಳದಲ್ಲಿ, ಲೆಕ್ಕ ಪತ್ರ ತರಿಸಿಕೊಂಡು, ಷೋಷಣೆ ಮಾಡುತ್ತಿದ್ದರು. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರದ ಮಾದರಿ ಸಹಕಾರಿ ಕಾನೂನು, ಮತ್ತಿತರ ಸಮಿತಿಗಳ ವರದಿಯನ್ನಾಧರಿಸಿ. ಸನ್ನದ್ದು ಲೆಕ್ಕಿಗರ ಮೂಲಕ ಮಾಡಿಸಬೇಕೆಂಬ ನೀತಿಗೆ ಪೂರಕವಾಗಿ, 1997/1998ರ ತಿದ್ದುಪಡಿಗಳಲ್ಲಿ ಸನ್ನದ್ದು ಲೆಕ್ಕಿಗರ ಮೂಲಕ ಲೆಕ್ಕ ತಪಾಸಣೆಗೆ ಅವಕಾಶ ಕಲ್ಪಿಸಿತು.

ಕರ್ನಾಟಕ ಸೌಹಾರ್ದ ಕಾಯಿದೆ 1997 ರಡಿ ಕಾಯಿದೆಯಲ್ಲಿಯೇ ರಚನೆಯಾದ "ಸಂಯುಕ್ತ ಸಹಕಾರಿ"ಗೆ ಶಾಸನಾತ್ಮಕ ಜವಾಬ್ದಾರಿ ನೀಡಿ, ಲೆಕ್ಕ ತಪಾಸಕರ ಪಟ್ಟಿಯನ್ನು ತಯಾರಿಸಿ, ಸದಸ್ಯ ಸಹಕಾರಿಗಳು, ಅ ಪಟ್ಟಿಯಿಂದ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಕೆಲವು ವರ್ಷಗಳ ನಂತರ, ಸಂಯುಕ್ತ ಸಹಕಾರಿಗೆ ನೀಡಿದ ಅಧಿಕಾರವನ್ನು ಕಾಯಿದೆ ತಿದ್ದುಪಡಿ ಮೂಲಕ, ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಯ ನಿರ್ದೇಶಕರೇ ಪಟ್ಟಿ ತಯಾರಿಸಲು ಅವಕಾಶ ಕಲ್ಪಿಸಿದ ನಂತರ, ಎರಡೂ ಕಾಯಿದೆಯಲ್ಲಿ ನೋಂದಾಯಿಸಿದ ಸಹಕಾರಿ/ಸಂಘವು ಸನ್ನದ್ದು ಲೆಕ್ಕಿಗರಿಂದಲೇ ಲೆಕ್ಕ ಪರಿಶೋಧನೆ ಮಾಡಿಸುವ ವ್ಯವಸ್ಥೆಗೆ ಮಾಡಿಸಿಕೊಂಡರು. ಸೌಹಾರ್ದ ಕಾಯಿದೆಯಡಿ ಲೆಕ್ಕ ಪರಿಶೋಧಕರ ಪಟ್ಟಿ ತಯಾರಿಸುವಾಗ, ನ್ಯೂನತೆಗಳಿವೆ ಎಂದು ಕಾರಣ ನೀಡಿ, ಸನ್ನದ್ದು

ಲೆಕ್ಕಿಗರ ಪಟ್ಟಿ ತಯಾರಿಸುವ ಕೊಡುವ ಜವಾಬ್ದಾರಿಯನ್ನು ಲೆಕ್ಕ ಪರಿಶೋಧನಾ ಇಲಾಖೆಗೆ ವರ್ಗಾವಣೆ ಮಾಡಲಾಯಿತು.

ಈ ಲೇಖನದ ಮುಖ್ಯ ಉದ್ದೇಶವೆಂದರೆ 1976ರ ಪೂರ್ವದಲ್ಲಿ ಇದ್ದ ವ್ಯವಸ್ಥೆಯಲ್ಲಿ ಒಬ್ಬ ಅಧಿಕಾರಿ ಒಂದು ಸಂಘದ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿ, ಅದೇ ಸಂಘದ ಲೆಕ್ಕ ಪರಿಶೋಧನೆ ಮಾಡಲು ನೇಮಕವಾದಾಗ, ಅಂತಹ ಸಂಘದಲ್ಲಿ ಆದ ನ್ಯೂನತೆಗಳನ್ನು ಮುಚ್ಚಿ ಹಾಕುವ ಸಂಭವವಿದೆ ಎಂದು, ಇಲಾಖೆಯನ್ನು ಬೇರ್ಪಡಿಸಲಾಗಿತ್ತು. ಆ ನಂತರ, ಇಲಾಖೆ ಸೃಷ್ಟಿಯಾದ ನಂತರ ಇದೇ ಅಧಿಕಾರಿಗಳು, ಆಡಳಿತ ವಿಭಾಗದಿಂದ ವರ್ಗವಾಗಿ ಲೆಕ್ಕ ತಪಾಸಣಾ ಇಲಾಖೆಗೆ ಹೊದವರಲ್ಲಿ ಬಹಳಷ್ಟು ವ್ಯಕ್ತಗಳು ತಮ್ಮ ಸ್ವಹಿತಾಸಕ್ತಿಗಾಗಿ ಹೊದವರು. ಅಂದರೆ ಬೇಗ ಭಡ್ತಿ ಸಿಗುತ್ತದೆ ಎಂದು ಆಧರಿಸಿ, ಲೆಕ್ಕ ತಪಾಸಣೆಯಲ್ಲಿ ಆಸಕ್ತಿ ಇಲ್ಲದೇ ಇದ್ದರೂ ಭಡ್ತಿಗಾಗಿ ಹೊದವರು. ಹೊಸದಾಗಿ ನೇಮಕವಾದ ವ್ಯಕ್ತಿಗಳು ಸಹಕಾರಿ/ಸಂಘಗಳ ಆಡಳಿತದ ಬಗ್ಗೆ ತಿಳುವಳಿಕೆ ಇಲ್ಲದವರೂ ಮತ್ತು ಆಸಕ್ತಿ ವಹಿಸದಿದ್ದವರು. ಆದ್ದರಿಂದ, ಹೊಸದಾಗಿ ನೇಮಕವಾದ ಅಧಿಕಾರಿಗಳು ಸಹಕಾರ ಸಂಘಗಳ ವ್ಯವಹಾರದ ಅನುಭವ ಇಲ್ಲದೇ, ಅಥವಾ ಆ ಸಂಘಗಳ ಅಧಿಕಾರಿಗಳು ಮತ್ತು ನೌಕರರನ್ನು ಶೋಷಣೆ ಮಾಡುವ ಅವಕಾಶ ಸೃಷ್ಟಿಸಿಕೊಂಡು ತಾವೇ ಶ್ರೇಷ್ಠರು ಎಂಬ ಭಾವನೆ ಬೆಳೆಸಿಕೊಂಡರು. ಅದರಿಂದ ಸಹಕಾರಿ/ಸಂಘಗಳು, ಇಲಾಖೆ ಲೆಕ್ಕ ಪರಿಶೋಧಕರಿಂದ ಶೋಷಣೆಗೊಳ ಪಡುತ್ತೇವೆಂದು, ಸನ್ನದ್ದು ಲೆಕ್ಕಗಳ ನಿಯಂತ್ರಣ ಒಳ್ಳೆಯದೆಂದು ತಿಳಿದು, ಅದನ್ನು ಅಳವಡಿಸಿಕೊಂಡರು. ಇದಕ್ಕೆ ಪೂರಕವಾಗಿ ಸಣ್ಣ ಸಣ್ಣ ಸಂಸ್ಥೆಗಳು ಲೆಕ್ಕ ತಪಾಸಣೆಯನ್ನು 1959ರ ಕಾಯಿದೆಯಡಿ ಇಲಾಖೆಯು ಮಾಡುವ ವ್ಯವಸ್ಥೆ ಮಾಡಿಕೊಂಡರೂ, ಲೆಕ್ಕ ತಪಾಸಣಾ ಇಲಾಖೆಯೂ ಸಿಬ್ಬಂದಿ ಕೊರತೆಯಿಂದ, ಶಾಸನಾತ್ಮಕವಾಗಿ ಎಲ್ಲಾ ಸಹಕಾರಿ ಸಂಘಗಳನ್ನು ಸೆಪ್ಟೆಂಬರ್ ಒಂದರೊಳಗೆ ಮುಗಿಸಲು ಸಾಧ್ಯವಾಗಿದೆ, ಸಹಕಾರಿ/ಸಂಘಗಳು ತೊಂದರೆ ಅನುಭವಿಸಿದರು ಮತ್ತು ಕೆಲವು ಅನರ್ಹತೆ ಪ್ರಸಂಗಳು ಸೃಷ್ಟಿಯಾದವು. ಏಕೆಂದರೆ ಪ್ರತಿಯೊಂದು ಸಹಕಾರಿ/ಸಂಘದ ಆಡಳಿತ ಮಂಡಳಿ ಸೆಪ್ಟೆಂಬರ್ ಒಂದರೊಳಗೆ, ಲೆಕ್ಕ ಪತ್ರಗಳ ತಪಾಸಣೆ ಮಾಡಿಸಿ, ಸೆಪ್ಟೆಂಬರ್ 25 ರೊಳಗೆ ಸಾಮಾನ್ಯ ಸಭೆ ಒಪ್ಪಿಗೆ ಪಡೆಯದಿದ್ದರೆ, ಅಂತಹ ಮಂಡಳಿ 1959ರ ಕಾಯಿದೆ ಕಲಂ.29ಸಿ ಮತ್ತು ಸೌಹಾರ್ದ ಕಾಯಿದೆ ಕಲಂ.27(1) ರಡಿ ನಿಗದಿ ಪಡಿಸಿದ ಪ್ರಕಾರ ನಿರ್ವಹಿಸದಿದ್ದರೆ, ಕಲಂ.68(5) ರಡಿ ಶಿಕ್ಷೆ ಮತ್ತು ದಂಡನೆಗೆ ಗುರಿಯಾಗುತ್ತಾರೆ.

ನನಗೆ ಲಭ್ಯವಾದ ಮಾಹಿತಿ ಪ್ರಕಾರ ಸನ್ನದ್ದು ಲೆಕ್ಕಿಗರು ಲೆಕ್ಕ ತಪಾಸಣೆ ಮಾಡುವಾಗ 1959ರ ಕಾಯಿದೆ ಕಲಂ.63, ನಿಯಮ 29 ಮತ್ತು 29ಬಿ ಅಡಿ ನಿಗದಿ ಪಡಿಸಿದ ನೀತಿ ಪೂರಕವಾಗಿ ವರದಿ ನೀಡುತ್ತಿಲ್ಲ. ಏಕೆಂದರೆ, ಸನ್ನದ್ದು ಲೆಕ್ಕಿಕರಿಗೆ, ಸಹಕಾರಿ/ಸಂಘದ ಲೆಕ್ಕ ಪರಿಶೋಧನೆ ಬಗ್ಗೆ ತರಬೇತಿ ನೀಡಿದ್ದರೂ, ಅವರು ಆರ್ಥಿಕ ವಿಷಯಗಳಿಗೆ ಮಾತ್ರ ಪ್ರಾಮುಖ್ಯತೆ ನೀಡಿ, ಆಡಳಿತದ ಮತ್ತು ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸಿ ವರದಿಯಲ್ಲಿ ಉಲ್ಲೇಖಿಸುತ್ತಿಲ್ಲ. ಆದರೆ ಲೆಕ್ಕತಪಾಸಣಾ ಇಲಾಖಾಧಿಕಾರಿಗಳು, ಆಡಳಿತದ ಬಗ್ಗೆ ವಿಮರ್ಷೆ ಮಾಡಿ ವರದಿ ನೀಡುತ್ತಾರೆ. ಉದಾಹರಣೆಗೆ ಮಂಡಳಿ ಸಭೆ, ಚರ್ಚಿಸಿದ ವಿಷಯಗಳು, ಸಾಮಾನ್ಯ ಸಭೆ ಮತ್ತು ಚರ್ಚಿಸಿದ ವಿಷಯಗಳ, ದಿನನಿತ್ಯದ ವ್ಯವಹಾರ ಮತ್ತು ಅದರ ಪರಿಣಾಮಗಳ ಬಗ್ಗೆ ಗಮನಹರಿಸಿ ವರದಿ ನೀಡುತ್ತಾರೆ. ಸನ್ನದ್ದು ಲೆಕ್ಕಗಳು, ದಾಖಲೆಗಳನ್ನು ನೋಡಿ ವರದಿ ನೀಡುತ್ತಾರೆ. ಸದಸ್ಯರ ಅಭಿಪ್ರಾಯ, ಮಂಡಳಿ ತೀರ್ಮಾನದಿಂದ ಸದಸ್ಯರಿಗೆ ನೀಡುವ ಸೇವೆಗಳ ಬಗ್ಗೆ ಗಮನ ಹರಿಸುವುದಿಲ್ಲ. ಆಡಳಿತ ಮಂಡಳಿ ಆಡಳಿತ ನಡೆಸುವ ಬಗ್ಗೆ ವಸ್ತು ನಿಷ್ಠ ವರದಿ ನೀಡುವುದಿಲ್ಲ. ಒಂದು ರಾಜ್ಯ ಮಟ್ಟದ ಸಂಸ್ಥೆಗೆ ಭಾರತೀಯ ರಿಜರ್ವ್ ಬ್ಯಾಂಕಿನ ಗೌರ್ನರ್/ಉಪಗೌರ್ನರ್ ಭೇಟಿ ನೀಡಿದಾಗ ಒಂದು ಪ್ರತಿಷ್ಠಿತ ಹೋಟಲ್‌ನಲ್ಲಿ ಅಔತಣ ಕೂಟ ಏರ್ಪಡಿಸಿ ರೂ.5 ಲಕ್ಷ ಖರ್ಚು ಮಾಡಿದ್ದರೆ, ಸನ್ನದ್ದು ಲೆಕ್ಕಗಳು ನೋಡುವುದು ಖರ್ಚಿನ ಓಚರ್ ಮಾತ್ರ. ಆದರೆ ಇಲಾಖಾ ಆಡಿಟ್ ಅಧಿಕಾರಿ, ಒಬ್ಬರಿಗಾಗಿ ಇಷ್ಟು ಖರ್ಚು ಮಾಡಬೇಕಾಗಿತ್ತಾ? ಅವರ ಬೇಟಿಯಿಂದ ಆ ಸಂಸ್ಥೆಗೆ ಹೆಚ್ಚುವರಿಯ ರಿಜರ್ವ್ ಬ್ಯಾಂಕ್‌ನಿಂದ 500 ಕೋಟಿ ವಿಶೇಷ ಸಾಲ ಮಂಜೂರಿ ಮಾಡಿಸಿಕೊಂಡಿದ್ದಾರಾ? ಅದನ್ನು ಸಮರ್ಥಿಸಿ ವರದಿ ನೀಡುತ್ತಾರೆ. ಅದಕ್ಕಾಗಿ ಮೂರು ವರ್ಷಗಳಲ್ಲಿ ಒಮ್ಮೆ ಇಲಾಖೆ ಮುಖಾಂತರ ಲೆಕ್ಕಪರಿಶೋಧನೆ ಮಾಡಿಸುವುದರಲ್ಲಿ ಯಾವುದೇ ನ್ಯೂನತೆ ಹುಡಕಬಾರದು, ಸನ್ನದ್ದು ಲೆಕ್ಕಿಗರು ನೀಡಿದ ವರದಿ ಮೇಲೆ ಸಹಕಾರಿ/ಸಂಘವು ತಕರಾರು ಮಾಡುವುದಿಲ್ಲವೇಕೆಂದರೆ, ಅವರಿಗೆ ಅನುಕೂಲವಾದ ವರದಿ ನೀಡುವುದರಿಂದ ಮತ್ತು ಸನ್ನದ್ದು ಲೆಕ್ಕಿಗರು ಆಡಳಿತಾಂಗದ ಬಗ್ಗೆ ಆಸಕ್ತಿವಹಿಸಿ ವರದಿ ತಯಾರಿಸದೇ ಇರುವುದರಿಂದ, ಮಂಡಳಿ ಕಾರ್ಯನಿರ್ವಹಣೆ ಬಗ್ಗೆ ಉಲ್ಲೇಖ ಇಲ್ಲದೇ ಇರುವುದರಿಂದ ಅದು ಅವರಿಗೆ ಅನುಕೂಲ. ಇದಕ್ಕೆ ಪೂರಕವಾಗಿ, ಮಂಡಲಿ ಸದಸ್ಯರು, ಮೂರು ಸಭೆಗಳಿಗೆ ಗೈರು ಹಾಜರಾದರೂ ಕ್ರಮದ ಬಗ್ಗೆ ಯಾಗಲೀ, ಚುನಾವಣೆ ಬಾಕಿ ಇದ್ದರೂ, ಅದರ ತಯಾರಿ ನಡೆಸದೆ ಇದ್ದ ಬಗ್ಗೆಗಾಗಲಿ, ಅನುಪಾಲನಾ ವರದಿ ನೀಡದೇ ಇದ್ದರೂ, ಆ ಬಗ್ಗೆ ವರದಿಯಲ್ಲಿ ತಿಳಿಸದೇ ಇದ್ದರೂ, ಅದನ್ನು ಸನ್ನದ್ದು ಲೆಕ್ಕಿಗರ ವರದಿಯಲ್ಲಿ ಉಲ್ಲೇಖಿಸದೇ ಇರುವುದರಿಂದ, ಆಡಳಿತ ಮಂಡಳಿಗಳಿಗೆ ಸನ್ನದ್ದು ಲೆಕ್ಕಗಳನ್ನು ಮುಂದುವರಿಸುವ ಆಸಕ್ತಿ. ಆದ್ದರಿಂದ ಇದಕ್ಕೆ ಅಕ್ಷೇಪ ಮಾಡುವುದಿಲ್ಲ ಎಲ್ಲಾ ಸನ್ನದ್ದು ಲೆಕ್ಕಿಗರು ಈ ನೀತಿ ಅನುಸರಿಸುತ್ತಿರೆಂದು ಈ ಹೇಳಿಕೆಯ ಉದ್ದೇಶವೂ ಅಲ್ಲ ಇದರ ಜೊತೆಗೆ ಲೆಕ್ಕ ಪರಿಶೋದನಾ ಇಲಾಖೆ ಅಧಿಕಾರಿಗಳೆಲ್ಲರೂ ಶ್ರೇಷ್ಠರೆಂದು ಅರ್ಥೈಸಬಾರದು. ಸಿಬ್ಬಂದಿ ಕೊರತೆಯಿಂದ ನಿಗದಿತ ಅವಧಿಗೆ ವರದಿ ನೀಡದೇ ಇರುವುದು. ಸಂಘದಲ್ಲಿ ಲೆಕ್ಕ ತಪಾಸಣೆ ಮಾಡದೆ, ಇರುವುದು, ಅಗತ್ಯಗಳನ್ನು ಪೂರೈಸದಿದ್ದರೆ, ಎಂದೂ ಶರಾ ಬರೆಯುವುದಾಗಿ ಬೆದರಿಕೆ ನೀಡುವುದು. ಅಮಿಶಕ್ಕೊಳಗಾಗಿ, ಮಂಡಳಿಗೆ ಪೂರಕ ವರದಿ ನೀಡುವುದು ಇಲ್ಲವೆಂದೇನಲ್ಲ. ಆದರೆ ಸಹಕಾರ ಸಂಘಗಳನ್ನು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಎಂದು ಗುರುತಿಸಿದ ಮೇಲೆ, ಈ ಸ್ವಾತಂತ್ರ್ಯವನ್ನು ಸಮರ್ಪಕವಾಗಿ ಮಂಡಳಿಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಖಾತರಿ ಪಡಿಸಿಕ್ಕೊಂಡು ಆಡಿಟ್ ವರದಿಯಲ್ಲಿ ಉಲ್ಲೇಖಿತವಾಗಬೇಕು. ಇದರಿಂದ ಸಹಕಾರಿ ಆಂದೋಲನಕ್ಕೆ ಪೂರಕವಾದ ಬೆಳವಣಿಗೆ ಆಗಬೇಕ ಅದಕ್ಕಾಗಿ ನೈಜ ಆಡಿಟ್ ವರದಿ ನೀಡಬೇಕು.

# Development Trends in Cooperative Sector in India and Karnataka – An Overview

- Dr. S. Mahendrakumar, Professor and Director CIST ( Retd), University of Mysore, Mysuru

## Introduction

Cooperation is as old as humanity and cooperation is older than the cooperative movement. The cooperative movement is only one example of human cooperation among others. The cooperative movement brought overall improvement in the economic condition of its members in general and overall development in particular.

Cooperative movement explain as a "Voluntary movement of the people, carried out democratically by pooling together their resources or carrying on the given activity, with the purpose of achieving or securing certain benefits or advantage which given to people cannot get individually and with the purpose of promoting certain virtue and values such as self help, mutual help and general goods of all."

The first ever effort towards the formation of the co-operative organisation was made by 28 artisans working in the cotton mills, popularly called the Rochdale Pioneers, at the Rochedale near Manchester in England in the year 1844.

## Co-operative Movement in India

The principle of co-operation is part and parcel of Indian culture. In India, co-operative movement was officially started after passing of the Co-operative Societies Act 1904 by the Imperial Legislative Council. But the co-operative in India exist even before passing Co-operative Societies Act 1904.

The Indian Cooperative Societies Act 1904 provided for constitution of societies, eligibility for membership, registration, liabilities on members, disposal of profits, shares and interests of members, privileges of societies, claims against members, audit, inspection and enquiry, dissolution, exemption from taxation and rule making power. All other operational and managerial issues were left to the local governments namely to formulate suitable rules and model bye-laws of the co-operative societies. The institution of the Registrar, visualized as a special official mechanism to be manned by officers with special training and appropriate attitudinal traits to prompt and catalyse co-operative development was the result of the Co-operative Societies Act of 1904.

The Co-operative Credit Societies Act 1904 was followed by a number of supporting legislations including the Co-operative Societies Act 1912 which provided for the formation of noncredit societies and federal co-operative organisations.

## Under the Reforms Act 1919, co-operation became a Provincial subject

In 1934, the setting up of RBI was a major development in the thrust for agricultural credit. It had agriculture credit as part of its basic mandate. By extending refinance facilities to the co-operative credit system it played an important role in spreading the co-operative movement to far corners of the country.

In post-independence, co-operatives were considered to be the part of the strategy of planned economic development. each village would have a panchayat, a co-operative and a school. Rapid and equitable economic development became the focus of the state policy. In the early All India Rural Credit Survey Committee (1951-54) formed under the Chairmanship of Shri A.D. Gorwala. The crux of the Committee's recommendations was that the state should play an active role for the spread of the co-operative movement. Parliament accordingly enacted a Multi-State Co-operative Societies Act in 1984. The NABARD Act was passed in 1981 and NABARD was set up to provide refinance support to co-operative banks and to supplement the resources of commercial banks and Regional Rural Banks to enhance credit flow to the agriculture and rural sector.

Over the years, there has been a growing reali-

sation that undue interference from the State Government, lack of autonomy and widespread politicisation has severely impaired the functioning of the co-operative institutions.

As a consequence of these recommendations and on support of a sizable section of the co-operative community, two major events took place on the co-operative scene of the country.

The Government of Andhra Pradesh passed the A.P. Mutually Aided Co-operative Societies Act 1995. This was followed by similar enactments in eight other States; Bihar, Jharkhand, Madhya Pradesh, Chhattisgarh, Jammu and Kashmir, Karnataka, Orissa and Uttarakhand. b) The Union Government replaced the existing Multi-State Co-operative Law by a fresh statute – the Multi-State Co-operative Societies (MSCS) Act 2002. And the success is evident. Almost 50 percent of the total sugar production in India is contributed by sugar co-operatives and over 60 percent of the total fertilizer distribution in the country is handled by the co-operatives. The consumer co-operatives are slowly becoming the backbone of the public distribution system and the marketing co-operatives are handling agricultural produce with an outstanding growth rate.

The National Co-operative Development Corporation (NCDC), a statutory body was set up in 1963 by the Union Ministry of Civil Supplies and Co-operation, to promote the co-operative movement in India.

### Main Areas of Operation of Cooperatives in India

- Agricultural Credit. .
- Agricultural supplies.
- Agricultural Marketing.
- Agricultural Processing.
- Industrial cooperatives
- Public Distribution of essential commodities
- Urban credit Cooperatives.
- Housing cooperatives

### Cooperative Movement in karnataka

Karnataka has a fascinating history of Co-operative Movement. Co-operative culture in various economic activities in the state is clearly evident. It is deep-rooted, as it has been launched in 1904. The first Primary Agricultural Credit Society established in the country was at Kanaginhal (Gadagtq) of Gadag district. It was established on 8th May 1905, and it has been still functioning. Similarly, the first Urban Co-operative Credit Society was organised on 18th October 1905 in the state. It is at Betageri of Gadag district now it is defunct. The Swadeshi Movement of 1905 inspired many local leaders and social workers to start the co-operatives to cater to their local needs. Bangalore City Consumers Co-operative Society started in December 1905 is said to be the first Co-operative institution in princely Mysore state. Such societies were started in Belgaum, Gokak, Hubli, Dharwad and Sira by 1906.

### Global Scenario Achievements:

The key  The cooperative movement brings together over 1 billion people (100 crores) around the world, covering 1.4 million (14 lakhs) cooperatives spread over 100 countries, providing employment to over 100 million (10 crores) people.

In USA, there are 30,000 cooperatives with 100 million (10 crores) members operating through 73,000 outlets throughout US, where 30% of farmers products in the US are marketed through 3,400 farmer owned cooperatives.

In china, there are 80,000 cooperatives with 180 million (18 crore).

India has the largest cooperative movement with 8.1 lakh cooperative societies with 300 million (30 crores) members (Siddanthi,2016).

### Conclusion

Cooperatives globally and in India and Karnataka has played an important role in the national economy. With the emergence of cooperative in India their has been tremendous growth and development in agriculture, industry and also service sectors. Co-operatives have been penetrated into all areas not letting down any area. But there are some lacunae in the cooperatives in recent years in respect of membership, management and various other factors. There is stiff competition the global scenario. If this sector is led in a right direction probably nobody can shake cooperatives. Cooperatives are the best solution for the development in any economy.

# ಸಹಕಾರಿ ಸಂಸ್ಥೆಯಲ್ಲಿ ನಿರ್ವಹಣೆ ಸಂದರ್ಭ ಇರಲೇ ಬೇಕಾದ ಪ್ರಮುಖ ಅಂಶಗಳು.

– ಶ್ರೀ ರಾಧಾಕೃಷ್ಣ ಕೋಟೆ

ಪ್ರಜಾಪ್ರಭುತ್ವ ಆಡಳಿತದಲ್ಲಿ ನಾಯಕತ್ವದ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ನಾಯಕ ಅಂದರೆ ಆಡಳಿತ ವ್ಯವಸ್ಥೆಯ ರೂವಾರಿ. ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮತದಾರರ ಅಧೀನದ ಕೇಂದ್ರ ಸರಕಾರ ರಾಜ್ಯ ಸರಕಾರ ಜಿಲ್ಲಾ ಪಂಚಾಯತು ತಾಲೂಕು ಪಂಚಾಯತು ಗ್ರಾಮ ಪಂಚಾಯತು ಮುಂತಾದ ಸಾರ್ವಜನಿಕ ಆಡಳಿತ ರಂಗಗಳಂತೆ ಸದಸ್ಯರಿಂದ ನಡೆಸಲ್ಪಡುವ ಸಹಕಾರಿ ರಂಗ ಕೂಡಾ ಬಹುದೊಡ್ಡ ಪ್ರಜಾಪ್ರಭುತ್ವ. ಸಹಕಾರಿ

ಸಂಘಗಳಲ್ಲಿ ವೃತ್ತಿಪರ ಆಡಳಿತ ನಿರ್ವಹಣೆ ಇದ್ದಲ್ಲಿ ಮಾತ್ರ ಆ ಸಂಸ್ಥೆ ಪ್ರಬಲವಾಗಿ ಬೆಳೆದು ಸಾಧನೆಯ ಶಿಖರ ಕಂಗೊಳಿಸಲು ಸಾಧ್ಯ.

6(ಆರು) ––"M" ಯಾವುದೇ ಸಹಕಾರಿ ಸಂಸ್ಥೆಯಲ್ಲಿ ನಿರ್ವಹಣೆ ಸಂದರ್ಭ ಇರಲೇ ಬೇಕಾದ ಪ್ರಮುಖ ಅಂಶಗಳು.

1) Money - ಹಣಕಾಸು
2) Menpower - ವ್ಯಕ್ತಿ ಸಂಪನ್ಮೂಲ
3) Mechines - ಯಾಂತ್ರಿಕತೆ
4) Materials - ಸಾಮಾಗ್ರಿಗಳು
5) Market - ಮಾರುಕಟ್ಟೆ
6) Management skill - ಆಡಳಿತ ಕುಶಲತೆ

### 1) ಹಣಕಾಸು

ಸಹಕಾರಿ ಸಂಘ ದುಡಿಯುವ ಬಂಡವಾಳದ [(1) ಪಾಲುಬಂಡವಾಳ (2) ಕಾದಿಟ್ಟ ನಿಧಿಗಳು (3) ಕೆಟ್ಟ ಸಾಲಗಳಿಗೆ ಕಾದಿಟ್ಟ ನಿಧಿ (NPA) (4) ಇತರ ನಿಧಿಗಳು (5) ಸಾಲಗಳು (6) ಠೇವಣಾತಿಗಳು (7) ಹಂಚಿಕೆಯಾಗದ ಲಾಭಾಂಶ] ಮೂಲಕ ಬಲವಾದ ಹಣಕಾಸು ವ್ಯವಸ್ಥೆಯನ್ನು ಹೊಂದಿದ್ದಲ್ಲಿ ಸಂಸ್ಥೆಯು ಗಟ್ಟಿತನವನ್ನು ಸಾರುತ್ತದೆ.

### 2). ವ್ಯಕ್ತಿ ಸಂಪನ್ಮೂಲ

ವ್ಯಕ್ತಿ ಸಂಪನ್ಮೂಲ ಕೂಡಾ ಸಂಸ್ಥೆಯ ನಿರ್ವಹಣೆಯಲ್ಲಿ ಇರುವ ಪ್ರಮುಖ ಅಂಶ. ಆಡಳಿತ ಮಂಡಳಿ ಅಧ್ಯಕ್ಷ ಮುಖ್ಯಕಾರ್ಯನಿರ್ವಹಣಾಧಿಕಾರಿ ಶಿಬಂಧಿ ಸುಲಲಿತ ಆಡಳಿತ ನಿರ್ವಹಣೆಯಲ್ಲಿ ಇರಬೇಕಾದ ಸಂಪನ್ಮೂಲಗಳು. ಇವುಗಳಲ್ಲಿ ಯಾವುದೇ ಅಂಶ ಸಶಕ್ತರೀತಿಯಲ್ಲಿ ಜವಾಬ್ದಾರಿಯುತವಾಗಿ ಇಲ್ಲದಿದ್ದಲ್ಲಿ ಸಂಸ್ಥೆ ನಿರೀಕ್ಷೆಯಂತೆ ಮುನ್ನಡೆಯಲು ಅಸಾಧ್ಯ.

### 3) ಯಾಂತ್ರಿಕತೆ

ಆಧುನಿಕ ಕಾಲಘಟ್ಟದಲ್ಲಿ ಡಿಜಿಟಲೈಸೇಶನ್ ಸಹಿತ ನವೀನ ಯಾಂತ್ರಿಕತೆ ಸಂಸ್ಥೆಯಲ್ಲಿದ್ದು ವೇಗದ ಖಚಿತಕಾರ್ಯಗಳು ಸಾಗುತ್ತಿರಬೇಕು.

### 4) ಸಾಮಾಗ್ರಿಗಳು

ಸಾಮಾಗ್ರಿಗಳು ಅಂದರೆ ವಸ್ತುಗಳು ಎಂಬ ಅರ್ಥ ಮಾತ್ರವಲ್ಲ. ಎಲ್ಲಾ ವಿಧದ ಸೌಲಭ್ಯಗಳು ಗ್ರಾಹಕರಿಗೆ ದೊರೆಯುವಂತಿರಬೇಕು.

### 5) ಮಾರುಕಟ್ಟೆ

ಸಂಸ್ಥೆ ಸದಸ್ಯನ ಉತ್ಪನ್ನಗಳಿಗೆ ಉತ್ತಮದರದ ಮಾರುಕಟ್ಟೆಯ ತಾಣವಾಗಬೇಕು.

### 6) ಆಡಳಿತ

ಆಡಳಿತ ಅನ್ನುವಂತದ್ದು ಸಂಸ್ಥೆಯ ವ್ಯವಹಾರ ಸೂತ್ರಕ್ಕೆ ಜೀವತುಂಬುವ ಸಾಧನ. ಇತರರಿಂದ ಅರ್ಥಾತ್ ಸಂಸ್ಥೆಯ ಶಿಬಂಧಿಯಿಂದ ಕೆಲಸ ಮಾಡಿಸುವ ಕಲೆಯನ್ನು ಹೊಂದಿದ್ದಲ್ಲಿ ಅದು ಆಡಳಿತ ಮಂಡಳಿಯ ನಿಜವಾದ ನಿರ್ವಹಣೆ. ಸಹಕಾರಿ ಸಂಸ್ಥೆಯ ಏಳುಬೀಳು ಆಡಳಿತ ನಿರ್ವಹಣೆಯ ಚಾಕತ್ಯದಲ್ಲಿ ಅಡಕವಾಗಿರುತ್ತದೆ

ಆಡಳಿತ ಮಂಡಳಿಯು ತನ್ನ ನಿಗದಿತ ಕರ್ತವ್ಯ ಹಾಗೂ ಮುಂದಿರುವ ಯೋಜನೆಗಳನ್ನು ಗುರಿ ಮುಟ್ಟುವ ಹಾದಿಯಲ್ಲಿ ಛಲಬಿಡದೇ ಸಾಗಬೇಕು. ಗುರಿಮುಟ್ಟಲು ದಿಕ್ಕು ತೋರಿಸುವಾತನೇ ನಾಯಕ ಅರ್ಥಾತ್ ಅಧ್ಯಕ್ಷ. ಮಾನವ ಸಂಪನ್ಮೂಲಗಳ ನಿರ್ವಹಣೆಯ ಜ್ಞಾನದೊಂದಿಗೆ ಬೆಂಬಲಿಗರ ಸಹಾಯ ಪಡೆದು ಮುನ್ನಡೆಯುವವನು ಉತ್ತಮ ಸಹಕಾರಿ ನಾಯಕನಾಗಲು ಸಾಧ್ಯ. ಆಡಳಿತ ಮಂಡಳಿ ಹಾಗೂ ಶಿಬಂಧಿಯ ಮಧ್ಯದ ಬಾಂಧವ್ಯ ಸಹಕಾರಿ ರಂಗದಲ್ಲಿ ಪ್ರಮುಖವಾದ ಅಂಶ. ನಿಗದಿತ ಅವಧಿಯಲ್ಲಿ ಶಿಬಂಧಿಗೆ ಹೊಣೆ ನೀಡಿದ ಮಾರಾಟದ ಮ್ಹಾಲುಗಳನ್ನು ಕಡ್ಡಾಯವಾಗಿ ತಪಾಸಣೆಗೊಳಿಸುವುದು ಆಡಳಿತದ ಜವಾಬ್ದಾರಿ. ಒಂದು ವೇಳೆ ತಪಾಸಣೆಗೆ ಒಳಪಡಿಸದೇ ಶಿಬಂಧಿಯ ಜತೆ ಶಾಮೀಲಾಗಿ ಅವರು ಹೇಳಿದಂತೆ ವರ್ತಿಸುವವರು ಬೇಜವಾಬ್ದಾರಿಯವರಾಗಿದ್ದು ಆಡಳಿತಕ್ಕೆ ನಾಲಾಯಕ್ಕು ವ್ಯಕ್ತಿಗಳು. ಸಂಘದ ಮಾರಾಟ ವಿಭಾಗದಲ್ಲಿ ಲಾಭಾಂಶ ಕನಿಷ್ಟ ಪ್ರಮಾಣದಲ್ಲಿದ್ದು ಹೆಚ್ಚುಸಲ ವ್ಯವಹಾರವನ್ನು ಕುದುರಿಸಿದಾಗ ಗ್ರಾಹಕನಿಗೂ ಅನುಕೂಲ ಸಂಸ್ಥೆಯು ಗಟ್ಟಿಯಾಗುತ್ತದೆ. ಅದನ್ನು ನಿರ್ವಹಿಸುವ ಶಕ್ತಿ ಆಡಳಿತಕ್ಕೆ ಇರಬೇಕು.

ಆಡಳಿತ ಶಿಬಂಧಿ ತಮ್ಮ ಹಕ್ಕು ಕರ್ತವ್ಯದ ಬಗ್ಗೆ ಪರಿಪೂರ್ಣ ಜ್ಞಾನ ಹೊಂದಿ ಕಾರ್ಯನಿರ್ವಹಿಸಬೇಕು. ಅವರು ಉತ್ತಮರು ಅನ್ನಬೇಕಾದರೆ ಸೂಕ್ಷ್ಮತಿತ್ವ ಇರಲೇಬೇಕು. ಅಚ್ಚುಕಟ್ಟಾಗಿ ಪ್ರಾಮಾಣಿಕರೀತಿಯಲ್ಲಿ ಕಾರ್ಯನಿರ್ವಹಿಸುವ ನೌಕರರು ಸಂಸ್ಥೆಯ ಆಸ್ತಿ. ತನ್ನ ವೃತ್ತಿಯಲ್ಲಿ ಅಲ್ಪಜ್ಞಾನ ಹೊಂದಿ ನಿಷ್ಟಾವಂತ ಸಹವರ್ತಿಯನ್ನು ದಾರಿತಪ್ಪಿಸುವವರು ಅಲ್ಪತನದ ಸ್ಥಾನ ಹೊಂದುತ್ತಾರೆ. ಸಂಘದಲ್ಲಿ ತನಗೆ ಹಂಚಲ್ಪಟ್ಟ ಕೆಲಸಗಳನ್ನು ಪೂರ್ಣರೀತಿಯಲ್ಲಿ ನಿರ್ವಹಿಸದೆ ಅಲ್ಪಸ್ವಲ್ಪ ತಿಳುವಳಿಕೆ ಹೊಂದಿ ಆಡಳಿತಮಂಡಳಿಯನ್ನು ಭೋಪರಾಕ್ ಅನ್ನುತ್ತಾ ಸಂಘದ ಸ್ವತ್ತನ್ನು ಸ್ವಾಹಾ ಮಾಡುವವರು ಸಂಘದ ಕೆಟ್ಟ ಸೊತ್ತು. (NPA).

ಆಡಳಿತ ಮಂಡಳಿ ಹಾಗೂ ಶಿಬಂಧಿಯವರಲ್ಲಿ ಸಂವಹನ ಸಾಮರ್ಥ್ಯ ವಿರಬೇಕು ಸದಸ್ಯರು ಗ್ರಾಹಕರನ್ನು ನಗುಮುಖದಿಂದ ಸ್ವಾಗತಿಸಿ ಅವರ ಅವಶ್ಯಕತೆಗಳಿಗೆ ಚುರುಕಾಗಿ ಸ್ಪಂದಿಸಿದಾಗ ಸಂಘದ ಬಗ್ಗೆ ಗೌರವಾನ್ವಿತ ಅಭಿಪ್ರಾಯ ಸಾರ್ವಜನಿಕವಾಗಿ ಮೂಡುತ್ತದೆ. ಖಾಯಂ ಬರುವ ಗ್ರಾಹಕನನ್ನು ಗುರುತು ಪರಿಚಯದ ನೆಲೆಯಲ್ಲಿ ಮಾತನಾಡಿಸಿದಾಗ ಆತನಲ್ಲಿ ಸಂತಸದ ಭಾವನೆ ತುಂಬಿ ಸಂಸ್ಥೆಯಲ್ಲಿ ವ್ಯವಹಾರವನ್ನು ವೃದ್ದಿಸುತ್ತಾನೆ. ಗ್ರಾಹಕನಿಗೆ ನಿರೀಕ್ಷೆಗಿಂತ ಹೆಚ್ಚಿನ ಸೇವೆ ದೊರೆತಾಗ ಅದು ಸಮಾಜದ ಇತರರ ಮಧ್ಯೆ ಪಸರಿಸಿ ಸಂಸ್ಥೆ ವಿಶಾಲವಾಗಿ ಬೆಳೆಯಲು ದಾರಿದೀಪವಾಗುತ್ತದೆ. ಗ್ರಾಹಕ ಸಂಬಂಧಕ್ಕೆ ಇರುವಷ್ಟೇ ಪ್ರಾಮುಖ್ಯತೆ ಗೃಹಬಳಕೆಯ ವಸ್ತುಗಳ ನಿರ್ವಹಣೆಗೂ ಇದೆ. ವಸ್ತುಗಳ ವಿಂಗಡಣೆ ಕ್ರಮಬದ್ದತೆ ಶುಭ್ರತೆ ವ್ಯವಹಾರಿಕ ಶಿಸ್ತುಪಾಲನೆ ಗ್ರಾಹಕ ಚಟುವಟಿಕೆಯ ಪ್ರಮುಖ ಅಂಶಗಳು. ಇವತ್ತು ರಾಜನಾಗಿದ್ದ ವ್ಯಕ್ತಿ ನಾಳೆ ಸೇವಕನಾಗಿ ಕಾರ್ಯನಿರ್ವಹಿಸುವ ಮನೋಸ್ಥಿತಿ ಆಡಳಿತ ಮಂಡಳಿ ಶಿಬಂಧಿಗೆ ಗ್ರಾಹಕವ್ಯವಹಾರದಲ್ಲಿ ಅಗತ್ಯ. ಗ್ರಾಹಕರೊಂದಿಗೆ ನಗುಮುಖದ ಸಂವಹನದಲ್ಲಿ ಅವರನ್ನು ಹೊಗಳುವಿಕೆಯ ಧ್ವನಿ ಗಟ್ಟಿಯಾಗಿರಬೇಕು. ಗ್ರಾಹಕರದ್ದು ಯಾವುದಾದರೂ ಋಣಾತ್ಮಕ ವ್ಯವಹಾರಗಳಿದ್ದಲ್ಲಿ ಅಂತಹ ಸಂದರ್ಭದಲ್ಲಿ ಬಹಳ ನಯವಾಗಿ ಆತನ ಗಮನಕ್ಕೆ ತರುವ ಅಂಶವನ್ನು ರೂಢಿಸಿಕೊಳ್ಳಬೇಕು.

ಈ ರೀತಿ ವೃತ್ತಿಪರತೆ ಶಿಸ್ತನ್ನು ಕಾಪಾಡಲು ಸಹಕಾರಿ ಸಂಘದಲ್ಲಿ ಆಡಳಿತ ಮಂಡಳಿ ಹಾಗೂ ಶಿಬಂಧಿಗೆ ತರಬೇತಿ ಅವಶ್ಯ. ವರ್ಷದಲ್ಲಿ ಎರಡು ಮೂರು ಭಾರಿ ಮಾನವ ಸಂಪನ್ಮೂಲ ಕಾನೂನು ನಿಯಮ ಲೆಕ್ಕಪತ್ರ ಮುಂತಾದ ವಿಷಯಾಧಾರಿತವಾಗಿ ತಜ್ಞರಿಂದ ತರಬೇತಿಗಳನ್ನು ಏರ್ಪಡಿಸುತ್ತಾ ಇದ್ದಲ್ಲಿ ವೃತ್ತಿಪರತೆಯ ಬಗ್ಗೆ ಶಿಕ್ಷಣ ದೊರೆಯುತ್ತದೆ. ಎಲ್ಲಾ ಸಹಕಾರಿ ಸಂಸ್ಥೆಗಳು ಆಗಾಗ ತರಬೇತಿಗಳತ್ತ ಗಮನಹರಿಸಲೇಬೇಕು. "ಕ್ಷಣಕ್ಷಣ ಶಿಕ್ಷಣ" ಅಂದ ಹಾಗೆ ಆಡಳಿತ ಮಂಡಳಿ ಶಿಬಂಧಿಯ ಜ್ಞಾನ ಶಿಸ್ತನ್ನು ವೃದ್ದಿಸಲು ತರಬೇತಿ ತೀರಾ ಅವಶ್ಯ.

ಒಟ್ಟಿನಲ್ಲಿ ಸಹಕಾರಿ ಕ್ಷೇತ್ರದಲ್ಲಿ ವೃತ್ತಿಪರತೆ ಮೈಗೂಡಿದಾಗ ಸಹಕಾರದ ಬೆಳಕು ಪ್ರಜ್ವಲಿಸಲು ಸಾಧ್ಯ.

# ಕನ್ನಡ ರಾಜ್ಯೋತ್ಸವ ಕನ್ನಡಿಗರ ಹೆಮ್ಮೆಯ ಉತ್ಸವ

– ಶ್ರೀ ವಿಶ್ವನಾಥ್. ಎಮ್, ಸಹಾಯಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಕನ್ನಡ ರಾಜ್ಯೋತ್ಸವ ಅಥವಾ ಕರ್ನಾಟಕ ರಾಜ್ಯೋತ್ಸವ ಪ್ರತಿ ವರ್ಷ ನವೆಂಬರ್–01 ರಂದು ಆಚರಿಸಲಾಗುತ್ತದೆ. ಮೈಸೂರು ರಾಜ್ಯವು (ಈಗಿನ ಕರ್ನಾಟಕ) 1956ರ ನವೆಂಬರ್ 1 ರಂದು ನಿರ್ಮಾಣವಾದುದರ ಸಂಕೇತವಾಗಿ ಈ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಿದ ಈ ದಿನವನ್ನು ಕನ್ನಡಿಗರು ನಾಡಹಬ್ಬವನ್ನಾಗಿ ಆಚರಿಸುತ್ತಾರೆ. ರಾಜ್ಯೋತ್ಸವ ದಿನವನ್ನು ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ರಜಾದಿನವೆಂದು ಪಟ್ಟಿ ಮಾಡಲಾಗಿದೆ ಮತ್ತು ವಿಶ್ವದಾದ್ಯಂತ ಕನ್ನಡಿಗರು ಇದನ್ನು ಆಚರಿಸುತ್ತಾರೆ. ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ ಪ್ರಧಾನ ಮಾಡಲಾಗುತ್ತದೆ.

**ರಾಜ್ಯೋತ್ಸವದ ಇತಿಹಾಸ** : ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾಯರು ಕರ್ನಾಟಕ ಏಕೀಕರಣ ಚಳುವಳಿಯನ್ನು 1905ರಲ್ಲಿ ಪ್ರಾರಂಭಿಸಿದರು. 1950ರಲ್ಲಿ ಭಾರತವು ಗಣರಾಜ್ಯವಾದ ನಂತರ ಭಾರತದ ವಿವಿದ ಪ್ರಾಮತ್ಯಗಳು, ಭಾಷೆಗಳ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತೆ ರಾಜ್ಯಗಳು ರೂಪುಗೊಂಡಿದ್ದವು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ, ಮೈಸೂರು ರಾಜ್ಯವು ಉದಯವಾಯಿತು. 1956ರ ನವೆಂಬರ್ 1 ರಂದು ಮದ್ರಾಸ್ ಮುಂಬಯಿ, ಹೈದರಬಾದ್, ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ಎಂಬುದಾಗಿ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯವನ್ನು ಮೂರು ಪ್ರದೇಶಗಳಲ್ಲಿ ಗುರುತಿಸಲಾಯಿತು.

1) ಹೊಸದಾಗಿ ಏಕೀಕೃತಗೊಂಡ ರಾಜ್ಯದ ಆರಂಭದಲ್ಲಿ ಹೊಸ ಘಟಕದ ಕೋರ್ ರೂಪುಗೊಂಡು ಮುಂಚಿನ ರಾಜ್ಯದ ಹೆಸರು ಇರಲೆಂದು "ಮೈಸೂರು" ಹೆಸರನ್ನು ಉಳಿಸಿಕೊಂಡರು ಆದರೆ ಉತ್ತರ ಕರ್ನಾಟಕದ ಜನರ ತರ್ಕ ಮಾನ್ಯತೆಗಾಗಿ ರಾಜ್ಯದ ಹೆಸರು ನವೆಂಬರ್ 01 1973ರಂದು "ಕರ್ನಾಟಕ" ಎಂದು ಬದಲಾಯಿತು.

2) ಈ ಸಂಧರ್ಭದಲ್ಲಿ ದೇವರಾಜ ಅರಸುರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕ ಏಕೀಕರಣದ ಮನ್ನಣೆ ಇತರ ವ್ಯಕ್ತಿಗಳಿಗೂ ಸೇರುತ್ತದೆ. ಅವರೆಂದರೆ ಅನಕೃ, ಕೆ ಶಿವರಾಮ ಕಾರಂತರು, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎ, ಎನ್ ಕೃಷ್ಣರಾವ್, ಮತ್ತು ಬಿ ಎಂ ಶ್ರೀಕಂಠಯ್ಯ

3) ನಮಗೆಲ್ಲಾ ತಿಳಿದಿರುವಂತೆ ಭಾರತ ಸ್ವಾತಂತ್ರ್ಯಗೊಂಡ ನಂತರ ಕನ್ನಡ ಭಾಷಿಕರಿರುವ ವಿವಿಧ ಪ್ರದೇಶಗಳನ್ನು ಒಂದುಗೂಡಿಸಿ "ಮೈಸೂರು ರಾಜ್ಯ" ವನ್ನು ರಚಿಸಲಾಗಿತ್ತು. ಉತ್ತರ ಕರ್ನಾಟಕ ಮತ್ತು ಹೈದರಬಾದ್ ಕರ್ನಾಟಕ (ಈಗಿನ ಕಲ್ಯಾಣ ಕರ್ನಾಟಕ) ಪ್ರದೇಶಗಳು ಈ ರಾಜ್ಯದಲ್ಲಿ ವಿಲೀನವಾಗಿದ್ದವು. ಆದರೆ ಈ ಪ್ರದೇಶದ ಜನರಿಗೆ ರಾಜ್ಯಕ್ಕೆ "ಮೈಸೂರು ರಾಜ್ಯ" ಎಂದು ನಾಮಕರಣ ಮಾಡಿರುವುದು ಇಷ್ಟವಾಗಿರಲಿಲ್ಲ. ಈ ಹೆಸರಲ್ಲಿ ಬದಲಾವಣೆ ಮಾಡಬೇಕೆಂದು ಒತ್ತಾಯಿಸುತ್ತಿದ್ದರು.

4) ಈ ಕುರಿತು ಆಗ ರಾಜ್ಯದಲ್ಲಿ ಸುಧೀರ್ಘ ಚರ್ಚೆಯ ಬಳಿಕ 1973ರ ನವೆಂಬರ್ 1ರಂದು ರಾಜ್ಯಕ್ಕೆ "ಕರ್ನಾಟಕ"ವೆಂದು ಪುನರ್ ನಾಮಕರಣ ಮಾಡಲಾಯಿತು. ಆಗಿನ ಮುಖ್ಯಮಂತ್ರಿಯಾಗಿದ್ದ ಡಿ ದೇವರಾಜ ಅರಸುರವರು ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡರು.

5) ಮೈಸೂರು ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣ ಮಾಡಿದ ಶುಭದಿನದಂದು ರಾಜ್ಯವನ್ನು ಉದ್ದೇಶಿಸಿ ಮಾತನಾಡಿದ ಅರಸುರವರು ಈ ಬೆಳವಣಿಗೆಯನ್ನು ಹೀಗೆ ವಿವರಿಸಿದ್ದರು. ಕರ್ನಾಟಕದ ಏಕೀಕರಣದ ಹಂಬಲಕ್ಕೆ ಸ್ಪುಟವಾದ ತೂಪು ದೊರಕಿದ್ದು 1916ರಲ್ಲೇ ಧಾರವಾಡದಲ್ಲಿ ಕರ್ನಾಟಕ ಸಭೆ ಸ್ಥಾಪನೆಯಾದಾಗ, ಏಕೀಕರಣ ಸಮ್ಮೇಳನವು ಧಾರವಾಡದಲ್ಲಿ ಮೊಟ್ಟ ಮೊದಲಿಗೆ ನಡೆಯಿತು.

6) 1956ರ ನವೆಂಬರ್ 1ರಂದು ಕನ್ನಡನಾಡು ಉದಯಿಸಿತು. ಆದರೆ ಈ ನಾಡಿನ ಹಿರಿಮೆ ಸಂಸ್ಕೃತಿ ಮತ್ತು ಒಗ್ಗಟ್ಟಿನ ಸಂಕೇತವಾದ ಹೆಸರು ಇರದೇ ಇದ್ದುದು ಜನಮನದ ಅಮತರಾಳವನ್ನು ಕಲಕಿತ್ತು. ಮತ್ತೆ ಕಾಲಮಾನ 17 ವರ್ಷಗಳ ನಂತರ ಕಾಲಮಾನ ಪರಿಸ್ಥಿತಿಗೆ ಅನುಗುಣವಾಗಿ ನಡೆದ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಈಗ ಜನತೆಯ ಮಹತ್ವಾಕಾಂಕ್ಷೆ ಈಡೇರಿದೆ. ಹಲವಾರು ದಶಕಗಳ ಕಾಲ ನಾಡು–ನುಡಿಯ ಉತ್ಕಟ ಪ್ರೇಮಿಗಳ ತ್ಯಾಗ ಶ್ರಮದ ಸಾಕ್ಷಾತ್ಕಾರ ಈ ನಾಮಕರಣ ಆ ಪ್ರಾತ: ಸ್ಮರಣೀಯರಿಗೆಲ್ಲಾ ರಾಜ್ಯ ಜನತೆಯ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸಿದರು.

**ಆಚರಣೆಗಳು :**

1) ರಾಜ್ಯೋತ್ಸವ ದಿನವನ್ನು ಕರ್ನಾಟಕ ರಾಜ್ಯಾದ್ಯಂತ ಮಹದಾನಂದ ಮತ್ತು ಚಟುವಟಿಕೆಯಿಂದ ಆಚರಿಸಲಾಗುತ್ತದೆ. ಕೆಂಪು ಮತ್ತು ಹಳದಿ ಕನ್ನಡ ಧ್ವಜಗಳು ರಾಜ್ಯದ ಎಲ್ಲೆಡೆ ಹಾರಿಸಲ್ಪಡುತ್ತವೆ. ಕನ್ನಡ ನಾಡಗೀತೆ "ಜಯಭಾರತ ಜನನಿಯ ತನುಜಾತೆ" ಯನ್ನು ಆಡಲಾಗುತ್ತದೆ. ಸರ್ಕಾರಿ ಕಛೇರಿ ಮತ್ತು ಹಲವಾರು ಪ್ರಮುಖ ಪ್ರದೇಶಗಳಲ್ಲಿ ವಾಹನಗಳ ಮೇಲೆ ತಾಯಿ ಭುವನೇಶ್ವರಿ ಚಿತ್ರವನ್ನು ಇಟ್ಟು ಮೆರವಣಿಗೆಯನ್ನು ಮಾಡಲಾಗುತ್ತದೆ.

2) ರಾಜ್ಯೋತ್ಸವನ್ನು ಕರ್ನಾಟಕದಲ್ಲಿರುವ ಬಹುತೇಕ ಹಿಂದುಗಳು ಎಲ್ಲಾ ಜನಾಂಗದವರು ಧರ್ಮಭೇದವಿಲ್ಲದೆ ಆಚರಿಸುತ್ತಾರೆ. ಹಾಗೂ ಸರ್ಕಾರ ಮೆರವಣಿಗೆ ಆಟೋ ರಿಕ್ಷಾಗಳು ಮತ್ತು ಇತರೆ ವಾಹನಗಳು ಕನ್ನಡ ಧ್ವಜದ ಬಣ್ಣಗಳಾದ ಕೆಂಪು ಮತ್ತು ಹಳದಿ ವರ್ಣಗಳ ಬಾವುಟದೊಂದಿಗೆ ಅಲಂಕರಿಸಲಾಗುತ್ತವೆ. ರಾಜ್ಯ ಸರ್ಕಾರವು ಕರ್ನಾಟಕ ರಜ್ಯೋತ್ಸವದ ದಿನದಂದು ವಿವಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ಸಾಧಕರಿಗೆ ಪ್ರಶಸ್ತಿಯನ್ನು ಪ್ರಕಟ ಮಾಡಿ ಗೌರವಿಸುತ್ತಾರೆ.

3) ರಾಜ್ಯೋತ್ಸವದ ಪ್ರಯುಕ್ತ ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರಾಧಾನ ಮಾಡಲಾಗುತ್ತದೆ. ಹಲವು ಸಾಮಸ್ಕೃತಿಕ ಕಾರ್ಯಕ್ರಮಗಳನ್ನು ವಿಶ್ವದಾಧ್ಯಂತ ಹಮ್ಮಿಕೊಳ್ಳಲಾಗುತ್ತದೆ. ರಾಜ್ಯದ ಮುಖ್ಯಮಂತ್ರಿಯವರು ಸಾಧಕರಿಗೆ ಪ್ರಶಸ್ತಿ ಪ್ರಧಾನವನ್ನು ಮಾಡುತ್ತಾರೆ.

# ಪಟ್ಟಣ ಸಹಕಾರ ಬ್ಯಾಂಕುಗಳು- ಆಡಳಿತ ಮಂಡಳಿಯ ಜವಾಬ್ದಾರಿಗಳು

– ಶ್ರೀ ವೈಭವ ಎಸ್ ಬೋಡ್ಕೆ, ತನುಜಾ ಪಾದ್ ಕನ್ನಡಕ್ಕೆ ಅನುವಾಧ– ಶೋಭ ಆರ್, ಸಹಪ್ರಧಾನ ವ್ಯವಸ್ಥಾಪಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

**ಪರಿಚಯ**

ಪಟ್ಟಣ ಸಹಕಾರಿ ಬ್ಯಾಂಕುಗಳು (UCBs) ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇವು ಬ್ಯಾಂಕಿಂಗ್ ತತ್ವಗಳನ್ನು ಸಹಕಾರಿ ಮೌಲ್ಯಗಳೊಂದಿಗೆ ಸಂಯೋಜಿಸಿ ಪಟ್ಟಣ ಸಮುದಾಯಗಳಿಗೆ ಸೇವೆ ಸಲ್ಲಿಸುತ್ತವೆ. ವಿಶೇಷವಾಗಿ ಕಡಿಮೆ ಹಾಗೂ ಮಧ್ಯಮ ಆದಾಯ ಗುಂಪುಗಳಿಗೆ ಸಾಲ ಮತ್ತು ಹಣಕಾಸು ಸೇವೆಗಳ ಲಭ್ಯತೆಯನ್ನು ಖಚಿತಪಡಿಸುವ ಮೂಲಕ, ಆರ್ಥಿಕ ಸೇರ್ಪಡೆಗೆ ಮಹತ್ವದ ಕೊಡುಗೆ ನೀಡುತ್ತವೆ.

ಇವುಗಳ ಮಹತ್ವವನ್ನು ಅರಿತು, ಭಾರತ ರಿಸರ್ವ್ ಬ್ಯಾಂಕ್ (RBI) ಪಟ್ಟಣ ಸಹಕಾರಿ ಬ್ಯಾಂಕುಗಳ ಆಡಳಿತಕ್ಕಾಗಿ ಸಮಗ್ರ ಮಾರ್ಗಸೂಚಿಗಳನ್ನು ರೂಪಿಸಿದೆ. ಇವುಗಳನ್ನು ಆಡಳಿತ ಮಂಡಲಿ ನಿರ್ದೇಶಕರ ಕುರಿತ ಮಾಸ್ಟರ್ ಸುತ್ತೋಲೆಯಲ್ಲಿ ವಿವರಿಸಿದೆ. ಈ ನಿರ್ದೇಶನಗಳು – ಆಡಳಿತ ಮಂಡಲಿ ರಚನೆ, ನಿರ್ದೇಶಕರ ಜವಾಬ್ದಾರಿಗಳು, ಪ್ರಮುಖ ಮಂಡಲಿ ಸಮಿತಿಗಳ ಸ್ಥಾಪನೆ ಹಾಗೂ ನಿಯಮಾನುಸರಣೆಯ ಜೊತೆಗೆ ಪಾರದರ್ಶಕತೆಯನ್ನು ಉತ್ತೇಜಿಸುವುದನ್ನು ಒಳಗೊಂಡಿವೆ. ಆಡಳಿತ ವ್ಯವಸ್ಥೆಗಳನ್ನು ಬಲಪಡಿಸುವುದು, ಪಟ್ಟಣ ಸಹಕಾರಿ ಬ್ಯಾಂಕುಗಳನ್ನು ರಾಷ್ಟ್ರೀಯ ನಿಯಂತ್ರಣ ಮಾನದಂಡಗಳಿಗೆ ಅನುಗುಣವಾಗಿ ತರುವುದು ಮತ್ತು ಅವುಗಳ ಆರ್ಥಿಕ ಸ್ಥಿರತೆಯನ್ನು ಸುಧಾರಿಸುವುದು ಇದರ ಗುರಿಗಳಾಗಿವೆ.

ಈ ಲೇಖನವು RBIಯ ಆಡಳಿತ ಮಾರ್ಗಸೂಚಿಗಳ ಆಳವಾದ ವಿಶ್ಲೇಷಣೆಯನ್ನು ಒದಗಿಸುತ್ತದೆ, ಅವುಗಳ ಪರಿಣಾಮಗಳು ಹಾಗೂ ಲಾಭಗಳನ್ನು ಎತ್ತಿ ತೋರಿಸುತ್ತದೆ. ಈ ಮಾನದಂಡಗಳನ್ನು ಪಾಲಿಸುವ ಮೂಲಕ, ಪಟ್ಟಣ ಸಹಕಾರಿ ಬ್ಯಾಂಕುಗಳು ಕಾರ್ಯಾಚರಣೆಯ ಪ್ರಾಮಾಣಿಕತೆಯನ್ನು ಹೆಚ್ಚಿಸಬಹುದು, ಸಾರ್ವಜನಿಕ ವಿಶ್ವಾಸವನ್ನು ನಿರ್ಮಿಸಬಹುದು ಹಾಗೂ ದೀರ್ಘಕಾಲೀನ ಸುಸ್ಥಿರತೆಯನ್ನು ಉತ್ತೇಜಿಸಬಹುದು.

**1) RBIಯಡಿ ಕಾರ್ಯನಿರ್ವಹಿಸುವ UCBಗಳು (BR ಕಾಯಿದೆ 1949 ಮತ್ತು RBI ಕಾಯಿದೆ 1934)**

ಪಟ್ಟಣ ಸಹಕಾರಿ ಬ್ಯಾಂಕುಗಳು (UCBs) ಭಾರತ ರಿಸರ್ವ್ ಬ್ಯಾಂಕ್ (RBI) ಸ್ಥಾಪಿಸಿರುವ ನಿಯಂತ್ರಣಾತ್ಮಕ ಚೌಕಟ್ಟಿನಡಿ ಕಾರ್ಯನಿರ್ವಹಿಸುತ್ತವೆ. ಭಾರತ ರಿಸರ್ವ್ ಬ್ಯಾಂಕ್ ಕಾಯಿದೆ, 1934 (RBI Act) ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949 (BR Act) ಪಟ್ಟಣ ಸಹಕಾರಿ ಬ್ಯಾಂಕುಗಳ ನಿಯಂತ್ರಣಕ್ಕೆ ಕಾನೂನುಬದ್ಧವಾದ ಚೌಕಟ್ಟನ್ನು ಒದಗಿಸುತ್ತವೆ.

ಈ ಕಾನೂನುಗಳು RBIಗೆ UCBಗಳ ಕಾರ್ಯಾಚರಣೆಗಳನ್ನು ಮೇಲ್ವಿಚಾರಣೆ ಮಾಡುವ ಮತ್ತು ಅವು ಬ್ಯಾಂಕಿಂಗ್ ಮಾನದಂಡಗಳು, ವಿವೇಕಬದ್ಧ ಹಣಕಾಸು ಪದ್ಧತಿಗಳು ಮತ್ತು ಕಾನೂನು ನಿಯಮಗಳನ್ನು ಪಾಲಿಸುತ್ತಿವೆ ಎಂಬುದನ್ನು ಖಚಿತಪಡಿಸುವ ಅಧಿಕಾರವನ್ನು ನೀಡುತ್ತವೆ. ಈ ಉಭಯ ನಿಯಂತ್ರಣ ಚೌಕಟ್ಟು UCBಗಳು ಆರ್ಥಿಕ ಶಿಸ್ತು, ಅಪಾಯ ನಿರ್ವಹಣಾ ತಂತ್ರಗಳು ಹಾಗೂ ದೃಢವಾದ ಆಡಳಿತ ವ್ಯವಸ್ಥೆಗಳನ್ನು ಅನುಸರಿಸುವಂತೆ ಮಾಡುತ್ತದೆ, ಇದರಿಂದ ಠೇವಣಿದಾರರ ಹಿತಾಸಕ್ತಿಗಳನ್ನು ರಕ್ಷಿಸಿ ಆರ್ಥಿಕ ಸ್ಥಿರತೆಯನ್ನು ಕಾಪಾಡುತ್ತದೆ.

**2) ಆಡಳಿತ ಮಂಡಲಿ ರಚನೆ: ವೃತ್ತಿಪರ ನಿರ್ದೇಶಕರ ಸೇರ್ಪಡೆ**

UCBಗಳ ಆಡಳಿತ ಮಂಡಲಿಯ ವೃತ್ತಿಪರತೆಯನ್ನು ಮತ್ತು ಸಮಗ್ರತೆಯನ್ನು ಹೆಚ್ಚಿಸಲು, ಕನಿಷ್ಠ ಇಬ್ಬರು ನಿರ್ದೇಶಕರು ಬ್ಯಾಂಕಿಂಗ್ ಅನುಭವ ಅಥವಾ ಕಾನೂನು, ಲೆಕ್ಕಪತ್ರ ನಿರ್ವಹಣೆ ಅಥವಾ ಹಣಕಾಸಿನಲ್ಲಿ ಸಂಬಂಧಿತ ವೃತ್ತಿಪರ ಅರ್ಹತೆಗಳನ್ನು ಹೊಂದಿರಬೇಕು ಎಂದು ಕಡ್ಡಾಯ ನಿಯಮವಿದೆ. ಈ ಅವಶ್ಯಕತೆಯಿಂದ ಆಡಳಿತ ಮಂಡಲಿ ಪರಿಣಾಮಕಾರಿ ಆಡಳಿತ ನಡೆಸಲು ಅಗತ್ಯವಾದ ಪರಿಣತಿಯನ್ನು ಪಡೆಯುತ್ತದೆ. ಇಂತಹ ವೃತ್ತಿಪರರು ಹಣಕಾಸು ನಿರ್ವಹಣೆ, ಅಪಾಯ ಮೌಲ್ಯಮಾಪನ ಹಾಗೂ ಕಾನೂನು ಪಾಲನೆಯ ವಿಷಯಗಳಲ್ಲಿ ಅಮೂಲ್ಯವಾದ ತಿಳುವಳಿಕೆಯನ್ನು ನೀಡುತ್ತಾರೆ.

Salary Earners' Banks (ವೇತನ ಪಡೆಯುವವರ ಬ್ಯಾಂಕುಗಳು) ಈ ನಿಯಮದಿಂದ ವಿನಾಯಿತಿ ಹೊಂದಿವೆ, ಏಕೆಂದರೆ ಅವು ಮುಖ್ಯವಾಗಿ ವೇತನ ಪಡೆಯುವ ನೌಕರರಿಗೆ ಮಾತ್ರ ಸೇವೆ ಸಲ್ಲಿಸುತ್ತವೆ ಮತ್ತು ಅವುಗಳ ಕಾರ್ಯಾಚರಣೆಯ ಪ್ರಮಾಣವು ಹೋಲಿಸಿದರೆ ಚಿಕ್ಕದಾಗಿದೆ. ಆದರೆ ಇತರ ಎಲ್ಲಾ UCBಗಳು ತಮ್ಮ ಆಡಳಿತ ಮಂಡಲಿ ವೃತ್ತಿಪರರನ್ನು ಸೇರಿಸಿಕೊಳ್ಳುವುದು ಕಡ್ಡಾಯ, ಇದರಿಂದ ಬ್ಯಾಂಕಿನ ತಂತ್ರಜ್ಞಾನದ ಹಾಗೂ ಹಣಕಾಸು ಸಂಬಂಧಿತ ನಿರ್ಧಾರಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಬಹುದು.

**3) ಆಡಳಿತ ಮಂಡಳಿ (Board of Management – BoM)**

ಆಡಳಿತ ಮಂಡಳಿಯ ನಿರ್ದೇಶಕರ (Board of Directors) ಹೊರತಾಗಿ, Salary Earners' Bank ಮತ್ತು 100 ಕೋಟಿ ರೂ.ಗಿಂತ ಕಡಿಮೆ ವ್ಯವಹಾರ ಹೊಂದಿರುವ ಬ್ಯಾಂಕುಗಳನ್ನು ಹೊರತುಪಡಿಸಿ, ಇತರ ಎಲ್ಲಾ UCBಗಳು ಆಡಳಿತ ಮಂಡಲಿಯನ್ನು ರಚಿಸಬೇಕು. BoM ಅನ್ನು ಬ್ಯಾಂಕಿನ ಕಾರ್ಯಾಚರಣೆಗಳ ವೃತ್ತಿಪರ ಮೇಲ್ವಿಚಾರಣೆ ಮತ್ತು ತಂತ್ರಾತ್ಮಕ ನಿರ್ಧಾರಗಳನ್ನು ಕೈಗೊಳ್ಳಲು ವಿನ್ಯಾಸಗೊಳಿಸಲಾದ ಹೆಚ್ಚುವರಿ ಆಡಳಿತಾತ್ಮಕ ರಚನೆ ಎಂದು ಪರಿಗಣಿಸಲಾಗಿದೆ. BoMನ ಮುಖ್ಯ ಜವಾಬ್ದಾರಿಗಳು:

- ನಿರ್ದೇಶಕರು ಮಂಡಳಿಯಿಂದ ರೂಪಿಸಲಾದ ನೀತಿಗಳನ್ನು ಜಾರಿಗೆ ತರುವುದು,
- ನಿಯಂತ್ರಣಾತ್ಮಕ ಚೌಕಟ್ಟಿಗೆ ಅನುಸರಣೆ ಖಚಿತಪಡಿಸಿಕೊಳ್ಳುವುದು,
- ಆರ್ಥಿಕ ಶಿಸ್ತನ್ನು ಕಾಪಾಡುವುದು.

ದೊಡ್ಡ UCBಗಳಲ್ಲಿ BoM ಸ್ಥಾಪನೆ ಅತ್ಯಂತ ಅಗತ್ಯ, ಏಕೆಂದರೆ ಇದರ ಮೂಲಕ ಕಾರ್ಯಾಚರಣಾ ನಿರ್ಧಾರಗಳನ್ನು ಪರಿಣತಿ ಹೊಂದಿದ ತಜ್ಞರು ಕೈಗೊಳ್ಳುತ್ತಾರೆ. ಇದರಿಂದ ಆಡಳಿತ ಮಂಡಳಿ ನಿರ್ದೇಶಕರು ವಿಸ್ತೃತ

ನೀತಿಗಳ ವಿಚಾರಗಳ ಮೇಲೆ ಕೇಂದ್ರೀಕರಿಸಲು ಅವಕಾಶ ಸಿಗುತ್ತದೆ. RBI ಮಾರ್ಗಸೂಚಿಗಳ ಪ್ರಕಾರ, UCBಗಳು ತಮ್ಮ ಉಪವಿಧಿಗಳನ್ನು ತಿದ್ದುಪಡಿ ಮಾಡಿ BoM ರಚನೆ ಮತ್ತು ಅದರ ಕಾರ್ಯನಿರ್ವಹಣೆಗೆ ಸಂಬಂಧಿಸಿದ ನಿಯಮಗಳನ್ನು ಸೇರಿಸಿಕೊಳ್ಳಬೇಕು.

### 4) ನಿರ್ದೇಶಕರ ಪಾತ್ರ (Role of Directors)

UCBಗಳ ನಿರ್ದೇಶಕರು ಬ್ಯಾಂಕ್‌ನ ಸರಾಗ ಹಾಗೂ ನೈತಿಕ ಕಾರ್ಯಾಚರಣೆಯನ್ನು ಖಚಿತಪಡಿಸುವಲ್ಲಿ ಮಹತ್ವದ ಜವಾಬ್ದಾರಿಗಳನ್ನು ಹೊಂದಿರುತ್ತಾರೆ. ಅವರ ಪ್ರಮುಖ ಪಾತ್ರಗಳು ಹೀಗಿವೆ:

- **ನೀತಿ ರೂಪಣೆ (Policy Formulation):** ನಿರ್ದೇಶಕರು ಋಣಖ ನಿಯಮಗಳಿಗೆ ಹೊಂದುವಂತೆ ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಇದರಿಂದ ಬ್ಯಾಂಕಿಂಗ್ ಕಾರ್ಯಾಚರಣೆಗಳು ಕಾನೂನು ನಿಯಮಗಳು ಮತ್ತು ಹಣಕಾಸಿನ ವಿವೇಕಬುದ್ಧಿಯನ್ನು ಪಾಲಿಸುವಂತೆ ಖಚಿತಪಡಿಸಬಹುದು.
- **ನಿಯಮಾನುಸರಣೆ (ನಿಯಂತ್ರಕ ಅನುಸರಣೆ) (Regulatory Compliance):** ನಿರ್ದೇಶಕರು RBI ಹೊರಡಿಸುವ ಎಲ್ಲಾ ನಿಯಮಗಳು ಹಾಗೂ ಸುತ್ತೋಲೆಗಳನ್ನು ಓದಿ, ಅರ್ಥಮಾಡಿಕೊಂಡು, ಅವನ್ನು ಬ್ಯಾಂಕ್‌ನೊಳಗೆ ಜಾರಿಗೆ ತರಲು ಜವಾಬ್ದಾರರಾಗಿರುತ್ತಾರೆ.
- **ಆಡಳಿತ ಮಂಡಳಿ ಸಭೆಗಳಲ್ಲಿ ಪಾಲ್ಗೊಳ್ಳುವುದು (Board Participation):** ನಿರ್ದೇಶಕರು ಸಭೆಗಳಲ್ಲಿ ನಿಯಮಿತವಾಗಿ ಹಾಜರಾಗಬೇಕು, ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಮತ್ತು ನಿರ್ಧಾರಗಳನ್ನು ಕೈಗೊಳ್ಳುವ ಮೊದಲು ಕಾರ್ಯಸೂಚಿ(ಅಜೆಂಡ) ಪತ್ರಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು.
- **ಗೋಪ್ಯತೆ ಮತ್ತು ಪ್ರಾಮಾಣಿಕತೆ (Confidentiality and Integrity):** ನಿರ್ದೇಶಕರು ಮಂಡಳಿಯ ಚರ್ಚೆಗಳು, ಕಾರ್ಯಸೂಚಿ ಪತ್ರಗಳು ಮತ್ತು ಬ್ಯಾಂಕಿಂಗ್ ತಂತ್ರಗಳನ್ನು ಗೋಪ್ಯವಾಗಿರಿಸಬೇಕು. ಅವರು ಬ್ಯಾಂಕಿಂಗ್ ಮಾಹಿತಿಯ ರಹಸ್ಯತೆಯನ್ನು ಕಾಪಾಡಲು ನಿಷ್ಠೆಯ ಪ್ರಮಾಣವಚನಕ್ಕೂ ಬದ್ಧರಾಗಿರುತ್ತಾರೆ.
- **ಸಮೂಹ ಸಹಕಾರ (Team Collaboration):** ಪರಿಣಾಮಕಾರಿ ಆಡಳಿತಕ್ಕೆ ನಿರ್ದೇಶಕರ ನಡುವಿನ ಸಹಕಾರ ಅಗತ್ಯ. ಇದು ತಂಡ ಆಧಾರಿತ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಉತ್ತೇಜಿಸಿ ಬ್ಯಾಂಕ್ ಕಾರ್ಯಚಟುವಟಿಕೆಗಳನ್ನು ಸುಧಾರಿಸುತ್ತದೆ.
- **ಕಾರ್ಯಾಚರಣೆಗಳಲ್ಲಿ ಹಸ್ತಕ್ಷೇಪ ಮಾಡದಿರುವುದು (Non-Interference in Operations):** ನಿರ್ದೇಶಕರು ನೌಕರರ ನೇಮಕಾತಿ, ಪದೋನ್ನತಿ ಅಥವಾ ವರ್ಗಾವಣೆಗಳಲ್ಲಿ ಹಸ್ತಕ್ಷೇಪ ಮಾಡಬಾರದು. ಮಾನವ ಸಂಪನ್ಮೂಲ ನಿರ್ಧಾರಗಳನ್ನು ನಿರ್ವಹಣಾ ಮಂಡಳಿಗೆ ಬಿಟ್ಟು ತಟಸ್ಥ ಆಡಳಿತವನ್ನು ಕಾಪಾಡಬೇಕು.
- **ನೈತಿಕ ನಡೆ (Ethical Conduct) :** ನಿರ್ದೇಶಕರು ತಮ್ಮ ಹುದ್ದೆಯನ್ನು ವೈಯಕ್ತಿಕ ಲಾಭಕ್ಕಾಗಿ ದುರುಪಯೋಗ ಮಾಡಬಾರದು. ಬ್ಯಾಂಕ್ ಸಾಲಗಳ ಮೇಲೆ ಪ್ರಭಾವ ಬೀರುವಂತಿಲ್ಲ ಅಥವಾ ಹಿತಾಸಕ್ತಿ ಸಂಘರ್ಷ (conflict of interest) ಉಂಟುಮಾಡುವ ವ್ಯವಹಾರಗಳನ್ನು ಬೆಂಬಲಿಸಬಾರದು.
- **ಪಾರದರ್ಶಕತೆ ಮತ್ತು ಹೊಣೆಗಾರಿಕೆ (Transparency and Accountability):** ನಿರ್ದೇಶಕರು ಹಿತಾಸಕ್ತಿ ಸಂಘರ್ಷವನ್ನು ತಪ್ಪಿಸಬೇಕು. ತಮ್ಮ ಸಂಬಂಧಗಳನ್ನು ಪಾರದರ್ಶಕವಾಗಿ ಬಹಿರಂಗಪಡಿಸಬೇಕು. ಮತ್ತು ಬ್ಯಾಂಕ್‌ನ ಲೋಗೋವನ್ನು ತಮ್ಮ ವೈಯಕ್ತಿಕ ಸ್ಟೇಷನರಿ (ಉದಾ: ವಿಸಿಟಿಂಗ್ ಕಾರ್ಡ್, ಲೆಟರ್‌ಹೆಡ್) ಮೇಲೆ ಬಳಸಬಾರದು.

ನಿರ್ದೇಶಕರು ತಮ್ಮ ವಿಸಿಟಿಂಗ್ ಕಾರ್ಡ್ ಅಥವಾ ಲೆಟರ್‌ಹೆಡ್‌ನಲ್ಲಿ ಬ್ಯಾಂಕಿನೊಂದಿಗೆ ಇರುವ ತಮ್ಮ ಸಂಬಂಧವನ್ನು ಉಲ್ಲೇಖಿಸಬಹುದು, ಆದರೆ ಬ್ಯಾಂಕ್‌ನ ಲೋಗೋ ಅಥವಾ ವಿನ್ಯಾಸ ಚಿಹ್ನೆಗಳನ್ನು ಬಳಸಬಾರದು

**ಬ್ಯಾಂಕ್ ಕಾರ್ಯಾಚರಣೆಗಳಲ್ಲಿ ನಿರ್ದೇಶಕರು ಪ್ರಮುಖ ಗಮನ ವಹಿಸಬೇಕಾದ ಅಂಶಗಳು:**

a. RBIಯ ನಿಯಂತ್ರಣಾತ್ಮಕ ನೀತಿಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದು.

b. ನಗದು ಮೀಸಲು (Cash Reserve) ಹಾಗೂ ಶಾಸನಬದ್ಧ ದ್ರವ್ಯಾಸ್ತಿ ಅನುಪಾತ (SLR)ಗಳ ಅವಶ್ಯಕತೆಗಳನ್ನು ಪಾಲಿಸುವುದು.

c. ನಿಧಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಲಾಭದಾರಿತ್ವವನ್ನು ಹೆಚ್ಚಿಸುವುದು.

d. ಆದ್ಯತೆಯ ಕ್ಷೇತ್ರಗಳು ಮತ್ತು ದುರ್ಬಲ ವರ್ಗಗಳಿಗೆ ಸಾಲ ನೀಡುವ ಗುರಿಗಳನ್ನು ಪೂರೈಸುವುದು.

e. ಸಾಮಾನ್ಯ ಸದಸ್ಯರ ಹಿತಕ್ಕಾಗಿ ಬ್ಯಾಂಕ್ ನಿಧಿಗಳನ್ನು ವಿವೇಕಬದ್ಧವಾಗಿ ಮತ್ತು ಸರಿಯಾಗಿ ಬಳಸುವುದು.

f. ಸುಸ್ತಿ ಖಾತೆಗಳ ಸಂಖ್ಯೆಯನ್ನು ಕಡಿಮೆ ಮಾಡಿ, ವೇಗವಾಗಿ ವಸೂಲಿ ಕಾರ್ಯಗಳನ್ನು ನೆರವೇರಿಸುವುದು.

g. ಆದಾಯ ಗುರುತಿಸುವಿಕೆ, ಆಸ್ತಿ ವರ್ಗೀಕರಣ ಮತ್ತು Non-Performing Assets (NPA)ಗಳಿಗೆ ಮೀಸಲು (provisioning) ಕುರಿತು ಇರುವ ಮಾರ್ಗಸೂಚಿಗಳನ್ನು ಪಾಲಿಸುವುದು.

h. ಗ್ರಾಹಕ ಸೇವಾ ಮಾನದಂಡಗಳನ್ನು ಸುಧಾರಿಸುವುದು.

i. RBI ಪರಿವೀಕ್ಷಣಾ ವರದಿ ಮತ್ತು ಕಡ್ಡಾಯ ಲೆಕ್ಕಪರಿಶೋಧನಾ ವರದಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.

j. ಬಲಿಷ್ಠ ಮಾಹಿತಿಯ ನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು.

k. RBI ಸೂಚಿಸಿದಂತೆ ಅವಧಿಕ ಪರಿಶೀಲನೆಗಳನ್ನು ನಡೆಸುವುದು.

l. ವಂಚನೆ ಹಾಗೂ ನಿಧಿ ದುರ್ಬಳಕೆ ತಡೆಗಟ್ಟಲು ಎಚ್ಚರಿಕಾ ವ್ಯವಸ್ಥೆಯನ್ನು ಬಲಪಡಿಸುವುದು.

m. ಲೆಕ್ಕಪುಸ್ತಕಗಳ ಸರಿಯಾದ ನಿರ್ವಹಣೆ, ಸಮಯೋಚಿತ ಹೊಂದಾಣಿಕೆ ಸೇರಿದಂತೆ ಆಂತರಿಕ ನಿಯಂತ್ರಣ ಮತ್ತು ಆಡಳಿತ (housekeeping) ಸುಧಾರಿಸುವುದು.

ಟಿ. ಬ್ಯಾಂಕಿಂಗ್ ಕಾರ್ಯಾಚರಣೆಗಳನ್ನು ಗಣಕೀಕರಣಗೊಳಿಸುವುದು.

**5. ಆಡಳಿತ ಮಂಡಳಿಯ ಸಮಿತಿಗಳು (Committees of the Board)**

ಆಡಳಿತವನ್ನು ಬಲಪಡಿಸಲು, UCBಗಳು ಬ್ಯಾಂಕಿಂಗ್ ಕಾರ್ಯಾಚರಣೆಯ ಪ್ರಮುಖ ಅಂಶಗಳನ್ನು ಮೇಲ್ವಿಚಾರಣೆ ಮಾಡುವ ನಿಗದಿತ ಸಮಿತಿಗಳನ್ನು ಆಡಳಿತ ಮಂಡಳಿಯೊಳಗೆ ರಚಿಸಬೇಕು:

- **ಆಡಳಿತ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿ (Audit Committee of the Board – ACB):**

ಆಂತರಿಕ ಲೆಕ್ಕಪರಿಶೋಧನೆಗಳನ್ನು ಮೇಲ್ವಿಚಾರಣೆ ಮಾಡುವುದು, RBI ಮಾರ್ಗಸೂಚಿಗಳ ಅನುಸರಣೆ ಖಚಿತಪಡಿಸಿಕೊಳ್ಳುವುದು ಮತ್ತು ಹಣಕಾಸು ಸಂಬಂಧಿತ ವ್ಯತ್ಯಾಸಗಳನ್ನು ಸರಿಪಡಿಸುವ ಜವಾಬ್ದಾರಿ ಈ ಸಮಿತಿಗೆ ಇದೆ. ಸಮಿತಿಯಲ್ಲಿ ಹಣಕಾಸು, ಲೆಕ್ಕಶಾಸ್ತ್ರ ಅಥವಾ ಲೆಕ್ಕಪರಿಶೋಧನೆ (auditing) ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಸದಸ್ಯರು ಇರಬೇಕು. ಇದು ಬ್ಯಾಂಕ್‌ನ ಆಂತರಿಕ ನಿಯಂತ್ರಣಗಳನ್ನು ಬಲಪಡಿಸುವುದು, ವಂಚನೆ ಅಪಾಯಗಳನ್ನು ಕಡಿಮೆಗೊಳಿಸುವುದು ಹಾಗೂ ಕಡ್ಡಾಯ ಲೆಕ್ಕಪರಿಶೋಧನೆಗಳ ನಂತರ ಸೂಕ್ತ ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳುವುದು.

- **ಅಪಾಯ ನಿರ್ವಹಣಾ ಸಮಿತಿ (Risk Management Committee):**

5000 ಕೋಟಿ ರೂ. ಅಥವಾ ಹೆಚ್ಚು ಆಸ್ತಿ ಗಾತ್ರ (asset size) ಹೊಂದಿರುವ UCBಗಳಿಗೆ ಈ ಸಮಿತಿ ಕಡ್ಡಾಯ. ಈ ಸಮಿತಿಯು ಹಣಕಾಸು ಅಪಾಯಗಳನ್ನು ಅಂದಾಜು ಮಾಡುವುದು, ಅಪಾಯ ತಗ್ಗಿಸುವ ತಂತ್ರಗಳನ್ನು ಕಾರ್ಯಗತಗೊಳಿಸುತ್ತದೆ ಮತ್ತು ಬ್ಯಾಂಕ್‌ನ ಆರ್ಥಿಕ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವುದು. ಇದರ ಮುಖ್ಯ ಜವಾಬ್ದಾರಿಗಳು: ಸಾಲ, ದ್ರವ್ಯಾಸ್ತಿ, ಮಾರುಕಟ್ಟೆ ಏರುಪೇರುಗಳು ಹಾಗೂ ಕಾರ್ಯಾಚರಣಾ ದುರ್ಬಲತೆಗಳಿಗೆ ಸಂಬಂಧಿಸಿದ ಅಪಾಯಗಳನ್ನು ಗುರುತಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದೆ.

**6) ಸಂಬಂಧಿತ ಟ್ರಸ್ಟ್‌ಗಳು ಮತ್ತು ಸಂಸ್ಥೆಗಳಿಗೆ ದೇಣಿಗೆ ನೀಡುವುದರ ಮೇಲಿನ ನಿಷೇಧ**

ಹಿತಾಸಕ್ತಿ ಸಂಘರ್ಷ ಹಾಗೂ ಹಣಕಾಸಿನ ದುರುಪಯೋಗವನ್ನು ತಡೆಯಲು, ನಿರ್ದೇಶಕರು ಅಥವಾ ಅವರ ಸಂಬಂಧಿಗಳು ಹುದ್ದೆಗಳನ್ನು ಹೊಂದಿರುವ ಟ್ರಸ್ಟ್‌ಗಳು ಅಥವಾ ಸಂಸ್ಥೆಗಳಿಗೆ UCBಗಳು ದೇಣಿಗೆ ನೀಡುವುದು ನಿಷೇಧಿಸಲಾಗಿದೆ. ಈ ನಿರ್ಬಂಧವು 30 ಆಗಸ್ಟ್ 2013ರಿಂದ ಜಾರಿಗೆ ಬಂದಿದೆ. ಇದರ ಉದ್ದೇಶ ಬ್ಯಾಂಕ್ ನಿಧಿಗಳು ಸದಸ್ಯರ ಹಿತಕ್ಕಾಗಿ ಮಾತ್ರ ಬಳಸಲ್ಪಡಬೇಕು, ವೈಯಕ್ತಿಕ ಲಾಭಕ್ಕಾಗಿ ಅಲ್ಲ ಎಂಬುದನ್ನು ಖಚಿತಪಡಿಸುವುದು.

RBI ಮಾರ್ಗಸೂಚಿಗಳ ಪ್ರಕಾರ, ಸಂಬಂಧಿಗಳು (relative) ಎಂಬುದು ತಂದೆ–ತಾಯಿ, ಮಕ್ಕಳು, ಪತ್ನಿ/ಪತಿ ಹಾಗೂ ಸಹೋದರ–ಸಹೋದರಿ ಮುಂತಾದ ನಿರ್ದಿಷ್ಟ ಕುಟುಂಬ ಸಂಬಂಧಗಳನ್ನು ಒಳಗೊಂಡಿರುತ್ತದೆ. ಅದರೊಂದಿಗೆ, ನಿರ್ದೇಶಕರು ತಮಗೆ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ಹಣಕಾಸು ಸಹಾಯ ಅನುಮೋದಿಸಲು ಪ್ರಭಾವ ಬೀರುವಂತಿಲ್ಲ.

ಈ ಕ್ರಮಗಳು UCBಗಳು ಹಣಕಾಸಿನ ವಿವೇಕಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ಅಗ್ರಸ್ಥಾನದಲ್ಲಿ ಇರಿಸುವಂತೆ ಖಚಿತಪಡಿಸುತ್ತವೆ.

**ಪಟ್ಟಣ ಸಹಕಾರಿ ಬ್ಯಾಂಕುಗಳ ಆಡಳಿತ ಮಂಡಲಿ ನಿರ್ದೇಶಕರುಗಳಿಗೆ ಸಂಬಂಧಿಸಿದಂತೆ ಮಧವದಾಸ್ ಸಮಿತಿಯ ಶಿಫಾರಸುಗಳು**

1. **ಶಾಖಾ ಸದಸ್ಯರ ಪ್ರತಿನಿಧಿತ್ವ:** ಪಟ್ಟಣ ಸಹಕಾರಿ ಬ್ಯಾಂಕುಗಳ ಆಡಳಿತದಲ್ಲಿ ಸದಸ್ಯರ ಪಾಲ್ಗೊಳ್ಳುವಿಕೆಯನ್ನು ಸುಧಾರಿಸಲು, ಶಾಖೆಗಳ ಸದಸ್ಯರು ನಿರ್ದೇಶಕರ ಮಂಡಳಿಯಲ್ಲಿ ಪ್ರತಿನಿಧಿಸಬೇಕು.

   ಚುನಾವಣಾ ಉದ್ದೇಶಕ್ಕಾಗಿ ಶಾಖೆಗಳನ್ನು ಕೆಳಗಿನ ವಿಭಾಗಗಳಲ್ಲಿ ವಿಂಗಡಿಸಬಹುದು:

   - ಮುಖ್ಯ ಕಚೇರಿ ಇರುವ ಪಟ್ಟಣದ ವ್ಯಾಪ್ತಿಯೊಳಗಿನ ಶಾಖೆಗಳು, ಹಾಗೂ ಮುಖ್ಯ ಕಚೇರಿ ಇರುವ ಪಟ್ಟಣದಿಂದ 25 ಕಿ.ಮೀ.ವರೆಗೆ ಇರುವ ಶಾಖೆಗಳು.
   - ಅದೇ ಜಿಲ್ಲೆಯಲ್ಲಿ ಆದರೆ ಈ ವ್ಯಾಪ್ತಿಯಿಂದ ಹೊರಗಿನ ಶಾಖೆಗಳು.
   - ಇತರ ರಾಜ್ಯಗಳಲ್ಲಿ ಇರುವ ಅಥವಾ ಜಿಲ್ಲೆಯ ಹೊರಗಿನ ಶಾಖೆಗಳು.

   ಸದಸ್ಯತ್ವವೇ ಪ್ರತಿನಿಧಿತ್ವವನ್ನು ನಿರ್ಧರಿಸಬೇಕು, ಸಾಲದ ಪ್ರಮಾಣ ಅಥವಾ ಠೇವಣಿಗಳ ಮಟ್ಟವಲ್ಲ. ಮುಖ್ಯ ಕಚೇರಿ ಇರುವ ಪಟ್ಟಣಕ್ಕೆ ಮಾತ್ರ ನಿರ್ದಿಷ್ಟ ಸಂಖ್ಯೆಯ ನಿರ್ದೇಶಕ ಮಂಡಳಿಯ ಸ್ಥಾನಗಳನ್ನು ನೀಡಬೇಕು; ಶಾಖೆಗಳ ಪ್ರತಿನಿಧಿತ್ವವನ್ನು ತಾತ್ಕಾಲಿಕವಾಗಿ ಪರ್ಯಾಯ ಆಧಾರದ ಮೇಲೆ ನೀಡಬಹುದು.

2. **ನಿರ್ದೇಶಕರ ಅರ್ಹತಾ ಮಾನದಂಡಗಳು:** ಪಟ್ಟಣ ಸಹಕಾರ ಬ್ಯಾಂಕ್‌ನಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಲು ಅರ್ಹತೆಯನ್ನು ನಿರ್ಧರಿಸುವಲ್ಲಿ ಷೇರುದಾರರ ಪ್ರಮಾಮಾಣವು ಮುಖ್ಯ ಮಾನದಂಡವಾಗಬಾರದು. ನಿರ್ದೇಶಕರನ್ನು ಸದಸ್ಯರಲ್ಲಿ ಅವರು ಹೊಂದಿರುವ ನಂಬಿಕೆ ಮತ್ತು ವಿಶ್ವಾಸದ ಆಧಾರದ ಮೇಲೆ ಆಯ್ಕೆ ಮಾಡಬೇಕು. ಆದ್ದರಿಂದ, ನಿರ್ದೇಶಕ ಮಂಡಳಿಯ ಸದಸ್ಯತ್ವಕ್ಕೆ ಕನಿಷ್ಠ ಷೇರು ಹೂಡಿಕೆಯ ಅರ್ಹತೆಯನ್ನು ಅಗತ್ಯವಿಲ್ಲ ಅಸ್ತಿತ್ವದಲ್ಲಿ ಇರುವ ನಿಬಂಧನೆಯನ್ನು ಮುಂದುವರಿಸಬೇಕು.

   - ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ಕನಿಷ್ಠ ಎರಡು ವರ್ಷಗಳಿಂದ ಬ್ಯಾಂಕ್‌ನ ಸದಸ್ಯರಾಗಿರಬೇಕು.
   - ಜೊತೆಗೆ, ಸ್ಪರ್ಧೆಯ ಮುಂಚಿನ ನಿರಂತರ ಎರಡು ವರ್ಷಗಳ ಅವಧಿಗೆ ಯಾವುದೇ ಖಾತೆಯಲ್ಲಿ ಕನಿಷ್ಠ 500 ಠೇವಣಿ ಇಟ್ಟಿರಬೇಕು.

3. **ಸದಸ್ಯರ ಮತದಾನದ ಅರ್ಹತೆ:** ಪಟ್ಟಣ ಸಹಕಾರ ಬ್ಯಾಂಕ್‌ನ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Licensed to post without Prepayment License No. PMG BG/WPP-384/2023-2025.

ಸದಸ್ಯರು, ಸದಸ್ಯತ್ವ ಪಡೆದ ದಿನಾಂಕದಿಂದ ಕನಿಷ್ಠ 12 ತಿಂಗಳಾದ ನಂತರವೇ ನಿರ್ದೇಶಕ ಮಂಡಳಿಯ ಚುನಾವಣೆಯಲ್ಲಿ ಮತಹಾಕಲು ಅರ್ಹರಾಗಿರಬೇಕು. ಇದರಿಂದಾಗಿ, ಕೆಲವು ಸ್ವಾರ್ಥಿ ವ್ಯಕ್ತಿಗಳ ಒತ್ತಾಯದಿಂದ ಸಾಮಾನ್ಯ ಸಭೆಯ ಮುಂಚೆ ಏಕಕಾಲದಲ್ಲಿ ಹೆಚ್ಚಿನ ಸದಸ್ಯರನ್ನು ಸೇರಿಸಿ, ನಿರ್ದೇಶಕ ಮಂಡಳಿಯ ಸ್ಥಾನಗಳನ್ನು ಹಿಡಿಯುವ ಅಥವಾ ಉತ್ತಮ ನಿರ್ವಹಿತ ಬ್ಯಾಂಕ್‌ಗಳ ಮಂಡಳಿಗಳನ್ನು ಅಸ್ಥಿರಗೊಳಿಸುವ ಸಂದರ್ಭಗಳನ್ನು ತಡೆಗಟ್ಟಬಹುದು.

4. **ಆಡಳಿತ ಮಂಡಲಿಯಲ್ಲಿ ಮಹಿಳಾ ಪ್ರತಿನಿಧಿ:** ಅಸ್ತಿತ್ವದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ನಿರ್ದೇಶಕ ಮಂಡಳಿಯಲ್ಲಿ ಮಹಿಳೆಯರನ್ನು ಸೇರಿಸಬಹುದು. ಅಗತ್ಯವಿದ್ದಲ್ಲಿ, ಮಹಿಳಾ ಸದಸ್ಯರ ಅಗತ್ಯಗಳನ್ನು ಪೂರೈಸಲು ಪ್ರತ್ಯೇಕ ವಿಭಾಗವನ್ನೂ ಸ್ಥಾಪಿಸಬಹುದು. ಮಹಿಳೆಯರಿಗಾಗಿ ಮಾತ್ರ ಪ್ರತ್ಯೇಕ ಬ್ಯಾಂಕ್ ಸ್ಥಾಪನೆಗೆ ಅವಕಾಶ ಇಲ್ಲದ ಸಂದರ್ಭಗಳಲ್ಲಿ, ನಿರ್ದೇಶಕ ಮಂಡಳಿಯಲ್ಲಿ ಕನಿಷ್ಠ ಒಂದು ಸ್ಥಾನವನ್ನು ಮಹಿಳಾ ಷೇರುದಾರರಿಗೆ ಮೀಸಲಿಡಬಹುದು.

5. **ನಿರ್ದೇಶಕ ಮಂಡಳಿ ಸದಸ್ಯರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು:** ನಿರ್ದೇಶಕ ಮಂಡಳಿಯನ್ನು ಪರಿಣಾಮಕಾರಿ ನೀತಿ ಹಾಗೂ ತೀರ್ಮಾನ ತೆಗೆದುಕೊಳ್ಳುವ ಸಂಸ್ಥೆಯನ್ನಾಗಿ ಬೆಳೆಸಲು ನಿಯಮಿತ ಕಾರ್ಯಕ್ರಮಗಳು ಅಗತ್ಯ. ಈ ಕಾರ್ಯಕ್ರಮಗಳ ಭಾಗವಾಗಿ ಸದಸ್ಯರನ್ನು ಕಾರ್ಯಾಗಾರಗಳು, ವಿಚಾರಸಂಕಿರಣಗಳು, ಅಲ್ಪಾವಧಿಯ ದೃಷ್ಟಿಕೋನ ತರಗತಿಗಳು ಹಾಗೂ ಇತರ ಬ್ಯಾಂಕ್‌ಗಳ ಭೇಟಿಗಳಿಗೆ ಒಳಪಡಿಸಬಹುದು. ನಿರ್ದೇಶಕರಿಗೆ ಉಪವಿಧಿಗಳಡಿ ಅವರ ಜವಾಬ್ದಾರಿಗಳನ್ನು ತಿಳಿಸಲು ಸೂಕ್ತ ಕೈಪಿಡಿಗಳನ್ನು ಬ್ಯಾಂಕ್‌ಗಳು ತಾವು ತಯಾರಿಸಬಹುದು ಅಥವಾ ಪಟ್ಟಣ ಸಹಕಾರ ಬ್ಯಾಂಕ್‌ಗಳ ಫೆಡರೇಶನ್‌ಗಳು ಅಥವಾ ಸಂಘಟನೆಗಳ ಮೂಲಕ ಪ್ರಕಟಿಸಬಹುದು. ರಾಷ್ಟ್ರೀಯ ಸಹಕಾರ ಸಂಘವು ಪಟ್ಟಣ ಸಹಕಾರ ಬ್ಯಾಂಕ್‌ಗಳ ನಿರ್ದೇಶಕ ಮಂಡಳಿಗಳನ್ನು ತರಬೇತಿ ನೀಡುವ ಹಾಗೂ ರಾಜ್ಯ ಫೆಡರೇಶನ್‌ಗಳು ಅಥವಾ ಸಂಘಟನೆಗಳು ಮತ್ತು ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕ್‌ಗಳು ಹಾಗೂ ಕ್ರೆಡಿಟ್ ಸೊಸೈಟಿಗಳ ಫೆಡರೇಶನ್‌ಗಳೊಂದಿಗೆ ಸಮನ್ವಯಿತ ಕಾರ್ಯಕ್ರಮಗಳನ್ನು ರೂಪಿಸುವ ಮುಖ್ಯ ಹೊಣೆಗಾರಿಕೆಯನ್ನು ವಹಿಸಬೇಕು.

6. **ಸಿಇಒ ಮಂಡಳಿಯಲ್ಲಿ:** ಪಟ್ಟಣ ಸಹಕಾರ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು (CEO) ವ್ಯವಸ್ಥಾಪಕ ನಿರ್ದೇಶಕರಾಗಿಯೂ ಮತ್ತು ನಿರ್ದೇಶಕ ಮಂಡಳಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಬೇಕು.

7. **ನಿರ್ದೇಶಕ ಮಂಡಳಿಯಲ್ಲಿ ರಾಜ್ಯ ಸರ್ಕಾರದ ನಾಮನಿರ್ದೇಶಿತರು:** ಷೇರು ಬಂಡವಾಳದ ಆಧಾರದ ಮೇಲೆ, ರಾಜ್ಯದೊಂದಿಗೆ ಪಾಲುದಾರಿಕೆಯಲ್ಲಿ ಇರುವ ಪಟ್ಟಣ ಬ್ಯಾಂಕ್‌ಗಳ ನಿರ್ದೇಶಕ ಮಂಡಳಿಗೆ ರಾಜ್ಯ ಸರ್ಕಾರವು ನಾಮನಿರ್ದೇಶಿತ ಪ್ರತಿನಿಧಿಗಳನ್ನು ನೇಮಿಸಬಹುದು. ಇಂತಹ ಪ್ರತಿನಿಧಿಗಳು ಮೂರಕ್ಕಿಂತ ಹೆಚ್ಚು ಅಥವಾ ಒಟ್ಟು ನಿರ್ದೇಶಕರ ಮೂರನೇ ಒಂದು ಭಾಗ, ಇವೆರಡರಲ್ಲಿ ಯಾವುದು ಕಡಿಮೆಯೂ ಆ ಸಂಖ್ಯೆಯನ್ನು ಪಾಲಿಸಬೇಕು. ಜೊತೆಗೆ, ಸಹಕಾರ ಇಲಾಖೆಯ ಅಧಿಕಾರಿಗಳನ್ನು ಅಲ್ಲದೆ, ಸರ್ಕಾರವು ಅರ್ಹತೆಯಿರುವ ಅಧಿಕಾರಿಗಳಲ್ಲದವರನ್ನು ನಿರ್ದೇಶಕರಾಗಿ ನೇಮಿಸಬೇಕು.

## ಸಮಾರೋಪ :

ಭಾರತೀಯ ರಿಸರ್ವ್ ಬ್ಯಾಂಕ್ (RBI) ಪಟ್ಟಣ ಸಹಕಾರ ಬ್ಯಾಂಕ್‌ಗಳನ್ನು ನಿಯಂತ್ರಿಸುತ್ತದೆ, ಇದರಿಂದಾಗಿ ಅವು ಕಟ್ಟುನಿಟ್ಟಾದ ಹಣಕಾಸು ನಿಯಮಗಳನ್ನು ಪಾಲಿಸುತ್ತವೆ, ಅಪಾಯಗಳನ್ನು ಸಮರ್ಥವಾಗಿ ನಿರ್ವಹಿಸುತ್ತವೆ ಮತ್ತು ನೈತಿಕವಾಗಿ ಕಾರ್ಯನಿರ್ವಹಿಸುತ್ತವೆ. ಇದನ್ನು ಸಾಧಿಸಲು, RBI ಪಟ್ಟಣ ಬ್ಯಾಂಕ್‌ಗಳಲ್ಲಿ ಅರ್ಹ ನಿರ್ದೇಶಕರು, ಮಂಡಳಿ ಮಟ್ಟದ ಸಮಿತಿಗಳು ಮತ್ತು ಉತ್ತಮ ನಿರ್ವಹಣೆಗಾಗಿ ಸ್ಪಷ್ಟವಾದ ಪಾತ್ರಗಳು ಇರಬೇಕು ಎಂದು ಒತ್ತಾಯಿಸುತ್ತದೆ.

ಈ ರಚನಾತ್ಮಕ ವ್ಯವಸ್ಥೆಯು ಪಟ್ಟಣ ಸಹಕಾರ ಬ್ಯಾಂಕ್‌ಗಳನ್ನು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು, ಪಾರದರ್ಶಕತೆ ಕಾಪಾಡಲು ಮತ್ತು ಗ್ರಾಹಕರ ವಿಶ್ವಾಸವನ್ನು ಗಳಿಸಲು ಸಹಕಾರಿಸುತ್ತದೆ. ಜವಾಬ್ದಾರಿತನ ಮತ್ತು ವೃತ್ತಿಪರ ನಿರ್ವಹಣೆಯನ್ನು ಖಚಿತಪಡಿಸುವ ಮೂಲಕ RBI ನಿಯಮಗಳು ಠೇವಣಿದಾರರ ಹಣವನ್ನು ರಕ್ಷಿಸುತ್ತವೆ ಹಾಗೂ ಸಹಕಾರ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಪಡಿಸುತ್ತವೆ, ಆರ್ಥಿಕ ಶಿಸ್ತು ಮತ್ತು ಸ್ಥಿರತೆಯನ್ನು ಉತ್ತೇಜಿಸುತ್ತವೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003